**ಕನ್ನಡ ಭಾಷಾ ಪಠ್ಯ**

# ಗಣಕ ಸೌರಭ

**ಬಿ.ಸಿ.ಎ.**

**ನಾಲ್ಕನೇ ಸೆಮಿಸ್ಟರ್**


ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಂಪಾದಕರು

**ಪ್ರೊ. ಉಮೇಶ. ಹೆಚ್. ಜಿ**

**ಪ್ರೊ. ಗಾಯತ್ರಿ ಎಸ್. ಜಿ**

**ಪ್ರೊ. ಸೌಮ್ಯ. ಎಸ್**



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA - GANAKA SOURABHA:
A Prescribed Text Book for B.C.A. Degree Course (Third and Fourth Semester);

Chief Editor: **Prof. Prashanth G. Nayak** (Professor of Kannada & Director, Kannada Bharathi, Kuvempu University, Shankaraghatta, B.R. Project. Shimoga Dist.)

Edited BY
**Prof. Umesha H. G**
**Prof. Gayathri S. G**
**Prof. Sowmya S**

Publishd by : Bengaluru City University, BENGALURU

© : Bengaluru City University,

First print : 2022

Copies :

Pages :

**ಸಲಹಾ ಸಮಿತಿ:**

**ಡಾ. ಕೆ. ವೈ. ನಾರಾಯಣಸ್ವಾಮಿ**

**ಡಾ. ಎಂ. ಎಸ್. ಆಶಾದೇವಿ**

**ಸಂಯೋಜಕರು**

**ಡಾ. ಬೆಳಕೆರೆ ಲಿಂಗರಾಜಯ್ಯ**

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020-2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಲಿಂಗರಾಜಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಪ್ರಶಾಂತ ಜಿ. ನಾಯಕ

ಪ್ರಾಧ್ಯಾಪಕರು

# ಪರಿವಿಡಿ

## 1 ನಾಗರಿಕತೆ


1.1 ಸೀತೆಯ ಗೆದ್ದನು ಶ್ರೀರಾಮ –ಭಾಗವಂತಿಕೆ ಪದಗಳು 003

(ಸಂಗ್ರಹ- ಹಿರಿಯಣ್ಣ ಮೇಟಿಕೆರೆ)

1.2 ಮೊಬೈಲ್ ಬೆನ್ನೇರಿ ಬಂತು! - ಈರಪ್ಪ ಎಂ.ಕಂಬಳಿ 008

1.3 ಒಲಿಂಪಿಕ್ಸ್ ರೋಮಾಂಚನ - ಕೆ.ಪುಟ್ಟಸ್ವಾಮಿ 017

1.4( ಓದುಪಠ್ಯ) ಕಾಡು ಮನುಷ್ಯನ ಕರಾರುಗಳು -ಪೂರ್ಣಚಂದ್ರ ತೇಜಸ್ವಿ 022


## 2 ಅಭಿವೃದ್ಧಿ


2. 1 ಅಮ್ಮನ ಗುಡ್ಡ - ಚ. ಸರ್ವಮಂಗಳ 029

2. 2 ಮಾನವ ನಿರ್ಮಿತ ಮಹಾಸಮಸ್ಯೆಗಳು -ನಾಗೇಶ ಹೆಗಡೆ 037

2. 3 ಬಡತನ ನಿರ್ಮೂಲನಕ್ಕೆ ಸಂಪತ್ತಿನ ಸೃಷ್ಟಿ ಅಗತ್ಯ - ಸುಧಾಮೂರ್ತಿ 043

2. 4 (ಓದುಪಠ್ಯ) ಬೆಂಗಳೂರು ಬಹುರೂಪಿ ನಗರವಾಗಿ

ಬೆಳೆದು ನಿಂತ ಕಥೆ – ಸಿ.ಆರ್.ಸಿಂಹ 049


## 3 ಕರುಣೆ


3. 1 ಮಳೆರಾಜನ ಹಾಡು - ಜನಪದ ಗೀತೆ 057

3. 2 ಮನುವಿನ ರಾಣಿ - ಕೊಡಗಿನ ಗೌರಮ್ಮ 060

3. 3 ಒಲುಮೆಹೊನಲ ತಡೆಗಳು - ಪು.ತಿ.ನ 068

3. 4 (ಓದುಪಠ್ಯ)ಹಾಗಾದರೆ ಮಾರಿಬಿಡಿ - ಎಂ.ಆರ್. ಕಮಲ 073


**ಘಟಕ 4 ಸಂಕೀರ್ಣ**


4. 1 ರೆಸಿಪಿ -ಟಿ.ಪಿ. ಕೈಲಾಸಂ 078

4. 2 ಧಾರವಾಡದ ಪಡ್ಡೆ ದಿನಗಳು -ರಾಜೇಂದ್ರ ಚೆನ್ನಿ 079

4. 3ಯಾರು ಅರಿಯದ ವೀರ -ಕುವೆಂಪು 093

4. 4 (ಓದುಪಠ್ಯ) ಉಷಾ ಮತ್ತು ರುದ್ರರ

ಪ್ರೇಮ ಪ್ರಕರಣ ( ಸಂಕ್ರಾಂತಿ ನಾಟಕದ ಆಯ್ದ ಭಾಗ) - ಪಿ. ಲಂಕೇಶ್ 104

**1 ನಾಗರಿಕತೆ**

1.1 ಸೀತೆಯ ಗೆದ್ದನು ಶ್ರೀರಾಮ –ಭಾಗವಂತಿಕೆ ಪದಗಳು

(ಸಂಗ್ರಹ- ಹಿರಿಯಣ್ಣ ಮೇಟಿಕೆರೆ)

1.2 ಮೊಬೈಲ್ ಬೆನ್ನೇರಿ ಬಂತು! - ಈರಪ್ಪ ಎಂ.ಕಂಬಳಿ

1.3 ಒಲಿಂಪಿಕ್ಸ್ ರೋಮಾಂಚನ - ಕೆ.ಪುಟ್ಟಸ್ವಾಮಿ

1.4( ಓದುಪಠ್ಯ) ಕಾಡು ಮನುಷ್ಯನ ಕರಾರುಗಳು -ಪೂರ್ಣಚಂದ್ರ ತೇಜಸ್ವಿ

# ನಾಗರಿಕತೆ

## ಆಶಯ

ನಾಗರಿಕತೆಯನ್ನು ವ್ಯಾಖ್ಯಾನಿಸುವುದು ಜಟಿಲ. ಆಯಾಕಾಲಕ್ಕೆ ಹೊಸತು ಬಂದಾಗ ನಾಗರಿಕತೆ ಎನಿಸಿಕೊಳ್ಳುತ್ತದೆ. ಆದಿಮಾನವನ ಕಾಲದಲ್ಲಿ ಕಲ್ಲಿನಿಂದ ಬೆಂಕಿಯ ಸೃಷ್ಟಿಯಾದಾಗ ಅದು ಆ ಕಾಲದ ಆಧುನಿಕತೆಯ ಆವಿಷ್ಕಾರ ಎನಿಸಿತು. ರಾಮಾಯಣ, ಮಹಾಭರತ ಇತ್ಯಾದಿ ಕಾಲದಿಂದ ಕಾಲಕ್ಕೆ ಜೈವಿಕ ವಿಕಾಸದ ಜೊತೆಗೆ ಬೌದ್ಧಿಕ ವಿಕಾಸವು ಸಂಭವಿಸುತ್ತಾ ಬಂದಿದೆ. ಮನುಷ್ಯನ ಜೀವನ ಬದಲಾಗುತ್ತಿದ್ದಂತೆ ಅದು ಅವನ ಬದುಕು, ಮನರಂಜನೆ, ಸಾಹಿತ್ಯ, ಕಲೆ, ಕ್ರೀಡೆ, ಸಂಪರ್ಕ ಸಾಧನ ಇತ್ಯಾದಿ ಎಲ್ಲದರ ಮೇಲೂ ಪ್ರಭಾವ ಬೀರಿ ಹೊಸ–ಹೊಸ ಸಂಶೋಧನೆಗಳು ನಡೆದಿವೆ. ಕ್ರೀಡೆ ಕೇವಲ ದೈಹಿಕ ಕಸರತ್ತಲ್ಲ, ಮನುಷ್ಯನ ಸಣ್ಣತನ, ಅಸೂಯೆ, ಅಹಂಕಾರ, ದ್ವೇಷ, ಈರ್ಷ್ಯೆಗಳನ್ನು ಕರಗಿಸುತ್ತಾ.... ಹೋರಾಟಭಾವ, ಸಂಕಲ್ಪ, ಸಿದ್ಧಿಗಳನ್ನು ನೀಡುತ್ತಾ.... ಗೆಲುವಿನ ಒಂದೇ ಗುರಿಗಾಗಿ ಓಡುತ್ತಾ, ಹಾರುತ್ತಾ, ಕುಣಿಯುತ್ತಾ, ಗೆಲ್ಲುವ.. ಗೆದ್ದವನನ್ನು ಅಭಿನಂದಿಸುವ,ಸೋತವನನ್ನು ಅಪ್ಪಿಕೊಳ್ಳುವ ಮಹತ್ವದ ಮಾನವತಾ ವೇದಿಕೆ.

ನಾಗರಿಕತೆಗೂ ತಂತ್ರಜ್ಞಾನಕ್ಕೂ ಅವಿನಾಭಾವ ಸಂಬಂಧವಿದೆ. ಎತ್ತಿನಗಾಡಿಯ ನಂತರ ಸೈಕಲ್ ಮೋಟಾರು ವಾಹನ ಬಂದಾಗ ಅದು ಸಂಪರ್ಕದ ಆಧುನಿಕ ಸಾಧನ ಎನಿಸಿತು. ಕಂದೀಲು ಹೋಗಿ ವಿದ್ಯುತ್ ದೀಪದ ಬೆಳಕೂ ಬಂದಿದ್ದೂ ಹಾಗೆಯೇ. ಶಿಕ್ಷಣವು ಇದಕ್ಕೆ ಹೊರತಲ್ಲ. ಗುರುಕುಲ ಶಿಕ್ಷಣ ಸಂಪ್ರದಾಯದಿಂದ ನವೀನ ಶಿಕ್ಷಣ ಪದ್ಧತಿಯವರೆಗೆ ಇದನ್ನು ಗಮನಿಸಬಹುದು. ಮನುಷ್ಯ ನಾಗರೀಕತೆಯನ್ನು ಒಳಗೊಳ್ಳುತ್ತಿದ್ದಂತೆ ಪರಿಸರ ಮತ್ತು ಅವನ ಸಂದರ್ಭ ಸಂಬಂಧದಲ್ಲಿ ಆಗಿರುವ ಬದಲಾವಣೆಗಳನ್ನು ಇಲ್ಲಿ ಗುರುತಿಸಬಹುದು.

ನಾಗರಿಕತೆ ಎಂದರೆ ಕೇವಲ ಪಾಶ್ಚಾತ್ಯರನ್ನು ಅನುಸರಿಸುವುದಲ್ಲ. ಅದು ಎಲ್ಲಾ ಸಮಾಜಗಳಲ್ಲಿಯೂ ಕಾಲದಿಂದ ಕಾಲಕ್ಕೆ ಸರ್ವ ಕ್ಷೇತ್ರಗಳಲ್ಲಿಯೂ ಕಂಡುಬರುವ ಬದಲಾವಣೆಯಾಗಿದೆ. ನಾಗರೀಕತೆ ಎಂದರೆ ಅದೊಂದು ಮನಸ್ಥಿತಿ. ಕೇವಲ ಉಡುಪು, ಆಹಾರ ಪದ್ಧತಿ, ಕೇಶವಿನ್ಯಾಸ ಮುಂತಾದ ಬಾಹ್ಯ ಬದಲಾವಣೆಗಳು ನಾಗರಿಕತೆಯಲ್ಲ. ಸಂಕುಚಿತ ಭಾವನೆಯನ್ನು ಬಿಟ್ಟು ವಿಶಾಲ ಮನೋಭಾವದಿಂದ ಬದುಕು ಮತ್ತು ಸಮಾಜಿಕ ವಿಕಸನವನ್ನು ಬಯಸುವುದು ನಾಗರಿಕತೆ. ಮನುಷ್ಯನ ಜೀವನಶೈಲಿ ಮತ್ತು ಯೋಚನಾಲಹರಿಯನ್ನು ಬದಲಿಸುವುದು ನಾಗರಿಕತೆ.

# 1.1 ಸೀತೆಯ ಗೆದ್ದನು ಶ್ರೀರಾಮ

– ಭಾಗವಂತಿಕೆ ಪದಗಳು

(ಸಂಗ್ರಹ- ಹಿರಿಯಣ್ಣ ಮೇಟಿಕೆರೆ)

ಕೇಳಿರಿ ದಶರಥ ರಾಮರ ಚರಿತೆಯ
ಲಾಲಿಸಿ ಕೇಳಿರಿ ಜನರೆಲ್ಲಾ॥ ಪಲ್ಲವಿ॥

ಮಿಥಿಲಾಪುರದಲಿ ಜನಕನು ತಾನು
ಧರೆಯೊಳಗೆಸಗಿದ ಸ್ವಯಂವರವ
ಧರೆಯೊಳಗುಳ್ಳ ದೊರೆಗಳ ಕರೆಸಿ
ಧನುವ ನಿಲ್ಲಿಸಿದ ಧರೆಯೊಳಗೆ

ಕೌಶಿಕ ಮುನಿ ಕರೆತಂದರು ಸಹವಾಗಿ
ರಾಮ ಲಕ್ಷ್ಮಣರು ಸಹಿತವಾಗಿ
ಬಂದರು ಜನಕನ ಪುರಿಗವರಾಗ
ನಿಂದರು ಸಿಂಹಾ ಪೀಠದಲಿ

ರಾಮ ಸಂಗ್ರಾಮ ನಿಸ್ಸೀಮ ರಾಮ
ಕೋಮಲ ಕಾಯ ಶ್ರೀರಾಮ
ಕಾಮಧೇನು ದಶರಥ ರಾಮ
ಕೌಸಲ್ಯಾ ರತ್ನಾಕರ ರಾಮ

ಕೋಟಿ ಕಂದರ್ಪ ತೇಜನೆ ರಾಮ
ಅಸುರದಲ್ಲಣ ಶ್ರೀರಾಮ
ಎಸೆವಾ ಬಿಲ್ಲು ಬತ್ತಳೆ ಬೇಕು
ಶಶಿ ಮುಖಿ ಸೀತೆ ನಿಂದಿಹಳು

ಅಂಗ ವಂಗ ಕಳಿಂಗನು ಬಂದ
ಸಿಂಗಾಳ ಬರ್ಬರ ತಾಬಂದ
ಕೊಂಕಣ ದೇಶದ ಭೂಪರು ಬಂದರು
ಬಿಂಕವ ಮುರಿವರು ಜಗದೊಳಗೆ

ನೇಪಾಳನು ಮಗಧನು ಬಂದ
ಕೋವಿದ ರಾವಣ ತಾ ಬಂದ
ಅಸುರರು ಬಂದರೆ ಬಿಲ್ಲನೆತ್ತುವರೆ
ಚಂದ್ರವದನೆ ಸೀತೆ ತರಬೇಕೆಂದು

ಬಿಂಕದ ಅಸುರರ ಕೂಡಿಕೊಂಡು
ಕುಂಭಕರ್ಣ ತಾ ನಲಿಯುತ ಬಂದ
ಧನುವು ಬಲ್ಲೆಯಾ ಎನ್ನಯ ಬಗೆಯ
ಜನಕಸುತೆಯ ಬಿಡುವವನಲ್ಲ

ಬಂದರು ಭೂಮಿಪರು ತಂಡ ತಂಡದಿಂದ
ಬಂದು ನಿಂದರು ಬಿಲ್ಲಿನ ಬಳಿಯಲಿ
ಅಂದು ಜಾನಕಿ ಶೃಂಗಾರವಾಗಿ
ಬಂದಳು ಭದ್ರಾ ಮಂಟಪಕೆ

ಕಾಮನ ಅಂಗೈ ಅರಗಿಣಿಯಂತೆ
ಕೋಮಲೆಯರ ಸಂಗಡಲಾಗ
ಮೋಹವ ಬೀರುತ ಲಕ್ಷ್ಮೀ ಜನರಿಗೆಲ್ಲ
ಏರಿದಳಂದಣವಾ ಸೀತೆ

ಧನುವಿಗೆ ಪೂಜೆಯ ಮಾಡಿದ ಜನಕನು
ಕರೆದು ಪೇಳಿದನು ದೊರೆಗಳಿಗೆ
ನಾರಿ ಜಾನಕಿ ಬಂದು ನಿಂದಿಹಳು
ಬೇಗನೆ ಎತ್ತಿರಿ ಧನುವನ್ನು

ಚಪ್ಪನ್ನ ದೇಶವನಾಳುವ ದೊರೆಗಳು
ತಪ್ಪದೆ ಬಂದರು  ಬಿಲ್ಲನೆತ್ತುವರೆ
ಆರಾರು ಬಂದರೂ ಅಳವಡ್ಡ ಧನುವು
ಮಾನಭಂಗವಾಗಿ ತಿರುಗಿದರೆಲ್ಲ

ರಾವಣ ಕುಂಭಕರ್ಣ ಕಂಡು ಮುಂಡಾದ
ಮೀರಿದ ಮಗಧವ ಓಡೇಹೋದಾ
ಭೋರನೆ ಅಸುರರು ತಲೆ ಮುಸುಕಿನಲಿ
ಸೇರಿದರು ತಮ್ಮ ಪಾಳ್ಯಗಳ

ರಾಮರ ಕರೆದನು ಕೌಶಿಕಮುನಿಯು
ನಾರಿಯ ತರಬೇಕೆನುತಾ  ಪೇಳಲು
ನಾರಿ ಜಾನಕಿ ನೋಡು ಲಕ್ಷ್ಮಣನೆಂದು
ಶ್ರೀರಾಮರೆದ್ದರು ಹರುಷದಲಿ

ದೇವಿಯರ ಪಾದವ ಕಂಡು
ದೇವನಿಗೇಳಿದ ಲಕ್ಷ್ಮಣನು
ದೇವಿಯ ರೂಪವ  ವರ್ಣಿಸಲಳವಲ್ಲ
ದೇವಾ ನೀವೆತ್ತಿರಿ ಧನುವನ್ನು

ಶ್ರೀರಾಮರೆದ್ದರು ಜಯಜಯವೆನುತಾ
ದೇವದುಂದುಭಿ ಮೊಳಗಿದವು
ದೇವತೆಗಳು ಪೂ ಮಳೆಗರೆಯುತ್ತಿರೆ
ಶ್ರೀರಾಮರೆತ್ತಿದರು ಧನುವನ್ನು

ನಾರಿ ಜಾನಕಿ ಮಾಲೆಯ ಹಾಕಲು
ಹೇಮದ ಅರುಳೋಲೆ ಪೂಜಿಸಿದ
ರಾಮರ ಪಾದವ ಪೂಜಿಸಿ ಜನಕನು
ಕರೆತಂದನು ಹೊನ್ನಂದಣದಿ

ದಶರಥಗೋಲೆಯ ಬರೆದನು ಜನಕನು
ಸೀತೆಯ ಗೆದ್ದನು ಶ್ರೀರಾಮ
ಶೀಘ್ರದಿಂದಲೇ ಮದುವೆಗೆ ಬನ್ನಿ
ಭರತ ಶತ್ರುಘ್ನರ ಕರೆತನ್ನಿ

ಎಂದ ಮಾತನು ದಶರಥ ಕೇಳಿ
ಕೊಡಿಸಿದನವರಿಗೆ ಉಡುಗೊರೆಯ
ತಾಳಿದ ಹರುಷವ ಪೇಳಿದ ಸತಿಗೆ
ಬೇಗನೆ ಜನಕನ ಪುರಿಗೆ ಬಂದ

ಎದುರುಗೊಂಡನು ದಶರಥರಾಯನ
ಕರೆತಂದನು ಜನಕನು ಬೇಗ।
ದುರಧೀರ ರಾಮರು ಬಂದು
ತಂದೆಯ ಚರಣಕ್ಕೆರಗಿದರು

ಬಂದವರಿಗೆ ಬಿಡಾರವನಿತ್ತು
ಚಂದದಿಂದುಪಚರಿಸಿದ ಜನಕ
ನಾನಾ ದೇಶದ ದೊರೆಗಳ ಕರೆಸಿ,
ಠೀವಿಸಿ ಮದುವೆ ಮಂಟಪವ

ರಾಮ ಜಾನಕಿ ಶೃಂಗಾರವಾಗಿ
ಹೇಮ ಖಚಿತ ಹಸೆಗೆ ಬರಲು
ಕೋಮಲ ಕಾಯ ರಾಮಚಂದ್ರಗೆ
ಧಾರೆ ಎರೆದನು ಜನಕರಾಯಾ

ವೀರ ಲಕ್ಷ್ಮಣಗೆ ಊರ್ಮಿಳಯನು ಕೊಟ್ಟು
ಭಾರತಗೆ ಮಾಂಡವಿಯನು ಕೊಟ್ಟು
ಶತ್ರುಘ್ನಗೆ ಶ್ರುತಕೀರ್ತಿಯ ಕೊಟ್ಟು
ಧಾರೆ ಎರೆದನು ಜನಕರಾಯನು

ಬಂದ ಭುಸುರರಿಗೆ ಕೊಟ್ಟು ದಕ್ಷಿಣೆಯ
ದೊರೆಗಳಿಗುಡುಗೊರೆ ಕಳುಹಿದನು
ನಾನಾ ವಿಧದಿಂ ತಣಿಸಿದನೆಲ್ಲರ
ದಶರಥನು ಸಂತೋಷದಲಿ

# 1.2 ಮೊಬೈಲ್ ಬೆನ್ನೇರಿ ಬಂತು!

– ಈರಪ್ಪ ಎಂ. ಕಂಬಳಿ

ನಾಗರಿಕತೆಯೆಂದರೇನೇ ಚಲನಶೀಲವಾದದ್ದು. ಇನ್ನು ಅದಕ್ಕೆ ಎಲ್ಲಿಲ್ಲದ ವೇಗ ಬೇರೆ ಬಂದರೆ, ಅದನ್ನು ಹಿಡಿದು ನಿಲ್ಲಿಸುವವರುಂಟೇ? 'ಮಾಹಿತಿ ತಂತ್ರಜ್ಞಾನ'ದ ಬೆನ್ನು ಹತ್ತಿದ್ದರ ಪರಿಣಾಮವಾಗಿ ಈಗ ಪ್ರಪಂಚವೇ ಒಂದು ಪುಟ್ಟ ಮನೆಯಂತಾಗಿ ಹೋಗಿದೆ. ನಮ್ಮ ಬಾಲ್ಯದ ಅಂಗಳಕ್ಕೆ ಹಿಂಜಿಗಿದು ನಿಂತು ನೋಡಿದಾಗ ಇದರ ವಿರಾಟ್ ರೂಪದ ದರ್ಶನವಾಗುತ್ತದೆ. ಸತ್(ಶುಭ) ಸಮಾಚಾರವಾಗಲಿ ಸತ್ತ ಸುದ್ದಿಗಳನ್ನಾಗಲಿ ಮುಟ್ಟಿಸಲು ಆಗ ತಾರು – ತಂತಿಗಳನ್ನೇ ಅವಲಂಬಿಸಿದ್ದ ಕಾಲ. ಅದರಲ್ಲೂ ಅನಿರ್ವಾಹವಾಗಿ, ಸತ್ತ ವಾರ್ತೆಯನ್ನೇ ಹೆಚ್ಚಾಗಿ ಹೊತ್ತು ತರುತ್ತಿದ್ದ ತಂತಿ ಸಂದೇಶಗಳೆಂದರೇನೇ ಜನ ದಿಗಿಲು ಬೀಳುತ್ತಿದ್ದ ದಿನಗಳವು. ಅಂಚೆಯ ಅಣ್ಣ ಬಂದು 'ತಾರು ಬಂದಿದೆ ಕೊಳ್ಳಿರೊ' ಎಂದು ಹೇಳುವಾಗಿನ ಆತನ ಮಾತು ಬಾಯಲ್ಲಿರುವಾಗಲೇ 'ತಾರು' ಶಬ್ದಕ್ಕೇ ಹಾರು ಹೊಡೆದಂತೆ ಎದೆ ಒಡೆದುಕೊಂಡು ಬೋರಾಡಿ ಅಳುವವರನ್ನು ಕಂಡಿದ್ದಿದೆ.

ಅಕಸ್ಮಾತ್ ಫೋನ್ ಇದ್ದ ಊರಾದರೆ, ಅಂಚೆ ಕಚೇರಿಗೆ ಧಾವಿಸಿ ಅದು ಅವೇಳೆಯಾಗಿದ್ದರೂ ಸರಿ, ಮಲಗಿದ್ದ ಪೋಸ್ಟ್ ಮಾಸ್ತರನನ್ನು ಮುಲಾಜಿಲ್ಲದೆ ಎಬ್ಬಿಸಿ, ಟ್ರನ್ ಕಾಲ್ ಬುಕ್ ಮಾಡಬೇಕು. ಉತ್ತರ ಕರ್ನಾಟಕದ ಕಡೆ ಅದನ್ನು 'ಫೋನು ಹಚ್ಚುವುದು ಅನ್ನುತ್ತಾರೆ ಈಗಲೂ. ಬಲು ಕಷ್ಟಪಟ್ಟು ಸಂಪರ್ಕ ಸಾಧಿಸಿ ಪರಸ್ಪರರು ಕಿವಿ–ಬಾಯಿಗಳಿಗೆ ಹಚ್ಚಿಕೊಳ್ಳುವ ರೇಜಿಗೆಯ ಕೆಲಸವಾದುದರಿಂದಾಗಿಯೇ ಆಗ ಅದನ್ನು ಹಾಗೆ ಕರೆದಿರಬೇಕು.ಅದೆಂಥಾ ಪ್ರಯಾಸದ ಕೆಲಸವೆಂದರೆ, ಪೋಸ್ಟ್ ಮಾಸ್ತರು ಆ ಕಾಲದ ಫೋನಿನ ಹ್ಯಾಂಡಲ್ ತಿರುಗಿಸಿ ಮಧ್ಯದ ಇನ್ನೊಂದು ಊರಿನ ಅಂಚೆ ಕಛೇರಿಗೆ ಹೇಳಿ ಆ ಮೂಲಕ ತಮಗೆ ಬೇಕಾದ ಮತ್ತೊಂದು ಊರಿನ ಸಂಪರ್ಕ ಕೊಡುವಂತೆ ಹೇಳಿ, ಲೈನ್ ಸರಿಯಿದ್ದರೆ ತಾಸೆರಡು ತಾಸಿನೊಳಗಾಗಿ ಬೇಕಾದ ಊರಿನ ಫೋನ್ ಸಿಕ್ಕಿದಾಗ ಪ್ರಪಂಚವನ್ನೇ ಗೆದ್ದಷ್ಟು ಖುಷಿಯಾಗುತ್ತಿತ್ತು.

ಆ ಊರಿನ ಮಾಸ್ತರನೋ ಕಣ್ಣಿಗೆ ಬಿದ್ದ ಯಾವನನ್ನಾದರು ಸೈ. ನಿಂತ ಕಾಲ ಮೇಲೇ ಓಡಿಸುತ್ತಾನೆ–ಸಂಬಂಧಪಟ್ಟವರನ್ನು ಕರೆದು ತರಲು. ಫೋನ್ ಅಂದಾಕ್ಷಣ ಆ ಕಡೆಯಿಂದ ಅವರೂ ಅಷ್ಟೆ. ಎದ್ದು ಬಿದ್ದು ಓಡಿ ಬಂದು ಪೋಸ್ಟ್ ಮಾಸ್ತರನ ಉಸ್ತುವಾರಿಯಲ್ಲಿ ರಿಸೀವರನ್ನು ಕಿವಿ – ಬಾಯಿಗೆ ಒತ್ತಿ ಹಿಡಿದುಕೊಂಡು 'ಹಲೋ ಹಲೋ. ನಾನಧಿ ದೊಡ್ಡಬಸಪ್ಪ ಮಾತಾಡಾಕ ಹತ್ತೀನಿ. ನೀವು ಹೇಳೂದು ಕೇಳಿಸವಲ್ಲದು ಓಟು ಜೋರಾಗಿ

ಮಾತಾಡ್ರೀ' ಎಂದು ಆ ಕಡೆಯಿಂದ ಗಟ್ಟಿಯಾಗಿ ಅರಚುತ್ತಿರಬೇಕು. ಏಳೆಂಟು ಹರದಾರಿ ದೂರದ ಊರಿಂದ ಮಾತನಾಡುವುದೆಂದರೆ ಸುಮ್ಮನೇ ಏನು? ಅಸ್ಪಷ್ಟವಾಗಿ ಕೇಳಿಸುತ್ತದೆಂದಾಗ, ಪೋಸ್ಟ್ ಮಾಸ್ತರ್ ಮಧ್ಯ ಪ್ರವೇಶ ಮಾಡಿ ಪುನಃ ದೂರವಾಣಿ ಹ್ಯಾಂಡಲ್ ಹೊಡೆದು, ಇನ್ನೇನೋ ಅದಕ್ಕೆ ಉಪಚಾರ ಮಾಡಿ ಆ ಕಡೆಯವರಿಗೆ ಗಟ್ಟಿಯಾಗಿ ಮಾತಾಡುವಂತೆ ಗದರಿ ಮತ್ತೇ ಫೋನನ್ನು ಈ ಕಡೆಯ ಪಾರ್ಟಿಗಳ ಕೈಗೆ ಕೊಡುತ್ತಾನೆ.

ಆ ದೃಶ್ಯ ಹೇಗಿರುತ್ತದೆಂದರೆ, ಸಾವಿನ ಮನೆಯಲ್ಲಿ, ಈಗಲೋ ಆಗಲೋ ಜೀವ ಹಾರಿ ಹೋಗಲಿರುವ, ಹಾಸಿಗೆಗಂಟಿಕೊಂಡಿದ್ದ ವ್ಯಕ್ತಿಯ ಕಿವಿಗೆ ಬಾಯಿ ಇಟ್ಟು 'ನಾನು ಬಂದೇನಿ ನಿಮ್ಮ ಗುರುಬಸ್ಯಾ, ಗುರ್ತಾ ಹತ್ತವಲ್ಲದಾ? ಖೂನ ಸಿಗವಲ್ಲದಾ...?' ಎಂದು ಇಡೀ ಊರಿಗೇ ಕೇಳುವಷ್ಟು ಗಟ್ಟಿಯಾಗಿ ಹಾವಭಾವಯುಕ್ತವಾಗಿ ಕಿರಿಚುತ್ತಿರುತ್ತಾರೆ. ಆದರೆ, 'ನೀವು ಬಂದದ್ದು ಟೂ ಲೇಟ್' ಅನ್ನುವಂತೆ ಮಲಗಿದ್ದಾತ ಆಗಲೇ ಈ ಲೋಕದ ತಂತಿ ಕಡಿದುಕೊಂಡವನಂತೆ ಶೂನ್ಯ ದತ್ತ ದೃಷ್ಟಿನೆಟ್ಟು ನಿರ್ವಿಕಾರ ಭಾವ ತಳೆದಿರುತ್ತಾನೆ. ಸಂಬಂಧ ಅನ್ನುವುದು ಬಲು ದೊಡ್ಡದಲ್ಲವೆ? ನೆಟ್ಟಗೆ ಇದ್ದಾಗಲೇ ಬಂದು ಮಾತನಾಡಿಸದವರೆಲ್ಲ, ಕೊನೆಯ ಗಳಿಗೆಯಲ್ಲಿ ಬಂದು ಹೀಗೆ ಸುಮ್ಮನೆ ಜೀವ ಹಿಂಡುತ್ತಿರುತ್ತಾರೆ. ಮಾತನಾಡಿಸುವ ಆ ವಿಫಲ ಯತ್ನವನ್ನು ಸುತ್ತ ನೆರೆದಿದ್ದ ಮಕ್ಕಳು ಮರಿಗಳೆಲ್ಲ ಅದೂ ಒಂದು ಪ್ರಹಸನವೆನ್ನುವಂತೆ ತದೇಕಚಿತ್ತದಿಂದ ನೋಡುತ್ತಿರುತ್ತವೆ. ಅದೇ ಅವಸ್ಥೆ, ಆಗಿನ ಹಳೆಯ ಅಂಚೆ ಕಛೇರಿಯ ಆ ಫೋನಿನಲ್ಲಿ ಮಾತನಾಡುವಾಗ ಅನುಭವಕ್ಕೆ ಬರುತ್ತಿತ್ತು. ಅದು ಕೂಡ ಒಂದು ಕಾಲದ ಮಾಹಿತಿ ತಂತ್ರಜ್ಞಾನವೇ ಅಲ್ಲವೆ? ಈಗ ಹಾಗಿಲ್ಲ. ನಡು ರಸ್ತೆಯಲ್ಲಿ ಸಂಚರಿಸುವಾಗಲೇ ಕಿಸೆಯಲ್ಲಿ ಕಿಂಕಿಣಿಸಿದ ಮೊಬೈಲು ಫೋನು. ಕ್ಷಣಾರ್ಧದಲ್ಲಿ ಮಾಹಿತಿ ಸಿಕ್ಕು ಸಂಪರ್ಕ ಸಾಧ್ಯವಾಗುತ್ತದೆ. ವಾಹ್, ಎಂಥ ಪವಾಡ! ಪ್ರಪಂಚವೇ ಒಂದು ಗ್ಲೋಬಲ್ ವಿಲೇಜ್!!

ವಯಸ್ಸಾದ ಮುದುಕರಂತೆ ಮನೆಯ ಮೂಲೆಯಲ್ಲಿ ಕಾಯಂ ಆಗಿ ಒಂದೇ ಕಡೆ ಕುಕ್ಕರಬಡಿದಿರುವ ಆ ಹಳೆಯ ಲ್ಯಾಂಡುಫೋನು – ದೂರವಾಣಿ ಒಮ್ಮೊಮ್ಮೆ ದೂರು ಕೊಡುವ ಯಾ ದೂರು ತರುವ 'ದೂರವಾಣಿ'.ಕೆಲವೊಮ್ಮೆ ಅನಪೇಕ್ಷಿತ ಕರೆಗಳನ್ನು ಉಲಿಯುವ 'ದುರ್ವಾಣಿ'ಯೂ ಆಗಬಲ್ಲುದು. ಈ ಮಾತು ನಮ್ಮ ಸಂಚಾರೀ ಫೋನಿಗೆ ಅನ್ವಯಿಸದು. ಕಾಲ ಬದಲಾಗಿದೆ. ಮಾಹಿತಿ ತಂತ್ರಜ್ಞಾನದ ತೆಕ್ಕೆಯಲ್ಲಿ 'ಸಿಕ್ಕು' ಬಿದ್ದ ಮನುಷ್ಯನಿಗೀಗ ಬೆರಳ ತುದಿಯಲ್ಲಿಯೇ ಪ್ರಪಂಚ ಎಟಕುತ್ತದೆ. ಆದರೆ, ಮಾನಸಿಕ ದೂರ ಅನುಭವಿಸುತ್ತ ತನಗರಿವಿಲ್ಲದೆ ಒಂಟಿಯಾಗುತ್ತ ಹೋಗುತ್ತಿದ್ದಾನೆ. ಫೋನಿನಿಂದಾಗಿ ಪತ್ರ ಬರೆಯುವ/ಖುದ್ದಾಗಿ ಭೇಟಿಯಾಗುವ ಪ್ರಸಂಗಗಳನ್ನೇ ನಿವಾರಿಸಿಕೊಳ್ಳುತ್ತ ಪರೋಕ್ಷವಾಗಿ ಮನುಷ್ಯ ಸಂಬಂಧಗಳೇ ಮಸುಕಾಗುತ್ತ ಹೊರಟಿವೆಯೇನೋ ಎಂಬ

ಅನುಮಾನ ನನ್ನಂತಹರನ್ನು ಕಾಡುತ್ತಿವೆ. ಪತ್ರ ಬರೆಯುವಾಗಲಾಗಲಿ, ಬಂದ ಪತ್ರವನ್ನು ಓದುವಾಗಲಾಗಲಿ ಆಗುತ್ತಿದ್ದ ಆ ಅನುಭವ – ನಮ್ಮ ಕಲ್ಪನಾಶಕ್ತಿಯನ್ನು ಉದ್ದೀಪಿಸುತ್ತಿದ್ದ ಆ ಪರಿಯೇ ಬೇರೆ. ನೇರ ಪತ್ರ ಬರೆಯುವದೆಂದರೇನೇ ಒಂದು ಹೃದಯದಿಂದ ಇನ್ನೊಂದು ಹೃದಯಕ್ಕೆ ಹರಿಸುತ್ತಿದ್ದ ಅಂತರ್ವಾಹಿನಿ. ಈಗ ಅದೆಲ್ಲಿದೆ? ಎನ್ನುವದು ನನ್ನ ಪ್ರಶ್ನೆ.

ಏನೇ ಆಗಲಿ. ಭಾರತೀಯರು ಬಲು ಘಾಟಿಗಳು. ಕಾಲಕ್ಕೆ ತಕ್ಕಂತೆ ಒಗ್ಗಿಸಿಕೊಳ್ಳದಿದ್ದರೆ ಯಾರು ಮೂಸಿ ನೋಡುತ್ತಾರೆ ನಮ್ಮನ್ನು? ಜೋತಿಷ್ಯ ಶಾಸ್ತ್ರ ಎಂದರೆ ಅದು ಶಾಸ್ತ್ರಿಗಳ ಕಾಲದ್ದಾಯಿತು ಎಂದು ಈಗ ಅದನ್ನೂ ವಿಜ್ಞಾನ ಎಂದು ನಾಮಕರಣ ಮಾಡಹೊರಟಿದ್ದಾರೆ. ವಿಜ್ಞಾನದ ಕೂಸಾದ ಕಂಪ್ಯೂಟರು ಬಂತು ಅಂದಾಕ್ಷಣ ಅದರ ಕಿವಿಗೂ ಹೂ ಏರಿಸಿ, ತಮ್ಮೊಳಗಿನ ಮೌಢ್ಯಗಳನ್ನು ಅದರ ಹೊಟ್ಟೆಗೂ ಫೀಡ್ ಮಾಡಿ ಕಂಪ್ಯೂಟರ್ ಕೈನಿಂದಲೂ ಜಾತಕ ಬರೆಸಿದವರು. ಹಾಗೆ ಹೊಸ ಹೊಸ ವೈಜ್ಞಾನಿಕ ಆವಿಷ್ಕಾರಗಳಿಗೆಲ್ಲ ನಮ್ಮ ಜನ ತಮ್ಮೊಳಗಿನ ಮೌಢ್ಯತೆಯ ಬಟ್ಟೆಯನ್ನು ಅವುಗಳ ಕಣ್ಣಿಗೂ ಬಿಗಿಯುವಲ್ಲಿ ನಿಸ್ಸೀಮರು. ತುಸು ವಿಷಯಾಂತರವಾಯಿತೇನೋ.

ಒಂದು ಕಡೆ ವಿಶಾಲ ಪ್ರಪಂಚವೇ ಗ್ಲೋಬಲ್ ವಿಲೇಜ್ ಆಗುತ್ತಿದ್ದರೆ, ಮನೆಯೊಳಗಿನ ಮಂದಿ ಮಾತ್ರ ಪುಟ್ಟ ನಡುಗಡ್ಡೆಗಳಾಗುತ್ತ ಹೊರಟಿದ್ದು ಏನಾಶ್ಚರ್ಯ. ಸದಾಕಾಲ ತಂದೆ ಕಂಪ್ಯೂಟರಿನ ಮುಂದೆ, ತಾಯಿ ಟಿ. ವಿ. ಸೆಟ್ಟಿನ ಮುಂದೆ ಮಂಡಿಸಿದವರಾಗಿ, ಇನ್ನು ಮಕ್ಕಳು ಮೊಬೈಲ್ ಫೋನಿನ/ಇಂಟರ್ನೆಟ್ಟಿನ ಉರುಳಲ್ಲಿ ಸಿಕ್ಕುಬಿದ್ದು ಮನೆಯ ಪರಿವಾರ ಈಗ ಮುಖಾಮುಖಿಯಾಗುವದನ್ನೇ ಮರೆತಂತಿದೆ.

ತಿನ್ನುವಾಗಲಾಗಲಿ, ವ್ಯವಹರಿಸುವಾಗಲಾಗಲಿ, ಸಂಚರಿಸುವಾಗಲಾಗಲಿ – ಎಲ್ಲದರಲ್ಲೂ ಈಗ ಹೈಟೆಕ್ ಕೈಯಿಕ್ಕಿದೆ. ಅದಕ್ಕೆ ತಕ್ಕುದಾದ ವೇಗದ ಸಂಚಾರೀ ಭಾವವನ್ನು ನಾವೂ ಈಗ ರೂಢಿಸಿಕೊಳ್ಳಬೇಕಲ್ಲವೆ? ಅಂದರೆ ಒಂದು ಬಗೆಯ ಧಾವಂತದಲ್ಲಿಯೇ ಎಲ್ಲ ನಡೆಯಬೇಕು. ನಮ್ಮ ನಗರಗಳಲ್ಲಿರುವ ದರ್ಶಿನಿ ಹೊಟೇಲುಗಳೆಂದರೆ 'ಮೊಬೈಲ್ ಸಂಸ್ಕೃತಿ'ಯ ಸಂಕೇತಗಳಾಗಿವೆ. ಕೂತು ಬಾಯಿ ಚಪ್ಪರಿಸುವ ಸಮಯ, ಸಹನೆಗಳು ಯಾರಿಗಿವೆ? ಹೆದ್ದಾರಿ ಪಕ್ಕದ ಪೆಟ್ರೋಲು ಬಂಕ್ ಗಳಲ್ಲಿ ಇಂಧನ ತುಂಬಿಸಿಕೊಳ್ಳಲು ಎಷ್ಟು ಹೊತ್ತುಬೇಕು? ಅದನ್ನೇ ನಾನು ನಾಗರಿಕತೆಗೆ ಈಗ 'ವಿಪರೀತ ವೇಗ ಬಂದಿದೆ' ಅಂದದ್ದು. ನಮ್ಮದೇನಿದ್ದರು ಈಗ ಅಲೆಮಾರಿ ಸಂಸ್ಕೃತಿ.

'ಕೇಳಿದವರಿಗೆಲ್ಲ ಕಾಯಿಸದೆ ಟೆಲಿಫೋನ್ ನೀಡಿಕೆ' – ಇದು ಸರ್ಕಾರದ ಇತ್ತೀಚಿನ ಮಹತ್ತರ ಸಾಧನೆ. ಬಳಸಲಿ ಬಿಡಲಿ ಫೋನನ್ನು ಮನೆಯಲ್ಲಿಟ್ಟುಕೊಂಡ ಮೇಲೆ ಐದುನೂರು ರೂಪಾಯಿ ಬಾಡಿಗೆ ತೆತ್ತಲೇಬೇಕು.

ಅದಕ್ಕಾಗಿಯಾದರೂ ಜನರು ಅದನ್ನು ಬಳಸಲು ತೊಡಗಬೇಕು. ಮೊದಲಿದ್ದ ಉಚಿತ ಇನ್ನೂರೈವತ್ತು ಕರೆಗಳನ್ನು ಈಗ ನೂರೈವತ್ತಕ್ಕೆ ಇಳಿಸಿದಾಗ ಜನ ಹುಬ್ಬೇರಿಸಿದರು. ಆಗ ಸ್ಥಳೀಯ ಕರೆ ವ್ಯಾಪ್ತಿಯನ್ನು ಇನ್ನೂರು ಕಿ. ಮೀ. ವರೆಗೆ ಹೆಚ್ಚಿಸುವ ಮೂಲಕ, ಬಳಕೆದಾರರನ್ನು ಉತ್ತೇಜಿಸಲಾಯಿತು. ಸಾಲದ್ದಕ್ಕೆ, ಈಗ ಮೊಬೈಲು ಫೋನಿನ ಅಟಾಟೋಪ. ಒಟ್ಟಾರೆ ಜನರನ್ನು 'ಫೋನು ವ್ಯಸನಿ'ಗಳನ್ನಾಗಿಸ ಹೊರಟಿದ್ದು. ಒಂದು ಕೈಯಿಂದ ಮದ್ಯಪಾನ ನಿಷೇಧ ಕಾಯ್ದೆ ಜಾರಿಗೆ ತರುವುದು, ಇನ್ನೊಂದು ಕೈಯಿಂದ ಮದ್ಯದಂಗಡಿಗಳಿಗೆ ಧಾರಾಳವಾಗಿ ಪರವಾನಗಿ ನೀಡುವುದು. ಇಂಥ ವಿರೋಧಾಭಾಸಗಳು ನಮ್ಮ ದೇಶಕ್ಕೆ ಹೊಸದೇನೂ ಅಲ್ಲವಲ್ಲ.

ಇತ್ತೀಚಿನ ವರ್ಷಗಳಲ್ಲಿ ಕವಿಯುತ್ತಿರುವ ಈ ಎಲ್.ಪಿ.ಜಿ. (ಉದಾರೀಕರಣ, ಖಾಸಗೀಕರಣ, ಜಾಗತೀಕರಣ) ಅಪಾಯಕ್ಕೆ ಭಾರತ ತತ್ತರಿಸುತ್ತಿದೆ. ಅದರ ಅಣಕವೆನ್ನುವಂತೆ ಮಾಹಿತಿ ತಂತ್ರಜ್ಞಾನ ಫಲವಾದ ಮೊಬೈಲು ಫೋನನ್ನು ರೇಶನ್ ಅಂಗಡಿ ತೆಗೆದು ಹಂಚುವಂತೆ ಹಂಚಲಾಗುತ್ತಿದೆ. ಯುವ ಶಕ್ತಿಯನ್ನು ನೇರವಾಗಿ ದೇಶದ ಉತ್ಪಾದಕತೆಯಲ್ಲಿ ತೊಡಗಿಸಲು ವಿಫುಲ ಅವಕಾಶಗಳಿಲ್ಲ. ಕೈಗೆ ಕೆಲಸವಿಲ್ಲದಿದ್ದರೇನು? ಆದರೆ ಜುಟ್ಟಿಗೆ ಮಲ್ಲಿಗೆಯಂತೆ ಕಿಸೆಗೊಂದು ಮೊಬೈಲ್ ಫೋನು – ಇದು ದೇಶದ ಹೊಸ ಘೋಷಣೆಯಾದಂತಿದೆ. ಏನೇ ಆದರು ಮೊಬೈಲು ಫೋನು ಎಂದರೆ ಎರಡು ಬಾಯಿಯ ಹತ್ಯಾರವಿದ್ದಂತೆ. ಫೋನು ಹೊಡೆದವನಿಗೂ ಖರ್ಚು ಬೀಳುತ್ತದೆ. ಅತ್ತ ಕಡೆಯಿಂದ ಹೊಡೆಸಿಕೊಂಡವನಿಗೂ ಖರ್ಚು ಬೀಳುತ್ತದೆ.

ತಲೆಯೂ ಇಲ್ಲದ ಬಾಲವೂ ಇಲ್ಲದ ಈ 'ಸುಂಡಿಲಿ' ಚಿಟಿಕೆ ಹೊಡೆಯುವುದರೊಳಗಾಗಿ ಎಲ್ಲೆಲ್ಲೋ ಸಂಪರ್ಕ ಸಾಧಿಸಿ ಎಂತೆಂಥಾ ಸಾಧನೆಗಳಿಗೂ, ಅನಾಹುತಗಳಿಗೂ ಸೇತುವೆಯಾಗುತ್ತದೆ ಬಲ್ಲಿರಾ? ಬಸ್ಸಿನಲ್ಲಿ ಪ್ರಯಾಣಿಸುವಾಗ, ಬೈಕಿನಲ್ಲಿ ಸಂಚರಿಸುವಾಗ, ಸಭೆ ಸಮಾರಂಭಗಳಲ್ಲಿ ಗಂಭೀರವಾಗಿ ಕೂತಿರುವಾಗ, ಅದೂ ಸಾಲದೆಂಬಂತೆ ಕೆಲವು ಅವೇಳೆಯಲ್ಲೆಲ್ಲಾ ರಚ್ಚೆ ಹಿಡಿದು ರಂಪ ಮಾಡಿದ್ದಿದೆ – ಮೊಬೈಲ್ ಫೋನು. ಈ ಐ. ಟಿ. ಯುಗದಲ್ಲಿ ಅದು ಮಾನವ ದೇಹದೊಂದಿಗೆ ಎಷ್ಟೊಂದು ಅವಿನಾಭಾವ ಸಂಬಂಧ ಹೊಂದಿದೆಯೆಂದರೆ, ಹಿಂದೆ ರಾಜರುಗಳ ಕಾಲದಲ್ಲಿ ವೀರಾಧಿವೀರರು ಸೊಂಟದಲ್ಲಿ ಕತ್ತಿಯನ್ನು ತೂಗಾಡಿಸುತ್ತಿದ್ದಂತೆ; ಪ್ರಜಾರಾಜ್ಯದಲ್ಲಿ ಪೋಲೀಸು ಅಧಿಕಾರಿಗಳು ಬೆಲ್ಟ್ ಗೆ ಪಿಸ್ತೂಲು ತಗುಲಿಸಿಕೊಂಡಿರುವಂತೆ; ಈಗ ನಾಗರಿಕ ಜಗತ್ತಿನ ಧಾವಂತದಲ್ಲಿ ಸೊಂಟದಲ್ಲೊಂದು ಮೊಬೈಲು ಸೆಟ್ಟು ಸದಾ ನೇತು ಬಿದ್ದಿರುತ್ತದೆ. ಅದು, ಪರ್ಯಾಯವಾಗಿ, ಆಧುನಿಕ ನಾಗರಿಕನು ಮಾಹಿತಿ ತಂತ್ರಜ್ಞಾನಕ್ಕೆ ಹೇಗೆ ಜೋತುಬಿದ್ದಿದ್ದಾನೆನ್ನುವುದರ ಸಂಕೇತವೂ ಹೌದು. ಅಷ್ಟೇ ಅಲ್ಲ. ಹಿಂದೆ ಜಂಗಮರು ದಂಡ – ಜೋಳಿಗೆ ಹಿಡಿದು, ಮೊಳಕಾಲ ಕೆಳಗೆ ಒಂದು ಜಂಗು ಬಿಗಿದು, ಬಗಲಿಗೊಂದು ಕರಡಿಗೆ

ನೇತಾಡಿಸಿಕೊಂಡು ಮನೆಯಿಂದ ಮನೆಗೆ ಅಂಡಲೆಯುತ್ತಿದ್ದ ಆ ಚರಮೂರ್ತಿಗಳ ಪಾಡನ್ನೇ ನಮ್ಮ ಈ ಆಧುನಿಕ ಮೊಬೈಲಿಗರು ನೆನಪಿಸುತ್ತಾರೆ.

ನಗರ ಸಾರಿಗೆ ಬಸ್ಸೊಂದರಲ್ಲಿ ಕಿಟಕಿ ಪಕ್ಕ ಕೂತು ವಿಹರಿಸುತ್ತಿದ್ದ ಹುಡುಗನೊಬ್ಬ ಇದ್ದಕ್ಕಿದ್ದಂತೆ ಮೈಯೊಳಗೆ ದೆವ್ವ ಹೊಕ್ಕವನಂತೆ ಗಟ್ಟಿದನಿಯಲ್ಲಿ ಮಾತನಾಡತೊಡಗಿ ಎಲ್ಲರ ಗಮನ ಸೆಳೆದಿದ್ದ. ಇದೂ ಕೂಡ ಮಾಮೂಲಿ ಮೊಬೈಲ್ ಗಿರಾಕಿಯೊಂದು ಜನ ಮುಖ ತಿರುಗಿಸುತ್ತಿದ್ದಂತೆ, ಕಿವಿಗೆ ಹಿಡಿದಿದ್ದ ಮುಷ್ಟಿ ತೆರೆದು ಜಾದೂಗಾರನಂತೆ ಗಾಳಿಯಲ್ಲಿ ಖಾಲಿ ಕೈ ಆಡಿಸುತ್ತಿದ್ದ. ಹಾಗೆ ನೋಡುಗರನ್ನು ಯಾಮಾರಿಸಿದ್ದಕ್ಕೆ, ಈಗ ಹೆಹ್ಹೇ ಎಂದು ತಂತಾನೇ ಗಹಗಹಿಸಿ ನಗುತ್ತಿದ್ದನಾ ಬೇಕೂಫ. ಹೇಗಿದೆ ನೋಡಿರಿ. ಆಧುನಿಕ ನಾಗರಿಕ ಜಗತ್ತಿನ – ಮೊಬೈಲು ಅಣಕ?

ಇತ್ತೀಚೆಗೆ ದಾಳಿಯಿಕ್ಕಿರುವ ಮೊಬೈಲ್ ಫೋನು ಹೇಗೆ ಖಾಸಗಿ ಬದುಕನ್ನು ನಿಯಂತ್ರಿಸುತ್ತದೆ ನೋಡಿರಿ. ಕೆಲಸಕ್ಕಿಟ್ಟುಕೊಂಡಿದ್ದ ಕಂಪನಿಯೇ ದಯಪಾಲಿಸಿದ್ದ ಪುಟ್ಟ ಮೊಬೈಲು ಫೋನನ್ನು ಕಿಸೆಯಲ್ಲಿಟ್ಟುಕೊಂಡು ಗಂಡಸು ಕೆಲಸದ ಮೇಲೆ ಬಿರುಗಾಳಿಯಂತೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಸಂಚರಿಸುತ್ತಿರಬೇಕಾದರೆ; ಆತನ ನೆಚ್ಚಿನ ಗೃಹಿಣಿ, ಮನೆಯಲ್ಲಿನ ದೂರವಾಣಿಯಿಂದಲೇ ಆಗಾಗ ಫೋನಾಯಿಸಿ – ತನ್ನ ಗಂಡನೆನ್ನುವ ಪ್ರಾಣಿ ಯಾವ ಹೊತ್ತಿನಲ್ಲಿ ಎಲ್ಲಿದೆ, ಯಾರೊಂದಿಗೆ, ಏನು ಮಾಡುತ್ತಿದೆ ಎನ್ನುವುದನ್ನೆಲ್ಲಾ ವಿಚಾರಿಸುವ ನಿಗಾ ವಹಿಸಿದಂತೆ ರಿಮೋಟ್ ಕಂಟ್ರೋಲ್ ಮಾಡಬಹುದಲ್ಲವೆ? ಹೇಗಿದೆ ಐಡಿಯಾ? ಭಾರತೀಯ ಮನಸ್ಸುಗಳಿಗೆ ಇಂಥವೇ ವಿಚಾರಗಳು ಹೊಳೆಯುವುದು. ಹಿಂದೆ ನಾಗರಹೊಳೆ ಕಾಡಿನ ಹುಲಿಗಳ ಕೊರಳಿಗೆ ರೇಡಿಯೊ ಕಾಲರ್ ತೊಡಿಸಿದ್ದ ಉಲ್ಲಾಸ ಕಾರಂತರ ಪ್ರಕರಣ ನೆನಪಿರಬೇಕಲ್ಲ. ಅಂಥದೊಂದು ಉಪಕರಣವನ್ನು ತಮ್ಮ ಗಂಡಂದಿರ ಕೊರಳಿಗೆ ಕಟ್ಟಿ ಬಿಡುವ ಹಾಗಿದ್ದರೆ ಚೆನ್ನಾಗಿತ್ತೆಂದು ಹಾರೈಸುತ್ತಿದ್ದ ಮಹಿಳಾ ಮಣಿಗಳ ಕನಸನ್ನು ನನಸು ಮಾಡಿದ್ದೇ ಈ ಮೊಬೈಲು ಫೋನು.

ಹಾಂ! 'ಗಂಡಸು ಪ್ರಾಣಿ' ಅಂದಾಕ್ಷಣ ಒಂದು ಪ್ರಸಂಗ ನೆನಪಾಗುತ್ತದೆ. ನನಗೆ ಬೇಕಾದವರೊಬ್ಬರು ವಿಳಾಸ ನೀಡಿ, ಆ ಕಡೆಗೆ ಬಂದಾಗ ಬನ್ನಿರೆನ್ನುವಂತೆ ಹೇಳುತ್ತಲೇ ಇದ್ದರು. ಒಮ್ಮೆ ಅಚಾನಕ ಆ ಕಡೆ ಹೋದಾಗ ಅವರ ಮನೆ ಹುಡುಕಿ ಬೆಲ್ಒತ್ತುವ ಮೊದಲೇ 'ಅದಿನ್ನೂ ಬಂದಿಲ್ಲಾ' ಎಂಬ ಹೆಂಗಸಿನ ದನಿ ಒಳಗಿಂದಲೇ ರಾಗವಾಗಿ ತೂರಿ ಬಂತು. ನಾನು ತಪ್ಪಿ ಬೇರೆಯವರ ಮನೆಗೇನಾದರು ಬಂದಿರಲಿಕ್ಕಿಲ್ಲವಲ್ಲ ಅನ್ನುವದನ್ನು ಖಚಿತಪಡಿಸಿಕೊಳ್ಳಲೆಂಬಂತೆ 'ಇಲ್ರಿ ವೈನಿ, ನಾನು ಪ್ರಾ ಪ್ರಾ ಪ್ರಾಣೀ.... ' ಎಂದು ತೊದಲುತ್ತಿರುವಾಗಲೇ, 'ಅದೇ

ಪ್ರಾಣಿ ಇನ್ನೂ ಮನೆಗೇ ಬಂದಿಲ್ಲಾಂದೆ' ಎಂದಿತು ಭಾರೀ ಆಢ್ಯತೆಯಿಂದೆಂಬಂತೆ, ನನ್ನ ವಾಕ್ಯವನ್ನು ಅರ್ಧದಲ್ಲಿಯೇ ತುಂಡರಿಸಿ, ಗೋಡೆಗೆಸೆದ ಪುಟಿಚೆಂಡಿನಂತೆ ಮಾರ್ನುಡಿದಿತ್ತು. ಆದರೆ ನನಗೆ ತುಸು ಕಕವಕವಾದದ್ದು ಇಲ್ಲಿನ 'ಪ್ರಾಣಿ' ಪದ ಪ್ರಯೋಗ. ಅದು ಇತ್ತೀಚೆಗಷ್ಟೇ ನಗರಕ್ಕೆ ವರ್ಗವಾಗಿ ಬಂದಿದ್ದ ಪ್ರಾಣ ಸ್ನೇಹಿತ ಪ್ರಾಣೇಶರಾಯನ ಹೆಸರಿನ ಸಂಕ್ಷಿಪ್ತ ರೂಪವನ್ನು ಇಲ್ಲಾ ಅವರ ಮನೆಯಲ್ಲಿ ಹಾಗೆ ಗಂಡನನ್ನೂ ಸಾಕುಪ್ರಾಣಿಯೆಂದೇ ಭಾವಿಸಿದ ಸಹ ನಾಮಪದವೋ ಎಂಬ ಬಗ್ಗೆ ಕನ್ಫ್ಯೂಸ್ ಆದರೂ ತೋರಿಸಿಕ್ಕೊಳ್ಳಲಿಲ್ಲ.

ಅವರ ಆ 'ವಾಣಿವಿಲಾಸ' ನಿಜಕ್ಕೂ ಕುತೂಹಲ ಮೂಡಿಸಿತ್ತು ನನಗೆ. ಜೊತೆಗೆ, ಏನಾದರೂ ಹೆಚ್ಚು ಕಡಿಮೆಯಾದರೆ ನಮ್ಮ ಈ ಪ್ರಾಣಿಯ ಪರವಾಗಿ ನಾನೇ ಖುದ್ದಾಗಿ ಹೋಗಿ ಪ್ರಾಣಿದಯಾ ಸಂಘಕ್ಕೆ ದೂರು ಕೊಡಬೇಕಾಗುವದೇನೋ ಎಂದು ಯೋಚಿಸುತ್ತಲೇ ಹಿಮ್ಮೆಟ್ಟಿದ್ದೆ. ಹಿಂದಿ ಭಾಷೆಯಲ್ಲಿ ಹೆಂಡತಿಗೆ 'ಜೋರು' ಎಂದು ಬೇರೆ ಅರ್ಥಪೂರ್ಣವಾಗಿ ಕರೆಯುತ್ತಾರೆ. ಅದರ ಸಾಕ್ಷಾತ್ಕಾರ ಆದಂತಾಗಿತ್ತು ನನಗೆ!

ಮತ್ತೇ 'ವಾಣಿ'ಯೆಂದ ಕೂಡಲೇ ನೆನಪಾಗುತ್ತದೆ ನೋಡಿರಿ. ಅನೇಕ ಬಗೆಯ ವಾಣಿಯರನ್ನು ನಾನು ಹತ್ತಿರದಿಂದ ಕಂಡವನು. ಅವರಲ್ಲಿ 'ಗೀರ್ವಾಣಿ' ಮತ್ತು 'ಘಟವಾಣಿ'ಯರನ್ನು ಮಾತ್ರ ಕುರಿತು ವಿವರ ನೀಡುತ್ತೇನೆ. ವಿನಾಕಾರಣ ಜಗಳ ತೆಗೆದು ಗಂಡನ ಬನಿಯನ್ನು ಹರಿದು ಹಾಕಿ, ಪರಚಿ ಮುಖ ಮೈ ಮೇಲೆಲ್ಲ ಗೀರು (ಗಾಯ) ಮಾಡುವವರೇ – ತವರಿನ ಕುಮ್ಮಕ್ಕಿರುವ ಗೀರುವಾಣಿಯರು. ಇನ್ನು ಲಕ್ಷಣವಾಗಿ ಕದ ಹಾಕಿಕೊಂಡು, ಹೊರ ಪ್ರಪಂಚಕ್ಕೆ ಬರೀ ದಬ್ – ದುಬ್ ಶಬ್ದ ಮಾತ್ರ ಕೇಳಿಸುವವರೂ ಇದ್ದಾರೆ. ಬೆಳಗ್ಗೆದ್ದು ನೋಡಿದರೆ ಅವರ ಕಣ್ಣು ಕೆಂಪಾಗಿರುತ್ತವಷ್ಟೇ – ಹಿಂದಿನ ರಾತ್ರಿ ನಡೆದ ಕಾಳಗಕ್ಕೆ ಸಾಕ್ಷಿ ಹೇಳುವಂತೆ. ಪರಸ್ಪರ ಯಾರು ಯಾರಿಗೆ ಹೊಡೆದರೆಂಬುದು ಗೊತ್ತಾಗದಂತೆ ಏಟಿಗೆ ಎದಿರೇಟು ಕೊಡುತ್ತಾ ಘಟವಾದನದಲ್ಲಿ ತೊಡಗುವ ಗಟ್ಟಿಮುಟ್ಟಾದ ಮಹಿಳಾಮಣಿಗಳೇ ಘಟವಾಣಿಯರು. ವಾಚಕರು ಕ್ಷಮಿಸಬೇಕು. ಮತ್ತೇ ಹಳಿ ತಪ್ಪಿತೆಂದು ಕಾಣುತ್ತದೆ. ಈಗ ತಿರುಗಿ ಮೊಬೈಲಿಗೆ ಬರುತ್ತೇನೆ. ಬನ್ನಿರಿ.

ಚಂದದ ಹುಡುಗ. ನಿರ್ಜನ ರಸ್ತೆಯಲ್ಲಿ ತನ್ನಪಾಡಿಗೆ ತಾನು ಒಬ್ಬನೇ ಗಟ್ಟಿಯಾಗಿ ಮಾತನಾಡಿಕೊಂಡು ಹೋಗುತ್ತಿದ್ದ ಪರಿ. ಪಾಪ! ತಲೆ Out of order ಪಾರ್ಟಿ ಎಂದು ನಾನು ಭಾವಿಸಿ ಈಗ ಮೋಸ ಹೋಗಿದ್ದೆ. ಬಚ್ಚಿಟ್ಟುಕೊಂಡಿದ್ದ ಅದೊಂದು ಬಗೆಯ ಮೊಬೈಲು ಫೋನಿನಲ್ಲಿ ಆಗ ಆತ ಸಂಭಾಷಿಸುತ್ತಿದ್ದ. ಕಿವಿಯ ಬಳಿಯಿದ್ದ ಪುಟ್ಟ ಮೈಕ್ರೋ ಫೋನಿನಂಥ ವಸ್ತು – ಅದೂ ಸೂಕ್ಷ್ಮವಾಗಿ ಗಮನಿಸಿದವರಿಗೆ ಮಾತ್ರ ಗೋಚರಿಸುತ್ತಿತ್ತು, ವಾಹ್! ಮೂರ್ಖ ಪೆಟ್ಟಿಗೆಯಲ್ಲಿ ಬರುವ ಜಾಹೀರಾತು ರಾಣಿಯೊಬ್ಬಾಕೆ ನಡು ನಡುವೆ ನೋಡುಗರತ್ತ ತುಸು ಆಸೆ

ಹುಟ್ಟಿಸುವಂತೆ ವ್ಯೆಯಾರವಾಗಿ ನುಲಿದು 'ಈಗ ಎಲ್ಲವೂ ಮೊಬೈಲ್ ಆಗಿದೆ' ಎಂದು ಉಲಿಯುತ್ತಾಳೆ – 'ಈಗ ನಿಮ್ಮ ಸರದಿ' ಎಂಬ ಇಂಗಿತಾರ್ಥ ಹೊಮ್ಮಿಸಿ. ಬತ್ತಲೆಯಿರುವವರ ನಡುವೆ ಬಟ್ಟೆ ತೊಟ್ಟವನೇ ಮೂರ್ಖನೆನ್ನುವಂತೆ ಈಗ ನಮ್ಮ ಪಾಡು!

ರಸಸ್ಪಂದಿಯಾದ ಸೊಗಸಾದ ಕಾರ್ಯಕ್ರಮ ನಡೆಯುತ್ತಿರುವ ವೇಳೆಯಲ್ಲಿ ಇದ್ದಕ್ಕಿದ್ದಂತೆ ಅನಾಮಧೇಯನ ಕಿಸೆಯೊಳಗಿದ್ದ ಮೊಬೈಲು ಹೊಡೆದುಕೊಳ್ಳಲಾರಂಭಿಸಿತ್ತದೆ. ಅದನ್ನು ಹೊರತೆಗೆದು ಅದರ ಬಾಯಿ ಬಂದು ಮಾಡುವ ಬದಲು ಕಿವಿಗೆ ಹಚ್ಚಿಕೊಂಡು 'ಹಲೋ' ಎಂದು ಮಾತನಾಡಲು ತೊಡಗಿದೊಡನೆ ಸಭಿಕರೆಲ್ಲರ ಗಮನ ಅವನತ್ತ ತಿರುಗುತ್ತದೆ. ಆ ಕಾರಣಕ್ಕಾಗಿಯೇ ಇತ್ತೀಚೆಗೆ ಸದನದೊಳಗಾಗಲಿ, ಮಹತ್ವದ – ಗಂಭೀರ ಸಭೆ ಸಮಾರಂಭಗಳು ನಡೆಯುತ್ತಿರುವಾಗಲಾಗಲಿ ಮೊಬೈಲ್ ಫೋನು ತರಬಾರದೆಂದೂ, ತಂದಿದ್ದರೆ ಸ್ವಿಚ್ ಆಫ್ ಮಾಡಿಕೊಂಡು (ಮುಚ್ಚಿಕೊಂಡು) ಇರಬೇಕೆಂದೂ ತಾಕೀತು ಮಾಡಲಾಗಿರುತ್ತದೆ.

ಸಮಾಗಮದ ಉತ್ಕಟ ಕ್ಷಣಗಳಲ್ಲಿ ಇಲ್ಲಾ ಗಾಢ ನಿದ್ರೆಯ ಸಮಾಧಿ ಸ್ಥಿತಿಯಲ್ಲಿ ನಿರ್ದಾಕ್ಷಿಣ್ಯವಾಗಿ ಸೆಲ್ ಫೋನು ಬಾಯಿ ಬಿಟ್ಟು ಎಲ್ಲ ಕೆಡಿಸುತ್ತದೆ. ಅದಕ್ಕೆಂದೇ ಬಹುತೇಕರು ಬೇಡದ ಹಸುಗೂಸಿನ ಕತ್ತು ಹಿಸುಕಿ ಮಲಗಿಸಿರುವಂತೆ, ತಮ್ಮ ಕಿಸೆಯೊಳಗಿನ ಮೊಬೈಲನ್ನು ಸ್ವಿಚ್ ಆಫ್ ಮಾಡಿ ಬೆಳಕು ಹರಿಯುವ ತನಕ ಒಂದು ಕಡೆ ಎಸೆದಿರುತ್ತಾರೆ. ರಸಸ್ಪಂದಿಯಾದ ಸನ್ನಿವೇಶಗಳಲ್ಲೆಲ್ಲ ಹೀಗೆ ಚಿಟಗುಮುಳ್ಳು ಆಡಿಸುತ್ತಿದ್ದರೆ ಯಾರು ಸಹಿಸುತ್ತಾರೆ ಹೇಳಿರಿ. ವೇದಿಕೆಯ ಮೇಲಿದ್ದ ಸಚಿವರೊಬ್ಬರು ಸಭೆ ನಡೆಯುತ್ತಿರುವಾಗಲೇ ಪದೇ ಪದೇ ಎದ್ದು ಪಾಯಖಾನೆಗೆ ಹೋಗಿ ಬರುತ್ತಿದ್ದುದನ್ನು ನೋಡಿದ ದೂರದ ಸಭಿಕರು – ಪಾಪ! ಅವರಿಗೆ ಅತಿ ಮೂತ್ರ ರೋಗವಿರಬೇಕೆಂದೇ ಭಾವಿಸಿದ್ದರು. ಆದರೆ, ವಾಸ್ತವವಾಗಿ ಅದು ನೇಚರ್ ಕಾಲ್ ಅಗಿರದೇ ಹೊಸ ಖಾಯಿಲೆಯಾದ ಮೊಬೈಲ್ ಕಾಲ್ ಗಳೆಂಬುದು ನಂತರ ಗೊತ್ತಾಯಿತು.

ಹೋದ ವರ್ಷ ನಡೆದ ಘಟನೆ. ಜ್ಞಾನಪೀಠ ಪುರಸ್ಕೃತ ಎರಡು ತಲೆಗಳು ಅಲ್ಲಿ ಕೆಲಸ ಮಾಡಿದ್ದರಿಂದಾಗಿ 'ಕಾನೂರು ಹೆಗ್ಗಡತಿ'ಯನ್ನು ನೋಡಲೇಬೇಕೆಂಬ ಹಠದಿಂದ ಥೇಟರಿಗೆ ಹೋಗಿದ್ದೆವು. ಸಿನಿಮಾದ ಅಂತಿಮ ಘಟ್ಟದ ಕ್ಲೈಮ್ಯಾಕ್ಸ್ ದೃಶ್ಯಾವಳಿಯಲ್ಲಿ ಪ್ರೇಕ್ಷಕರೆಲ್ಲ ತಲ್ಲೀನರಾಗಿದ್ದ ಹೊತ್ತಿಗೆ ಸರಿಯಾಗಿ – ಬಾಲ್ಕನಿಯ ಕೊನೇ ಸಾಲಿನ ಆಸನವೊಂದರಲ್ಲಿ ಮೊಬೈಲ್ ರಿಂಗಣಿಸಿತು. ಹಿಂದೆಯೇ ದೊಡ್ಡ ದನಿಯಲ್ಲಿ ಮಾತನಾಡುವದು ಶುರುವಿಟ್ಟುಕೊಂಡೊಡನೆ, ಎಲ್ಲರೂ ಕತ್ತು ತಿರುಗಿಸಿ ಆತನನ್ನೇ ನೋಡಲಾರಂಭಿಸಿದ್ದರು.

ಉತ್ತರ ಕರ್ನಾಟಕದ ಕಡೆಯ, ರಾಜಕೀಯ ಬಿಳಿಯಾನೆಯೊಂದು ಜೊತೆಗೊಬ್ಬಳು ಸಂಗಾತಿಯನ್ನು ಬೇರೆ ಕರೆದುಕೊಂಡು ಹೆಗ್ಗಡಿತಿಯನ್ನು ವೀಕ್ಷಿಸಲು ಬಂದಿತ್ತು. ತಾನು ಥೇಟರಿನ ಕತ್ತಲೆಯ ಗಂಭೀರ ಮೌನದಲ್ಲಿರುವದನ್ನೇ ಮರೆತು, ಆತ ಹತ್ತಾರು ನಿಮಿಷ ನಿರರ್ಗಳವಾಗಿ ಮಾತುಕತೆಯಲ್ಲಿ ಮುಳುಗಿದ. ಆ ಕಡೆಯಿಂದ ಮಾತನಾಡುತ್ತಿದ್ದ ಆಸಾಮಿ ಸಿನಿಮಾ ಹೇಗಿದೆ, ಎಂತೆಂದು ಕೇಳಿರಬೇಕು. ಈತ ಸಿನಿಮಾ ಹಾಲಿನಿಂದಲೇ ಗಟ್ಟಿಯಾಗಿ ಗಂಟಲಿನಿಂದ ಕಾಮೆಂಟರಿ ಒದರಲಾರಂಭಿಸಿದ್ದ. ಯಾವ ಹುತ್ತದಲ್ಲಿ ಯಾವ ಹಾವು ಇರುತ್ತದೋ – ರಾಜಕೀಯ ಪುಢಾರಿಯನ್ನು ಕೆದಕುವುದು ಬೇಡವೆಂದು ಸ್ವಲ್ಪ ಹೊತ್ತು ಜನ ಸಹಿಸಿದರು. ಆತ ಮಾತು ಮುಗಿಸುವ ಲಕ್ಷಣ ಕಾಣದಾದಾಗ ಕೆಲವರು ಲೊಚಗುಟ್ಟಿದರು, ಕೆಲವರು ಉಶ್ ಎಂದರು. ದೂರದಿಂದ ಅದ್ಯಾರೋ 'ಸಾಕು ನಿಲ್ಲಿಸ್ರೀ' ಎಂದು ಕೂಗಿದರು. ಇನ್ಯಾರೊ ಎದ್ದು ನಿಂತು 'ಹೊರಗೆ ಹೋಗಿ ಮಾತನಾಡ್ರಿ' ಎಂದೂ ಗದರಿದರು. ಅಕ್ಕ ಪಕ್ಕದವರು ಪಕ ಪಕ ನಕ್ಕರು. ಆತನ ತಲೆಯ ಮೇಲೆಯೇ ಇದ್ದ ಪ್ರೊಜೆಕ್ಟರ್ ಬೆಳಕಿಂಡಿಯೊಂದರಲ್ಲಿ ಸಿನಿಮಾ ಆಪರೇಟರ್ ಕೂಡ ಏನೋ ಗಲಾಟೆ ನಡೆಯುತ್ತದೆಂಬ ಗುಮಾನಿಯಿಂದ ಹಣಕಿ ಹಾಕಿದ್ದೂ ಆಗಿತ್ತು.

ಎಲ್ಲರೂ ಅವರತ್ತಲೇ ಕತ್ತು ಹೊರಳಿಸಿ ಅಸಹನೆ ತೋರಲಾರಂಭಿಸಿದಾಗ ಮುಜುಗರಕ್ಕೊಳಗಾದ ಪಕ್ಕದ ಸಂಗಾತಿ ಆತನ ಜುಬ್ಬಾ ತೋಳನ್ನು ಎಳೆದು, 'ಸಾಕು ಬಿಡ್ರೀ. ಎಲ್ಲಾರೂ ನಮ್ಮ ಕಡೆ ನೋಡ್ಲಿಕ್ ಹತ್ಯಾರು' ಎಂದು ಪಿಸು ನುಡಿದರೂ ಅವ ಜಗ್ಗುತ್ತಿಲ್ಲ. ಒಳ್ಳೇ ಸಮಯದಲ್ಲಿ ರಸಾಭಾಸ. ಒದರುವುದನ್ನು ಪೂರ್ತಿ ಒದರಿಯೇ ಬಿಟ್ಟ ಕೊನೆಗೂ. ಅದಾಗಿ, ಎರಡೇ ನಿಮಿಷಗಳಲ್ಲಿ ಸಿನಿಮಾ ಕೂಡ ಮುಗಿದಿತ್ತು. ದೀಪದ ಬೆಳಕಿನಲ್ಲಿ ಇಳಿದು ಹೊರ ನುಗ್ಗುತ್ತಿರುವಾಗ, ಯಾರೋ ಕಿಡಿಗೇಡಿಯೊಬ್ಬ ಹಿಂದಿನಿಂದ ಅವರಿಗೆ ಕೇಳಿಸುವಂತೆಯೇ 'ಜೋಬಲ್ಲಿ ಒಂದು ಮೊಬೈಲ್, ಜೊತೆಗೊಂದು ಮೊಬೈಲ್ ಮಜಾ ಮಾಡು' ಎಂದು ಲೇವಡಿ ಮಾಡಿದಾಗ, ಪ್ರೇಕ್ಷಕರೆಲ್ಲ ಗೊಳ್ಳೆಂದು ನಕ್ಕರು. ಆ ಸಲಗ ದೂಸರಾ ಮಾತಾಡದೆ ದೂರದ ಊರಿಂದಲೇ ತಳುಕು ಹಾಕಿಕೊಂಡು ಬಂದಿದ್ದಿರಬಹುದಾದ ಸಂಗಾತಿಯೊಂದಿಗೆ ತಲೆ ತಗ್ಗಿಸಿಕೊಂಡು ಸರಸರ ಹೊರ ನಡೆದಿತ್ತು. ಏನು ಮಾಡುವದು? ಮೊಬೈಲು ಫೋನಿನ ದುಸ್ಸಹವಾಸ.

ಜನಾರಣ್ಯದ ಒತ್ತಡದ ಬದುಕಿನಲ್ಲಿ ಸೂಕ್ತ ಪ್ರೈವಸಿಯಿಲ್ಲದ್ದಕ್ಕೋ ಇಲ್ಲಾ ಸಮಯದ ಅಭಾವಕ್ಕೊ – ತಮ್ಮ ಕಿಸೆಯಲ್ಲಿದ್ದ ಸೆಲ್ ಫೋನಿನಲ್ಲಿಯೇ ಸೆಟ್ ಮಾಡಿಕೊಂಡು ಚಾರ್ ವ್ಹೀಲರುಗಳಲ್ಲಿ ಬರುವ ಅತೃಪ್ತ ಕಾಮಿಗಳು ಹಾಡುಹಗಲೇ ನಿರ್ಜನ ಹೆದ್ದಾರಿ ಪಕ್ಕದಲ್ಲಿಯೋ ಅಥವಾ ಕಬ್ಬನ್ ಪಾರ್ಕಿನಲ್ಲಿ ಮರದ ಕೆಳಗೋ

ಪಾರ್ಕು ಮಾಡಿ ಕಾರಿನ ಕಪ್ಪು ಗಾಜು ಏರಿಸಿಕೊಂಡು ಗಾಡಿಯೊಳಗಡೆಯೇ 'ವ್ಯಾಪಾರ' ಮುಗಿಸಿಕೊಳ್ಳಲೂ ಹೇಸದ ನಿರ್ಲಜ್ಜರಿದ್ದಾರೆಂದು ಸಂಚಾರಿ ವಲಯದ ಪೋಲಿಸು ಮಿತ್ರನೊಬ್ಬ ಬಣ್ಣ ಕಟ್ಟಿ ಹೇಳಿ ಕಿಸಿಕಿಸಿ ನಗುತ್ತಿದ್ದ. ಅದಕ್ಕೇ ಹೇಳುವುದು ಜಗವೆಲ್ಲ ಈಗ ಮೊಬೈಲ್ ಮಯ. ನಿಂತ ಕಾಲ ಮೇಲೆ ಪ್ರಪಂಚವೆಲ್ಲ ಅಯೋಮಯ. ವಾಹ್! ಮಾಹಿತಿ ತಂತ್ರಜ್ಞಾನದ ಹುಚ್ಚುಗುದುರೆಯೇರಿ ಹೊರಟ ಲೋಕ ಅದೆಲ್ಲಿಗೆ ಹೋಗಿ ಮುಟ್ಟುತ್ತದೋ ಕಂಡವರಾರು?

ಇದು ಬರೀ ಮೊಬೈಲಲ್ಲೋ ಅಣ್ಣಾ, ಇದಕ

ಮಾಬ್ – ಐಲು (ಹುಚ್ಚರ ಸಂತಿ) ಅನಬೇಕಣ್ಣಾ'

# 1.3 ಒಲಿಂಪಿಕ್ಸ್ ರೋಮಾಂಚನ

ಕೆ.ಪುಟ್ಟಸ್ವಾಮಿ

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಬೆಳಕಿನ ಪಂಜು ಜ್ಯೋತಿಯ ಕರಂಡವನ್ನು ಸ್ಪರ್ಶಿಸಿದಾಗ ವಿಶ್ವವನ್ನೇ ವ್ಯಾಪಿಸಿಕೊಳ್ಳುವಂತೆ ಏಳುವ ಪ್ರಭೆಯಲ್ಲಿ ನಮ್ಮ ಯುಗದ ಹರ್ಕ್ಯುಲಸ್, ಅರ್ಜುನ, ಏಕಲವ್ಯ, ಹೆಕ್ಟರ್‌ಗಳಿಗಾಗಿ ಶೋಧನೆ ಆರಂಭವಾಗುತ್ತದೆ. ಅನಿಯಂತ್ರಿತ ಉತ್ಸಾಹದ ವಾತಾವರಣದಲ್ಲಿ ಪದಕಗಳಿಗೆ ನಡೆಯುವ ಸೆಣಸಾಟದಲ್ಲಿ ಗೆದ್ದವರು ಅತಿಮಾನವರಂತೆ ಕಾಣುತ್ತಾರೆ. ಜನರ ಆರಾಧನೆಗೆ ಪಾತ್ರರಾಗುತ್ತಾರೆ. ಇತಿಹಾಸದ ಭಾಗವಾಗಿಬಿಡುವ ಅವರ ಸುತ್ತ ಕಾಲಾನಂತರ ದಂತಕತೆಗಳು ಸೃಷ್ಟಿಯಾಗುತ್ತವೆ.

ಒಲಿಂಪಿಕ್ ರಂಗಭೂಮಿಯ ತೆರೆ ಸರಿದು ಆಟ ಆರಂಭವಾಗುವ ಸಂಭ್ರಮ ಇಂದಿಗೂ ಮಾತಿಗೂ ಮೀರಿದ ರೋಮಾಂಚನ. ಅದೊಂದು ಅದ್ಭುತವಾದ ಪಾರಮಾರ್ಥಿಕ ಘಟನೆ. ಇಲ್ಲಿ ಇಡೀ ವಿಶ್ವವೇ ಹ್ರಸ್ವಗೊಂಡು ಗ್ರಾಮವಾಗುವ ಅಪೂರ್ವ ದೃಶ್ಯ ಏರ್ಪಡುತ್ತದೆ. ಮನುಷ್ಯ ನಿರ್ಮಿಸಿದ ದೇಶದ ಗಡಿಗಳನ್ನು ಅಳಿಸಿ ಹಾಕಿ, ಭಾಷೆ, ಮತ, ಧರ್ಮ, ಬಣ್ಣದ ಕಂದಕಗಳನ್ನು ದಾಟಿ ಎರಡು ವಾರಗಳ ಕಾಲ ಭ್ರಾತೃತ್ವವನ್ನು ಬೆಸೆಯುತ್ತ ಒಲಿಂಪಿಕ್ಸ್ ತರುವ ಭಾವಸಂಚಾರಕ್ಕೆ ಎಣೆಯಿಲ್ಲ. ವಿಂಬಲ್ಡನ್ ಆಗಲೀ, ವಿಶ್ವದ ಶ್ರೇಷ್ಠ ಕ್ರೀಡಾ ಪಟುಗಳು ಸೆಣೆಸುವ ವಿಶ್ವಕಪ್ ಸಾಕರ್ ಆಗಲಿ ಒಲಿಂಪಿಕ್ ವೈಭವವನ್ನು ಸರಿಗಟ್ಟಲಾರವು. ಆತಂಕ ಮತ್ತು ಆನಂದ, ಕೀರ್ತಿ ಮತ್ತು ಸಿರಿ, ನಿರಾಸೆ ಮತ್ತು ವೈಫಲ್ಯಗಳ ರಾಗಭಾವಗಳಲ್ಲಿ ಜನರು ಮಿಂದೇಳುವ ಅಲ್ಲಿನ ಸೊಬಗು ಇನ್ನೆಲ್ಲಿಯೂ ಕಾಣಲು ಸಾಧ್ಯವಿಲ್ಲ.

ಸಾಧನೆ, ಪ್ರಸಿದ್ಧಿ ಮತ್ತು ಜಯಾಪಜಯಗಳನ್ನು ಅರೆಕ್ಷಣದಲ್ಲಿ ನಿರ್ಧರಿಸುವ ಈ ಅಪೂರ್ವ ವೇದಿಕೆಯಲ್ಲಿ ಮನುಷ್ಯನ ಸಂಕುಚಿತ ಭಾವನೆಗಳು ಸ್ವಲ್ಪಕಾಲವಾದರೂ ಹಿಮ್ಮೆಟ್ಟಿ ಸೌಂದರ್ಯ ಸಾಧನೆಯ ಆರಾಧನೆ ನಡೆದು ಭಾವಶುದ್ಧಿಯ ಕ್ರಿಯೆ ಜರುಗುತ್ತದೆ.

ಒಂದು ಮಟ್ಟದಲ್ಲಿ ನೋಡಿದರೆ ಆಧುನಿಕ ಒಲಿಂಪಿಕ್ ಪುರಾತನ ಒಲಿಂಪಿಯಾ ಬಯಲಿನ ಉಲ್ಲಾಸ, ಉನ್ಮಾದವನ್ನು ಇಂದಿಗೂ ಉಳಿಸಿಕೊಂಡಿದೆ. ಸ್ಪರ್ಧಾಕಣಕ್ಕೆ ಬರುವ ಆಟಗಾರರು ತಮ್ಮ ಶೌರ್ಯ ಮತ್ತು ಕೌಶಲ್ಯವನ್ನು ಪಣಕ್ಕಿಡುತ್ತಾರೆ. ಇಲ್ಲಿಗೆ ಬರುವ ಮುನ್ನ ಹಲವಾರು ತಿಂಗಳ ಕಾಲ ಗೆಲ್ಲುವ ಛಲದಿಂದ, ಮೈಮನಸ್ಸುಗಳನ್ನು ಏಕಾಗ್ರತೆಯಿಂದ ಅಣಿಗೊಳಿಸುವ ಅವರ ಶ್ರಮ ನಿಕಷಕ್ಕೆ ಒಡ್ಡಿಕೊಳ್ಳುತ್ತದೆ. ಸಾಮಾನ್ಯರಿಗೆ ನಿಲುಕದ ಗುರಿಯನ್ನು ಮುಟ್ಟುವ ಮಾನವ ಸಾಮರ್ಥ್ಯ ಇಲ್ಲಿ ಅನಾವರಣಗೊಳ್ಳುತ್ತದೆ. ಇಲ್ಲಿ ಆಟಗಾರರ ದೇಶಭಕ್ತಿ, ರಾಷ್ಟ್ರೀಯ ಪ್ರತಿಷ್ಠೆ ಉನ್ಮಾದ ಸ್ಥಿತಿ ತಲುಪುತ್ತದೆ. ಮನುಷ್ಯನ ಸಾಧನೆಗೆ ವಿಶ್ವವ್ಯಾಪಿ ಮನ್ನಣೆ ದೊರೆಯುತ್ತದೆ. ಈ ಕಾರಣದಿಂದಲೇ ಒಲಿಂಪಿಕ್ ಕ್ರೀಡಾಕೂಟ ಜಗತ್ತಿನ ಪರಮೋಚ್ಚ ಪ್ರದರ್ಶನವಾಗಿ ಪರಿಗಣಿತವಾಗಿದೆ.

ಪ್ರತಿಬಾರಿಯೂ ಒಲಿಂಪಿಕ್ ನಲ್ಲಿ ಅಚ್ಚರಿಗಳು ಸ್ಫೋಟಗೊಳ್ಳುತ್ತವೆ. ಹಾಗಾಗಿ ಒಲಿಂಪಿಕ್ ರೋಮಾಂಚನ ಚಿರಂತನ. ಇಲ್ಲಿ ಪ್ರತಿ ಬಾರಿಯೂ ಹೊಸ ಹೊಸ ಹೀರೋಗಳು ಸೃಷ್ಟಿಯಾಗುತ್ತಾರೆ. ಇಲ್ಲಿ ದ್ರೋಣಾಚಾರ್ಯನಿಂದ ತರಬೇತಿ ಪಡೆದು ಪರಿಪೂರ್ಣ ವಿದ್ಯಾಪಾರಂಗತರೆನಿಸಿಕೊಂಡ ಅರ್ಜುನರೂ ಬರುತ್ತಾರೆ. ಹಿಂದೆ ಪದಕ ಗೆದ್ದು ಅಪೂರ್ವ ಸಾಧನೆ ಮಾಡಿ ಮತ್ತೆ ಪದಕ ಸೂರೆ ಮಾಡಲು ಹಿರಿಯ ಪಟುಗಳೂ ಬರುತ್ತಾರೆ. ಪದಕದ ಬಗ್ಗೆ ಆಸೆಯ ನೋಟ ಹೊತ್ತ ಹೊಸಬರೂ ಬರುತ್ತಾರೆ. ಶ್ರೀಮಂತ ರಾಷ್ಟ್ರಗಳೆನಿಸಿದ ಅಮೆರಿಕಾ, ಜಪಾನ್, ಜರ್ಮನಿಯಿಂದ ಆಟಗಾರರು ಪದಕಗಳನ್ನು ಹೊತ್ತೊಯ್ಯಲು ಸೂಕ್ತ ಪೆಟ್ಟಿಗೆಯೊಡನೆ ಅತಿ ಆತ್ಮವಿಶ್ವಾಸದಿಂದ ಬರುತ್ತಾರೆ. ಬಡ ರಾಷ್ಟ್ರಗಳಾದ ಸುರಿನಾಮ್, ಮೊರಾಕ್ಕೊ, ಕೀನ್ಯಾದಿಂದ ಕೀಳರಿಮೆಯೊಡನೆ ಬರುವ ಆಟಗಾರರೂ ಇದ್ದಾರೆ. ಆದರೆ ಗೆದ್ದೇ ಗೆಲ್ಲುವೆವೆಂಬ ಭ್ರಮೆ ಎಷ್ಟೋ ಬಾರಿ ಹುಸಿಯಾಗುತ್ತದೆ. ಅಪರಿಚಿತನೊಬ್ಬ ಮಿಂಚಿನಂತೆ ಪದಕ ಸೂರೆ ಮಾಡುವ ಪವಾಡವೂ ಜರುಗುತ್ತದೆ. ವಿಶ್ವವಿಖ್ಯಾತ ಪೋಲ್ವಾಲ್ಟ್ ಪಟು ಸರ್ಗಿ ಬುಬ್ಕಾ ಅಡ್ಡಪಟ್ಟಿ ತೊಡರಿಕೊಂಡು ಕುಸಿದರೆ, ಇಡೀ ದೇಶದಲ್ಲಿ ೫೦ ಮೀಟರ್ ಉದ್ದದ ಏಕಮಾತ್ರ ಈಜುಕೊಳದಲ್ಲಿ ಅಭ್ಯಾಸ ಮಾಡಿದ ಸುರಿನಾಮ್ ನ ಈಜುಗಾರ ನೂರು ಮೀಟರ್ ಸ್ಪರ್ಧೆಯಲ್ಲಿ ಬಂಗಾರದ ಪದಕ ಪಡೆದು ರೋಮಾಂಚನದ ನೆರೆ ಬರಿಸುತ್ತಾನೆ. ಇಲ್ಲಿ ಸಂಪತ್ತಿನ ಸೊಕ್ಕಿನಿಂದ ಮೆರೆಯುವ ಅಮೆರಿಕಾಕ್ಕೆ ಬಡ ರಾಷ್ಟ್ರಗಳಾದ ಕೀನ್ಯಾ, ಮೊರಾಕ್ಕೋ, ಇಥಿಯೋಪಿಯಾ, ಸುರಿನಾಮ್ ರಾಷ್ಟ್ರಗಳು ಸಮಾನವಾಗಿ ತಲೆಯೆತ್ತಿ ನಿಲ್ಲುತ್ತವೆ!

ಇದಷ್ಟೇ ಅಲ್ಲ; ಇಲ್ಲಿ ಹುಟ್ಟುವ ಹೀರೋಗಳು ಆಟದ ಸಾಧನೆಯಿಂದಾಚೆಗೂ ಜನರ ಮನಸ್ಸಿನಲ್ಲಿ ಅಮರರಾಗುತ್ತಾರೆ. ಇಲ್ಲಿಗೆ ೯೭ ವರ್ಷಗಳ ಹಿಂದೆ ಅಮೆರಿಕದ ಸೆಂಟ್ ಲೂಯಿನಲ್ಲಿ (೧೯೦೪) ಆಟಗಳ ಉತ್ಸವ ನಡೆಯುವುದು ಬಹುದೂರದ ದ್ವೀಪವಾಸಿಯೊಬ್ಬನಿಗೆ ಗೊತ್ತಾಯಿತು. ಆತ ಅಂಚೆ ಪೇದೆ. ಅದರಲ್ಲಿ

ಭಾಗವಹಿಸುವ ಉತ್ಸಾಹ ಬಂತು. ಆದರೆ ದೂರದ ನಾಡಿಗೆ ಹೋಗಲು ಹಣ ಬೇಕು. ಏನೇನೋ ಕೆಲಸ ಮಾಡಿ, ಹಣ ಹೊಂದಿಸಿಕೊಂಡು ಆತ ದೋಣಿ ಹತ್ತಿ ಅಮೆರಿಕಾದ ನ್ಯೂ ಅರ್ಲಿಯನ್ಸ್ ತಲುಪಿಯೇ ಬಿಟ್ಟ. ಅಲ್ಲಿ ಚಪಲ ತಾಳಲಾರದೆ ಜೂಜಾಡಿ ಹಣ ಕಳೆದುಕೊಂಡ. ಸರಿ, ಸಿಕ್ಕಿದ ಬಂಡಿಯೇರಿ ಸೇಂಟ್ ಲೂಯಿ ತಲುಪಿದ. ಅಂತೂ ಅಲ್ಲಲ್ಲಿ ಸುತ್ತಾಡಿ ಕೊನೆಗೆ ೪೦ ಕಿ. ಮೀ. ದೂರದ ಸ್ಪರ್ಧೆಯಲ್ಲಿ ಭಾಗವಹಿಸಲು ದಾಖಲು ಮಾಡಿಕೊಂಡ. (೧೯೦೪ರಲ್ಲಿ ಹೆಚ್ಚಿನ ರಾಷ್ಟ್ರಗಳು ಭಾಗವಹಿಸುತ್ತಿರಲ್ಲಿಲ್ಲ. ಈಗಿನಂತೆ ಆಗ ಕಠಿಣ ನಿಯಮಗಳಿರಲಿಲ್ಲ).

ಈ ಅಂಚೆ ಪೇದೆ ಓಡುವುದಕ್ಕೂ ಸಿದ್ಧತೆ ಮಾಡಿಕೊಂಡಿರಲಿಲ್ಲ. ದೊಡ್ಡ ಬೂಟುಗಳು, ಉದ್ದನೆಯ ಪ್ಯಾಂಟು, ತುಂಬು ತೋಳಿನ ಷರ್ಟು, ತಲೆಯ ಮೇಲೊಂದು ಹ್ಯಾಟು ತೊಟ್ಟು ನಿಂತ. ಓಡಲು ಅನುಕೂಲವಾಗಲಿ ಎಂದು ಅಮೆರಿಕಾದ ಆಟಗಾರನೊಬ್ಬ ಮಂಡಿಯ ಬಳಿ ಪ್ಯಾಂಟ್ ಕತ್ತರಿಸಿ ಚಡ್ಡಿ ಮಾಡಿದ.

ಇದು ಒಲಿಂಪಿಕ್ಸ್ ಮ್ಯಾರಾಥಾನ್ ಸ್ಪರ್ಧೆ ಎಂದು ಯಾರೋ ಅವನ ಕಿವಿಯಲ್ಲಿ ಉಸುರಿದರು. ಸರಿ ಎಂದು ತಲೆಯಲ್ಲಾಡಿಸಿ ಆತ ಓಡಲು ಆರಂಭಿಸಿದ. ಸ್ಪರ್ಧೆಯ ತೀವ್ರತೆ ಅವನನ್ನು ತಟ್ಟಿರಲಿಲ್ಲ. ಅಲ್ಲಲ್ಲಿ ಸಿಕ್ಕವರನ್ನು ನಿಂತು ಮಾತನಾಡಿಸಿ ತನ್ನ ಇಂಗ್ಲಿಷ್ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಆತ ಯತ್ನಿಸುತ್ತಿದ್ದ.

ಸ್ಪರ್ಧೆಯ ಅರ್ಧ ದೂರ ಕ್ರಮಿಸಿದಾಗ ಆತನಿಗೆ ಹಸಿವಾಯಿತು. ಪಕ್ಕದಲ್ಲಿದ್ದ ಸೇಬಿನ ತೋಟಕ್ಕೆ ಹೋಗಿ ಹಣ್ಣು ತಿಂದು ಮತ್ತೆ ಓಡಲಾರಂಭಿಸಿದ. ಅಂತಿಮವಾಗಿ ಐದನೆಯವನಾಗಿ ಸ್ಪರ್ಧೆ ಮುಗಿಸಿದ. ಈ ವಿಲಕ್ಷಣ ಅಂಚೆ ಪೇದೆ ಫೆಲಿಕ್ಸ್ ಕಾರ್ವಯಲ್. ಅವನ ದೇಶ ಕ್ಯೂಬಾ. ಅವನೇ ನಿಜವಾದ ಒಲಿಂಪಿಕ್ಸ್ ಹೀರೋ. ಒಲಿಂಪಿಕ್ಸ್ ಚೇತನಕ್ಕೆ ಹೊಸ ಆಯಾಮ ನೀಡಿದವನು.

ಈತ, ೧೯೩೬ರ ಮೇ ೨೫ರಂದು ೪೫ ನಿಮಿಷಗಳ ಅಂತರದಲ್ಲಿ ೧೦೦ ಮೀ, ೨೦೦ ಮೀ, ಮತ್ತು ಲಾಂಗ್ ಜಂಪ್ ನಲ್ಲಿ ಹೊಸ ದಾಖಲೆ ಬರೆದ. ತನ್ನ ದೇಶದ ರಿಲೇ ತಂಡವನ್ನು ಮುನ್ನಡೆಸಿ ೪ನೇ ಚಿನ್ನದ ಪದಕ ಗೆದ್ದ. ಅದೇ ದಾಖಲೆಯನ್ನು ಬರ್ಲಿನ್ ಒಲಿಂಪಿಕ್ಸ್ ನಲ್ಲಿ ಪುನರಾವರ್ತಿಸಿದ. ಹಿಟ್ಲರನ ಅರ್ಯ ಪ್ರತಿಷ್ಠೆಯ ವೇದಿಕೆಯಾಗಿದ್ದ ಬರ್ಲಿನ್ ಒಲಿಂಪಿಕ್ಸನಲ್ಲಿ ಹೊಸ ಇತಿಹಾಸ ಬರೆದ ಆ ಕರಿಯನೇ ಜೆಸ್ಸಿ ಓವೆನ್ಸ್. ಕ್ರೀಡಾಚೇತನಕ್ಕೆ ಹೊಸ ಭಾಷ್ಯ ಬರೆದವನು.

ರೊಮೇನಿಯಾ ದೇಶವನ್ನು ಬಿಟ್ಟು ೧೯೭೬ರಲ್ಲಿ ಮಾಂಟ್ರಿಯಲ್ ಗೆ ಬಂದಿಳಿದಾಗ ಈ ಬಾಲೆಗೆ ೧೪ರ ವಯಸ್ಸು. ತನ್ನ ಅಪೂರ್ವ ಲಾಸ್ಯದಿಂದ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಮೊಟ್ಟ ಮೊದಲ ಬಾರಿಗೆ 'ಫರ್ ಫೆಕ್ಟ್ ೧೦' ಅಂಕ ಸಂಪಾದಿಸಿದಾಗ ಕ್ರೀಡಾಂಗಣ ಅಚ್ಚರಿಯ ಮಡುವಾಯಿತು. 'ಮುಂದಿನ ನಿನ್ನ ಯೋಜನೆಯೇನು?' ಎಂದು ಗೆಲುವಿನ ನಂತರ ಪತ್ರಕರ್ತರು ಕೇಳಿದ ಪ್ರಶ್ನೆಗೆ, 'ಮನೆಗೆ ಹೋಗಬೇಕು' ಎಂದು ಮುಗ್ಧವಾಗಿ ಉತ್ತರಿಸಿದ ನಾಡಿಯಾ ಕೊಮನೆಚಿ ಒಲಿಂಪಿಕ್ ತರುವ ಅಚ್ಚರಿಯ ಸೀಮೆಯನ್ನು ವಿಸ್ತರಿಸಿದವಳು.

ಒಲಿಂಪಿಕ್ ಇಂಥ ಹೀರೋಗಳು, ರೋಮಾಂಚನಗಳ ಆಗರ. ಇಲ್ಲಿ ಆಟದ ಸಾಮ್ರಾಟರು, ರಾಜರು, ಯುವರಾಜರು, ಮುತ್ಸದ್ಧಿಗಳು, ಯೋಧರು ಜನಿಸಿ ಕೂಟವನ್ನು ರಸಾನುಭೂತಿ ನೀಡುವ ವೇದಿಕೆಯನ್ನಾಗಿ ರೂಪಿಸಿದ್ದಾರೆ.

ಆದರೆ ಇನ್ನೊಂದು ಹಂತದಲ್ಲಿ ಒಲಿಂಪಿಕ್ ಪ್ರಭೆಗೆ ಮಂಕು ಹಿಡಿಯುತ್ತಿರುವುದು ಗೋಚರವಾಗುತ್ತಿದೆ. ಈಗ ಹೀರೋಗಳ ಕಾಲ ಮುಗಿಯುತ್ತಿದೆಯೆನಿಸುತ್ತದೆ. ಕ್ರೀಡೆಯ ರಾಜರು, ಯುವರಾಜರು, ಯೋಧರ ಅಭಾವ ಅಬಾಧಿತವಾಗಿ ಕಾಡುತ್ತಿದೆ. ಓವೆನ್, ನುರ್ಮಿ,ಧ್ಯಾನ್ಚಂದ್, ನಾಡಿಯಾಗಳ ಕೊರತೆ ಎದ್ದು ಕಾಣುತ್ತಿದೆ.

ಏನಿದ್ದರೂ ಇದು ದಿಢೀರ್ ಸಂಸ್ಕೃತಿಯ ಕಾಲ. ಒಲಿಂಪಿಕ್ ಹೀರೋಗಳು ದಿಢೀರನೆ ಸೃಷ್ಟಿಯಾಗಿ ದಿಢೀರನೆ ನಾಶವಾಗಿ ಬಿಡುತ್ತಾರೆ. ಬಾಬ್ ಬೀಮನ್, ಡೇಲಿ ಥಾಂಸನ್, ಫಾರ್ಲೆನ್ ಜಾಯ್ನರ್, ಕರ್ಸಿ, ಅಷ್ಟೇ ಏಕೆ ಅಸಾಧಾರಣ ಕ್ರೀಡಾಪಟು ಕಾರ್ಲ್ ಲೂಯಿಸ್ ಕೂಡ ನಿನ್ನೆಯ ಹೀರೋಗಳು. ಜೆಸ್ಸಿ, ಧ್ಯಾನ್ಚಂದ್, ನುರ್ಮಿ,ಆರ್ಟರ್, ನಾಡಿಯಾ ಅವರಂಥ ಅಜರಾಮರ ಹೀರೊಗಳ ಸೃಷ್ಟಿಕಾರ್ಯ ಮುಗಿದಿದೆ. ಮನುಷ್ಯ ಸಾಮರ್ಥ್ಯವನ್ನು ವಿಸ್ತರಿಸುವ ಕಾರ್ಯ ಈಗ ಜರುಗಬಹುದು. ಅವರ ಸಾಧನೆಯನ್ನು ಕಂಡು ಅವರನ್ನು ಅಪಹರಿಸಿ ಎದೆಯಲ್ಲಿ ಬಚ್ಚಿಟ್ಟುಕೊಳ್ಳುವ ಪ್ರೇಕ್ಷಕ ಸಮೂಹವಿದೆಯೆ? ಅವರ ಗೆಲುವಿನಿಂದ ಅವರವರ ರಾಷ್ಟ್ರದ ಜನತೆ ತಾತ್ಕಾಲಿಕವಾಗಿ ಎದೆಯುಬ್ಬಿಸಬಹುದು. ಆದರೆ ನಿಜವಾಗಿಯೂ ಅವರ ಗೆಲುವಿನಿಂದ ಸಂತಸದ ಹೊಳೆ ಹರಿಯುವುದು. ಅವರು ಎಂಡಾರ್ಸ್ ಮಾಡುವ ಉತ್ಪನ್ನಗಳನ್ನು ತಯಾರಿಸುವ ಕಂಪನಿಗಳು. ಜೇಬಿನಲ್ಲಿ ಏಳು ಡಾಲರ್ ಹಿಡಿದು ಬಂದು ನಾಲ್ಕು ಪದಕ ಹೊಡೆದ ಜೆಸ್ಸಿ ಓವೆನ್ಸ್ ಕಾಲ ಮುಗಿದಿದೆ. ಈಗ ಒಲಿಂಪಿಕ್ ಬಯಲಿಗೆ ಕಾಲಿಡುವ ಮುನ್ನವೇ ಕೋಟ್ಯಾಧಿಪತಿಗಳಾಗಿರುವ ಅಥ್ಲೀಟುಗಳದೇ ಸಾಮ್ರಾಜ್ಯ.

ಒಲಿಂಪಿಕ್ ಕ್ರೀಡಾಕೂಟ ಈಗೊಂದು ವ್ಯವಹಾರ. ಅದನ್ನು ನಿಯಂತ್ರಿಸುತ್ತಿರುವುದೇ ವಾಣಿಜ್ಯ ನಿಯಮಗಳು. ಟೆಲಿವಿಷನ್ ಪ್ರಸಾರದ ಹಕ್ಕುಗಳು, ಸ್ಪಾನ್ಸರ್ಷಿಪ್ ಗಳು ತರುವ ಮಿಲಿಯನ್ ಡಾಲರ್ ಗಳಿಲ್ಲದೇ ಯಾವುದೇ ದೇಶ ಒಲಿಂಪಿಕ್ಸ್ ನಡೆಸಲು ಸಾಧ್ಯವಿಲ್ಲ. ಗೆಲುವಿಗಿಂತಲೂ ಭಾಗವಹಿಸುವುದೇ ಮುಖ್ಯ ಎಂಬ ಒಲಿಂಪಿಕ್ ಧ್ಯೇಯ ಅನಿವಾರ್ಯವಾಗಿ ದುರ್ಬಲಗೊಂಡಿದೆ. ಆಟದ ಹೆಸರಿನಲ್ಲಿ ವಾಣಿಜ್ಯ ವ್ಯವಹಾರದ ಕೈ ಮೇಲಾಗಿರುವುದು ಸುಸ್ಪಷ್ಟಗೊಂಡಿದೆ. ಕ್ಯೂಬಾ ದೇಶದ ಪೆಲಿಕ್ಸ್ ಕಾರ್ವಯಲ್ ನ ಕ್ರೀಡಾಪ್ರೇಮ, ಉತ್ಸಾಹ ಈಗ ಮರೆಯಾಗಿದೆ. ಇದೆಲ್ಲ ನಿಜ. ಆದರೂ ಒಲಿಂಪಿಕ್ ಕೂಟ ಉಳಿದುಬಂದಿದೆ. ಅನೇಕ ಎಡರು – ತೊಡರುಗಳನ್ನು ಎದುರಿಸಿ ಉಳಿದುಕೊಂಡು ಬಂದಿರುವ ಅದರ ಅಂತಃಸತ್ವವನ್ನು ಮೆಚ್ಚದಿರಲು ಸಾಧ್ಯವಿಲ್ಲ. ಎರಡು ಮಹಾಯುದ್ಧಗಳ ವಿನಾಶವನ್ನು, ಆರ್ಥಿಕ ಉಬ್ಬರವನ್ನು, ಅಂತರಾಷ್ಟ್ರೀಯ ರಾಜಕೀಯ ಒತ್ತಡಗಳನ್ನು, ತೀವ್ರವಾದಿಯ ದಾಳಿಯನ್ನೂ, ಶಕ್ತ ರಾಷ್ಟ್ರಗಳ ತಿಕ್ಕಲುತನವನ್ನು ಎದುರಿಸಿ ಅದು ಉಳಿದುಕೊಂಡಿದೆ. ಏಕೆಂದರೆ ಒಮ್ಮೆ ಒಲಿಂಪಿಕ್ ಕೂಟ ಆರಂಭವಾದ ಕೂಡಲೇ ಆಟದ ಮೋಡಿಗೆ ಎಲ್ಲರೂ ಒಳಗಾಗಿ ಬಿಡುತ್ತಾರೆ. ವಾಣಿಜ್ಯೀಕರಣದ ಬಗೆಗಿನ ಹಪಾಹಪಿ, ಔಷಧಿ ಸೇವನೆಯ ಹಗರಣಗಳು, ರಾಷ್ಟ್ರಗಳ ಬಹಿಷ್ಕಾರಗಳ ಕಹಿ ಭಾವನೆಗಳು ವಿರಾಮ ಪಡೆಯುತ್ತವೆ. ಕ್ರೀಡೆಯ ವೈಭವಕ್ಕೆ ಸಾಣೆ ಹಿಡಿಯುವ ಕಾರ್ಯ ಆರಂಭವಾಗುತ್ತದೆ. ಇನ್ನಷ್ಟು ವೇಗವಾಗಿ ಓಡುವ, ದೂರಕ್ಕೆ ಎಸೆಯುವ, ಎತ್ತರಕ್ಕೆ ನೆಗೆಯುವ, ಹಿಂದಿನ ದಾಖಲೆಯನ್ನು ಅಳಿಸುವ ಉತ್ಸಾಹ ತುಂಬಿಕೊಳ್ಳುತ್ತದೆ. ಮಾನವ ಸಾಮರ್ಥ್ಯವನ್ನು ವಿಸ್ತರಿಸುವ ಚೇತನದ ಶ್ಲಾಘನೆ ಆರಂಭವಾಗುತ್ತದೆ. ಸ್ಪರ್ಧೆಯ ತೀವ್ರತೆ ಉಸಿರು ಬಿಗಿಹಿಡಿದು ಕೂರುವಂತೆ ಮಾಡುತ್ತದೆ. ಅಸಾಧಾರಣ ಪ್ರತಿಭೆ, ಅಸಾಮಾನ್ಯ ಕೌಶಲ್ಯಗಳು ಅಪರೂಪದ ದೃಶ್ಯ ವೈಭವವನ್ನು ಕಟ್ಟಿಕೊಡುತ್ತವೆ. ಜಗತ್ತಿನ ಮಾನವ ಪ್ರತಿನಿಧಿಗಳೆಲ್ಲಾ ಒಂದಾಗಿ ಬೆರೆತು ಭ್ರಾತೃತ್ವದ ಹಬ್ಬವನ್ನು ಆಚರಿಸುತ್ತಾರೆ.

ಹೀಗಾಗಿ ಒಲಿಂಪಿಕ್ ರೋಮಾಂಚನ ನಿರಂತರವಾಗಿ ಮುಂದುವರೆಯುತ್ತದೆ.

# 1.4(ಓದುಪತ್ರ) ಕಾಡುಮನುಷ್ಯನ ಕರಾರುಗಳು

**– ಪೂರ್ಣಚಂದ್ರ ತೇಜಸ್ವಿ**

೧೮೫೪ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷರು ಅಲ್ಲಿನ ಮೂಲ ನಿವಾಸಿಗಳಾದ ರೆಡ್ಡಿಂಡಿಯನ್ನರ ಯಜಮಾನನಿಗೆ ಅವರಿರುವ ಕಾಡನ್ನು ಸರ್ಕಾರಕ್ಕೆ ಮಾರಬೇಕೆಂದೂ ಅದಕ್ಕೆ ಬದಲಾಗಿ ಅವರಿಗೆ ಅಮೆರಿಕಾದ ಬೇರೆಡೆಗಳಲ್ಲಿ ವಿಸ್ತಾರವಾದ ಕಾಡುಗಳನ್ನು ಕೊಡಲಾಗುವುದೆಂದೂ ಹೇಳಿಕಳಿಸಿರುತ್ತಾರೆ. ಆಗ ರೆಡ್ ಇಂಡಿಯನ್ ರ ಯಜಮಾನನಾದ ಛೀಫ್ ಸಟಲೇ ಅಮೆರಿಕಾದ ಅಧ್ಯಕ್ಷರಿಗೆ ಬರೆದ ಉತ್ತರ ಇದು. ಮನುಷ್ಯನ ಇತಿಹಾಸದಲ್ಲಿ ಮಾನವನೊಬ್ಬ ಪರಿಸರದ ಬಗ್ಗೆ ಹೇಳಿರುವ ಮಹೋನ್ನತ ಹೇಳಿಕೆ ಇದು. ಅಮೆರಿಕದ ಅನಾಗರೀಕ ಕಾಡುಮನುಷ್ಯರ ಯಜಮಾನನ ಈ ಮಹಾನ್ ತಿಳುವಳಿಕೆಯನ್ನು ನಾವಿನ್ನೂ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲ. ನೀರು, ನದಿ, ನೆಲಗಳನ್ನೆಲ್ಲಾ ಹಾಳುಗೆಡವಿಕೊಂಡು, ಚರ್ನೋಬಿಲ್ ಭೋಪಾಲ್ಗಳಲ್ಲೆಲ್ಲಾ ಲಕ್ಷಾಂತರ ಜನಗಳನ್ನು ಬಲಿಕೊಟ್ಟ ಅನಂತರವೂ ಸಹ:–

ಅದು ಹೇಗೆ ಆಕಾಶವನ್ನು ಗಾಳಿಯನ್ನು ಭೂಮಿಯನ್ನು ಮಾರಲಾಗುತ್ತದೆ? ಈ ಕಲ್ಪನೆ ನಮಗಂತೂ ಅಪರಿಚಿತ!

ಗಾಳಿಯ ಶುಭ್ರತೆ, ನೀರಿನ ಹೊಳಪಿಗೆ ನಾನು ಒಡೆಯನಲ್ಲದಿದ್ದರೆ ಅದನ್ನು ಹೇಗೆ ತಾನೆ ಇನ್ನೊಬ್ಬರಿಗೆ ಮಾರುವುದು?

ಈ ಭೂಮಿಯ ಪ್ರತಿಯೊಂದೂ ನಮಗೆ ಪೂಜ್ಯವಾಗಿದ್ದು ಹೊಳೆಯುವ ಪೈನ್ ಎಲೆಗಳು, ಝುಗಝುಗಿಸುವ ಮರಳಿನ ದಂಡೆಗಳು, ಮಂಜು ಮುಸುಗಿದ ನಸುಗತ್ತಲ ಮಹಾರಣ್ಯಗಳು, ಗುಂಯ್ಗುಡುವ ಚೀರುವ ಪ್ರತಿ ಕೀಟಸ್ತೋಮಗಳು ನಮ್ಮಿಂದ ಪೂಜಿಸಲ್ಪಡುತ್ತವೆ. ನಮ್ಮ ಪ್ರೀತಿ ವಿಶ್ವಾಸಗಳು ಈ ಗಿಡಮರಗಳೊಳಗಿನ ಜೀವದ್ರವ್ಯದೊಳಗೇ ಹರಿಯುತ್ತಿದೆ!

ಬಿಳಿಯ ಮನುಷ್ಯ ಸತ್ತಮೇಲೆ ಅವನು ತನ್ನ ತಾಯಿಭೂಮಿಯನ್ನು ಬಿಟ್ಟು ಚುಕ್ಕಿಗಳೆಡೆಯಲ್ಲೆಲ್ಲೋ ಸ್ವರ್ಗಕ್ಕೆ ಹೋಗುತ್ತಾನೆ. ಆದರೆ ಮೃತವಾದ ರೆಡ್ ಇಂಡಿಯನ್ ತನ್ನ ಸುಂದರ ತಾಯಿಭೂಮಿಯ ಮಡಿಲನ್ನು ಬಿಟ್ಟು ಹೋಗುವುದೇ ಇಲ್ಲ. ನಾವು ಈಗಲೂ ಆಮೇಲೂ ಭೂಮಿಯ ಒಂದು ಭಾಗ. ಭೂಮಿ ನಮ್ಮ ಒಂದು ಭಾಗ.

ಸುಗಂಧ ಸೂಸುವ ಹೂವುಗಳು ನಮ್ಮ ಅಕ್ಕತಂಗಿಯರು, ಜಿಂಕೆ, ಕುದುರೆ, ಗರುಡ ಇವೆಲ್ಲಾ ನಮ್ಮ ಅಣ್ಣತಮ್ಮಂದಿರು, ಕಲ್ಲುಬಂಡೆಗಳ ಈ ಪ್ರಪಾತಗಳು, ಹರಿದ್ವರ್ಣದ ಈ ಬಯಲುಗಳು, ಬೆಚ್ಚನೆಯ ಬಿಸಿಮೈಯ್ಯ ಕುದುರೆಗಳು ಎಲ್ಲ ನಮ್ಮ ಕುಟುಂಬದ ವಿವಿಧ ಮುಖಗಳು.

ಬಿಳಿಯ ಜನರ ಪರಮೋಚ್ಛ ಯಜಮಾನ ನಮ್ಮ ಭೂಮಿಯನ್ನು ಕೊಳ್ಳುತ್ತೇನೆಂದು ಹೇಳಿಕಳಿಸಿದರೆ ನಮ್ಮ ಪ್ರಾಣವನ್ನೇ ಕೇಳಿದ ಹಾಗೆ. ಆದರೆ ಅಮೆರಿಕಾದ ಅಧ್ಯಕ್ಷ ಇಡೀ ನಮ್ಮೆಲ್ಲರಿಗೂ ಯಜಮಾನ. ನಾವೆಲ್ಲಾ ಅವನ ಮಕ್ಕಳು. ಆತನ ಮಾತಿಗೆ ನಾವು ಗೌರವ ಕೊಡುತ್ತೇವೆ. ನಮ್ಮ ಭೂಮಿ ಕೊಳ್ಳುತ್ತೇನೆಂದು ಆತ ಹೇಳಿಕಳಿಸಿರುವುದನ್ನು ನಾವು ಪರಿಗಣಿಸುತ್ತೇವೆ. ಆದರೆ ಅದು ಅಷ್ಟು ಸುಲಭ ಇಲ್ಲ. ಯಾಕಂದರೆ ಈ ಭೂಮಿ ನಮಗೆ ಪವಿತ್ರವಾದುದು.

ಈ ನದಿ ತೊರೆಗಳಲ್ಲಿ ಹೊಳೆಹೊಳೆಯುತ್ತಾ ಹರಿಯುವ ನೀರು ನಮಗೆ ಬರೀ ನೀರಲ್ಲ. ನಮ್ಮ ಪುರಾತನ ರಕ್ತ ಅದು. ನಾವೇನಾದರೂ ಈ ಭೂಮಿಯನ್ನು ನಿಮಗೆ ಕೊಟ್ಟರೆ ನಮಗೆ ಪವಿತ್ರವಾದುದ್ದನ್ನು ಪ್ರಾಣಪ್ರಿಯವಾಗಿದ್ದನ್ನು ನಿಮಗೆ ಕೊಟ್ಟಿದ್ದೇವೆ ಎಂಬುದನ್ನು ನೀವು ಮರೆಯಕೂಡದು. ನಿಮ್ಮ ಮಕ್ಕಳು ಮೊಮ್ಮೊಕ್ಕಳಿಗೆ ಇದು ಪವಿತ್ರ ಎನ್ನುವುದನ್ನು ಕಲಿಸಿ ಕೊಡಬೇಕು. ಈ ಕೊಳ ಸರೋವರಗಳಲ್ಲಿ ಸ್ಪಂದಿಸುವ ಪ್ರತಿಬಿಂಬಗಳಲ್ಲಿ ನಮ್ಮ ಜನರ ಆತ್ಮವೇ ಇದೆ. ಈ ನದಿಯ ಹರಿಯುವ ನೀರು ನನ್ನ ತಂದೆಯ ತಂದೆಯ ತಂದೆಯ ಮಾತುಗಳನ್ನೂ ಸಹ ಪ್ರತಿಫಲಿಸುತ್ತದೆ.

ಈ ನದಿಗಳೆಲ್ಲ ನಮ್ಮ ಅಣ್ಣತಮ್ಮಂದಿರು, ನಮ್ಮ ದಾಹ ನಿವಾರಿಸಿದ್ದಾರೆ. ನಮ್ಮ ದೋಣಿಗಳನ್ನು ಸಾಗಿಸಿದ್ದಾರೆ, ನಮ್ಮ ಮಕ್ಕಳು ಮರಿಮಕ್ಕಳಿಗೆ ಊಟಕೊಟ್ಟು ಸಾಕಿದ್ದಾರೆ. ಜ್ಞಾಪಕ ಇಟ್ಟುಕೊಳ್ಳಿ ನಿಮ್ಮ ಮಕ್ಕಳಿಗೆ ತಿಳಿಸಿ. ಈ ತೊರೆ ನದಿಗಳು ನಮ್ಮ ನಿಮ್ಮ ಅಣ್ಣತಮ್ಮಂದಿರು. ನಿಮ್ಮ ಒಡಹುಟ್ಟಿದವರನ್ನು ನೋಡಿಕೊಂಡ ಹಾಗೇ ಇವನ್ನೂ ನೋಡಿಕೊಳ್ಳಬೇಕು.

ನಮಗೆ ಗೊತ್ತು. ಬಿಳಿಯ ಜನರಿಗೆ ನಮ್ಮ ಜೀವನದ ಉದ್ದೇಶ ಆದರ್ಶಗಳು ಅರ್ಥವಾಗುವುದೇ ಇಲ್ಲ. ಅವನಿಗೆ ಈ ಭೂಮಿಗೂ ಆ ಭೂಮಿಗೂ ವ್ಯತ್ಯಾಸವೇ ಕಾಣುವುದಿಲ್ಲ. ಯಾಕೆಂದರೆ ಅವನು ಆಗಂತುಕ. ಭೂಮಿಯಿಂದ ಏನು ಬೇಕಾದರೂ ಹೊತ್ತೊಯ್ಯಬಹುದೆಂದು ತಿಳಿದಿದ್ದಾನೆ. ಭೂಮಿ ಅವನಿಗೆ ತಾಯಿ ಅಲ್ಲ. ವೈರಿ! ಅದಕ್ಕೇ

ಅವನು ಅದನ್ನು ಗೆಲ್ಲಬೇಕು. ಆಕ್ರಮಿಸಬೇಕು ಎಂದು ತಿಳಿಯುತ್ತಾನೆ. ತನ್ನ ತಂದೆತಾಯಿಗಳು ಮಣ್ಣಾದ ಜಾಗಗಳನ್ನು ಸಹ ಕೊಟ್ಟು ಎತ್ತಲೋ ಹೋಗುತ್ತಾನೆ. ಭೂಮಿ ತಂದೆ ತಾಯಿ ಮಕ್ಕಳು ಎಲ್ಲವನ್ನೂ ಕುರಿಕೋಳಿಗಳಂತೆ ಕೊಟ್ಟುಕೊಳ್ಳುವ ವಸ್ತು ಎಂದು ತಿಳಿದಿದ್ದಾನೆ. ಬಿಳಿ ಮನುಷ್ಯನ ಹಿಂಗದ ಹಸಿವೆ ದುರಾಸೆಗಳು ಇಡೀ ಭೂಮಂಡಲವನ್ನೇ ಬಂಜರುಮಾಡುತ್ತವೆ. ನನಗೆ ನಿಮ್ಮದ್ದೊಂದೂ ಅರ್ಥವಾಗುವುದಿಲ್ಲ. ನಮ್ಮ ಜೀವನದ ಉದ್ದೇಶಗಳೇ ಬೇರೆ.

ನಿಮ್ಮ ಪೇಟೆ ಪಟ್ಟಣಗಳನ್ನು ನೋಡಿದರೆ ನಮಗೆ ಕಣ್ಣು ನೋವು ಬರುತ್ತೆ. ಬಹುಶಃ ರೆಡ್ ಇಂಡಿಯನ್ ಅನಾಗರಿಕ ಕಾಡು ಮನುಷ್ಯನಾದ್ದರಿಂದ ಇರಬೇಕು. ಬಿಳಿಯ ಮನುಷ್ಯನ ಪೇಟೆಗಳಲ್ಲಿ ಶಾಂತವಾದ ನೆಮ್ಮದಿಯ ಒಂದು ಜಾಗ ಇದೆಯೆ? ಉದುರಿದ ತರಗೆಲೆಗಳ ಮರ್ಮರ, ಕೀಟಗಳ ರೆಕ್ಕೆ ಬಡಿಯುವ ಝೇಂಕಾರ ಕೇಳುವ ಒಂದಾದರೂ ಜಾಗ ಇದೆಯೆ? ನಮಗೆ ಇವೆಲ್ಲ ಹಿಡಿಸುವುದಿಲ್ಲ. ನಾನು ಅನಾಗರಿಕ ಕಾಡು ಮನುಷ್ಯ ಇರಬಹುದು! ಪೇಟೆಯ ಗಡಿಬಿಡಿ ಕಿವಿ ಕೊರೆಯುತ್ತದೆ .ಹರಿಯುವ ನೀರಿನ ಜುಳುಜುಳು ನಿನಾದ, ಕೊಳದ ತಡಿಯ ಕಪ್ಪೆಗಳ ವಟವಟ ಸಂಭಾಷಣೆ ಕೇಳದ ಸ್ಥಿತಿ ಬಂದರೆ ಇನ್ನೇನಿದೆ ಹೇಳಿ ಜೀವನದಲ್ಲಿ? ನಾನು ಅನಾಗರಿಕ ಕಾಡು ಮನುಷ್ಯ. ನನಗೆ ನಿಮ್ಮ ಜೀವನದ ಮರ್ಜಿ ತಿಳಿಯುವುದಿಲ್ಲ.

ಗಾಳಿ ರೆಡ್ ಇಂಡಿಯನ್ನರಿಗೆ ಪೂಜ್ಯವಾದದ್ದು, ಅನರ್ಘ್ಯವಾದದ್ದು. ಯಾಕೆಂದರೆ ಸರ್ವ ಜೀವಾದಿಗಳೂ ಅದನ್ನು ಹಂಚಿಕೊಂಡು ಬದುಕುತ್ತವೆ. ಮೃಗಪಕ್ಷಿಗಳು, ಗಿಡಮರಗಳು, ಮನುಷ್ಯರು ಎಲ್ಲರಿಗೂ ಅದು ಸಮಾನ. ಬಿಳಿಯ ಮನುಷ್ಯ ಇದನ್ನು ಗಮನಿಸಿಯೇ ಇಲ್ಲ. ಸಾಯುವ ಮನುಷ್ಯನ ನಿಟ್ಟುಸಿರಿನಂತೆ ಗಾಳಿಯ ಸುಗಂಧಕ್ಕೆ ಅವನ ಮೂಗು ಕುರುಡಾಗಿದೆ.

ನಾವು ನಮ್ಮ ಭೂಮಿಯನ್ನು ನಿಮಗೆ ಕೊಟ್ಟರೆ ಈ ಗಾಳಿಯ ಅನರ್ಘ್ಯತೆಯನ್ನು ಜ್ಞಾಪಕ ಇಟ್ಟುಕೊಳ್ಳಬೇಕು. ಅದರಿಂದ ಜೀವಿಸುವ ಎಲ್ಲ ಚರಾಚರ ವಸ್ತುಗಳ ಚೈತನ್ಯ ಆತ್ಮ ಅದರೊಳಗಿದೆ. ನಮ್ಮ ಪಿತೃ ಪಿತಾಮಹರು ಲೋಕಕ್ಕೆ ಬಂದಕೂಡಲೆ ಮೊದಲು ಸೆಳೆದಿದ್ದು ಅದನ್ನೇ. ಸಾಯುವಾಗ ಕೊಟ್ಟಕೊನೆಗೆ ಹೊರಬಿಟ್ಟಿದ್ದು ಅದನ್ನೇ. ನಾವು ನಮ್ಮ ಭೂಮಿ ನಿಮಗೆ ಕೊಟ್ಟರೆ ನಮಗೂ ನಿಮಗೂ ಸಮಾನವಾದ ಈ ಗಾಳಿಯನ್ನು ಪವಿತ್ರ ಎಂದು ಕಾಣುತ್ತೀರಾ?

ನಮ್ಮ ಭೂಮಿ ನಿಮಗೆ ಕೊಡುವ ಬಗ್ಗೆ ಯೋಚಿಸುತ್ತೇವೆ. ಅದಕ್ಕೆ ಮೊದಲು ಇನ್ನೊಂದು ಕರಾರು. ಈ ಭೂಮಿಯ ಮೇಲಿರುವ ಇತರ ಮೃಗಗಳನ್ನು ನಿಮ್ಮ ಒಡಹುಟ್ಟಿದವರೆಂದು ಪರಿಗಣಿಸುತ್ತೀರಾ?

ನಾನೊಬ್ಬ ಅನಾಗರಿಕ. ಆದರೆ ನನ್ನ ತಿಳುವಳಿಕೆಗೆ ಇದು ಗೊತ್ತು.

ನಾನು ನಮ್ಮ ವಿಶಾಲ ಹುಲ್ಲುಗಾವಲಿನಲ್ಲಿ ಸಾಗುವ ನಿಮ್ಮ ರೈಲುಗಳಿಂದ ಬಿಳಿಯ ಮನುಷ್ಯರು ಗುಂಡು ಹೊಡೆದು ಕೊಂದ ಸಹಸ್ರಾರು ಕಾಡುಗೂಳಿಗಳ ದೇಹ ಬಯಲಿನಲ್ಲಿ ಕೊಳೆಯುತ್ತ ಬಿದ್ದಿದ್ದನ್ನು ನೋಡಿದ್ದೇನೆ. ನಾನೊಬ್ಬ ಅನಾಗರಿಕ. ಆದರೆ ಹೊಗೆ ಕಾರುತ್ತಾ ಸಾಗುವ ನಿಮ್ಮ ಕಬ್ಬಿಣದ ಕುದುರೆ ಅದು ಹೇಗೆ ಹಸಿದಾಗ ನಿಮಗೆ ಊಟವಾಗಿ ದೊರೆಯುವ ಈ ಕಾಡು ಗೂಳಿಗಳಿಗಿಂತ ಅಮೂಲ್ಯವಾದುದು? ಈ ಮೃಗಗಳೆಲ್ಲ ಮಾಯವಾದ ಮೇಲೆ ಮತ್ತಿನ್ನಾವ ಸೌಭಾಗ್ಯಕ್ಕೆ ನಾವು ಬದುಕುತ್ತೇವೆ. ಮನುಷ್ಯನ ಆತ್ಮ ಭೂಮಿಯ ಮೇಲೆ ತನ್ನ ಏಕಾಂಗಿತನದಲ್ಲೇ ಕೊರಗಿ ಕೊಳೆತುಹೋಗುವುದಿಲ್ಲವೆ? ಈ ಮೃಗಗಳಿಗೆ ಇವತ್ತು ಏನು ಗತಿ ಬರುತ್ತೋ ಅದು ನಾಳೆ ಮನುಷ್ಯನಿಗೆ ಬರುತ್ತೆ. ನಾವೆಲ್ಲ ಒಂದೇ ಕುಟುಂಬ. ಒಂದೇ ಕುಲ.

ನಿಮ್ಮ ಮಕ್ಕಳಿಗೆ ಕಲಿಸಿ ನಾವೆಲ್ಲ ನಿಂತಿರುವ ಭೂಮಿ ನಮ್ಮೆಲ್ಲಾ ಪುರಾತನರೂ ಮಣ್ಣಾದ ಫಲವತ್ತಾದ ನೆಲ ಎನ್ನುವುದನ್ನು. ನಮ್ಮ ಮಕ್ಕಳಿಗೆ ನಾವು ಭೂಮಿ ನಮ್ಮ ತಾಯಿ ಎಂದು ತಿಳಿಸಿರುವುದನ್ನು ನಿಮ್ಮ ಮಕ್ಕಳಿಗೆ ಹೇಳಿಕೊಡುತ್ತೀರಾ? ಅದರ ಮೇಲೆ ಉಗಿದರೆ ನಿಮಗೇ ಉಗಿದಂತೆ. ಅದಕ್ಕೆ ಮಾಡಿದ ಅನ್ಯಾಯ ನಿಮಗೇ ಮಾಡಿಕೊಂಡ ಅನ್ಯಾಯ.

ನಮಗೆ ಗೊತ್ತಿರುವುದು ಇಷ್ಟು. ಈಗ ನೀವು ಕೇಳುತ್ತಿರುವ ಈ ಭೂಮಿ ನಮಗೆ ಸೇರಿದ್ದಲ್ಲ .ನಾವು ಅದಕ್ಕೆ ಸೇರಿದವರು. ಅದರಿಂದ ಹೊಮ್ಮಿದ ಸರ್ವವೂ ಒಂದೇ ರಕ್ತದ ಒಂದೇ ಕುಟುಂಬ.

ನಮಗೆ ಇಷ್ಟುಗೊತ್ತು; ಒಂದು ದಿನ ಹಠಾತ್ತಾಗಿ ಬಿಳಿ ಮನುಷ್ಯನಿಗೂ ಇದು ತಿಳಿಯುತ್ತೆ. ಅದೆಂದರೆ ನಮ್ಮ ದೇವರೇ ನಿಮ್ಮ ದೇವರೂ ಸಹ ಎನ್ನುವುದು. ನೀವು ಭೂಮಿಯನ್ನು ಕೊಂಡುಕೊಳ್ಳುವ ಮಾತಾಡುತ್ತಿರುವಂತೆಯೇ ಸೃಷ್ಟಿಕರ್ತನನ್ನೂ ಕೊಂಡುಕೊಳ್ಳಬಹುದೆಂದು ತಿಳಿದಿದ್ದೀರೋ ಏನೋ! ಅದು ಮಾತ್ರ ಎಂದೂ ಸಾಧ್ಯವಿಲ್ಲ ತಿಳಿದಿರಿ. ಅವನನ್ನು ಯಾರೂ ಮಾರುವುದಿಲ್ಲ ಕೊಳ್ಳುವುದಿಲ್ಲ.

ಯಾವುದೋ ಮಹಾನ್ ಉದ್ದೇಶದಿಂದ ದೇವರು ನಿಮಗೆ ರೆಡ್ ಇಂಡಿಯನ್ನರ ಮೇಲೆ ಈ ಭೂಮಿಯ ಮೇಲೆ ಅಧಿಕಾರ ಕೊಟ್ಟಿದ್ದಾನೆ. ಆದರೆ ಈ ತೊಟ್ಟಿಲನ್ನೇ ನೀವು ಗಲೀಜೆಬ್ಬಿಸಿ ಮಲಮೂತ್ರದ ಕಸದಿಂದ ತುಂಬಿಕೊಂಡರೆ ಒಂದು ರಾತ್ರಿ ಉಸಿರುಕಟ್ಟಿ ಸಾಯುತ್ತೀರಾ!

ನಮಗೆ ಇವತ್ತು ನಮ್ಮ ಜೀವನದ ಗುರಿಯೇ ಅರಿವಾಗದ ರಹಸ್ಯವಾಗಿದೆ. ಯಾಕೆ ಕಾಡುಗೂಳಿಗಳ ಕಗ್ಗೊಲೆಯಾಯ್ತೋ, ಯಾಕೆ ಕಾಡುಕುದುರೆಗಳನ್ನು ಬಂಧಿಸಿ ಎಳೆದೊಯ್ದರೋ, ಯಾಕೆ ಕಾಡು ಕೊಚ್ಚಿ ಅಲ್ಲಿ ಮಾತಾಡುವ ತಂತಿಗಳನ್ನು ಎಳೆದರೋ! ಎಲ್ಲಿದೆ ಈಗ ಮಹಾರಣ್ಯ! ನಾಮಾವಶೇಷ. ಎಲ್ಲಿದ್ದಾನೆ ನಮ್ಮ ಗರುಡ! ನಾಮಾವಶೇಷ. ಜೀವನ ಕೊನೆಯಾಗಿ ಜೀವ ಉಳಿಸಿಕೊಳ್ಳುವ ಹೋರಾಟ ಪ್ರಾರಂಭ!

# 2 ಅಭಿವೃದ್ಧಿ

2. 1 ಅಮ್ಮನ ಗುಡ್ಡ – ಚ. ಸರ್ವಮಂಗಳ

2. 2 ಮಾನವ ನಿರ್ಮಿತ ಮಹಾಸಮಸ್ಯೆಗಳು – ನಾಗೇಶ ಹೆಗಡೆ

2. 3 ಬಡತನ ನಿರ್ಮೂಲನಕ್ಕೆ ಸಂಪತ್ತಿನ ಸೃಷ್ಟಿ ಅಗತ್ಯ – ಸುಧಾಮೂರ್ತಿ

2. 4 (ಓದುಪಠ್ಯ) ಬೆಂಗಳೂರು ಬಹುರೂಪಿ ನಗರವಾಗಿ
ಬೆಳೆದು ನಿಂತ ಕಥೆ – ಸಿ.ಆರ್. ಸಿಂಹ

# 2 ಅಭಿವೃದ್ಧಿ

## ಆಶಯ:

ಅಭಿವೃದ್ಧಿ ಎಂಬ ಹುಚ್ಚು ಕುದುರೆ ಏರಿ ಹೋಗ್ತಾ ಇರೋ ಮನುಷ್ಯ ಇಡೀ ಭೂಮಿಯನ್ನು ಸಂಕಟದ ಪ್ರಪಾತಕ್ಕೆ ತಂದಿದ್ದಾನೆ. ಇದರಿಂದ ಭೂಮಿಯ ತಾಪಮಾನ ದಿನದಿಂದ ದಿನಕ್ಕೆ ಏರುತ್ತಲೇ ಇದೆ. ನಾವು ಬಿಸಿ ಪ್ರಳಯದ ಬಾಗಿಲಲ್ಲಿ ಇದ್ದೇವೆ. ಜಗತ್ತಿನ ಎಲ್ಲಾ ಖಂಡಗಳಲ್ಲಿಯೂ ಅದರ ಲಕ್ಷಣಗಳು ದಿನದಿಂದ ದಿನಕ್ಕೆ ಪ್ರಖರವಾಗಿ ಕಾಣುತ್ತಿವೆ. ಇದರ ಪರಿಣಾಮವೆಂದರೆ ಜಡಿಮಳೆ, ಸುಂಟರಗಾಳಿ, ಹಿಮಖಂಡಚಿದ್ರ, ದಿಢೀರ್ ಮಳೆ, ಕ್ಷಿಪ್ರಬರಗಾಲ, ಇವೆಲ್ಲವೂ ಹಿಂದೆಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ  ಬಹಳ ತೀಕ್ಷ್ಣವಾಗಿ ಕಾಡುತ್ತಿವೆ.

ನಾವು ಸತತವಾಗಿ ನಿಸರ್ಗದ ಮೇಲೆ ದಾಳಿ ಮಾಡುತ್ತಾ ಇದ್ದೇವೆ. ಆ ಸಮರದಲ್ಲಿ ಅಂತಿಮವಾಗಿ ನಾವು ಗೆದ್ದರೂ ಸೋಲು ನಮ್ಮದೇ ಅನ್ನುವ ವಿವೇಕವೇ ಇಲ್ಲದಂತ ಯುಗಕ್ಕೆ ನಾವು ಬಂದಿದ್ದೇವೆ. ಈ ಭೂ ಗ್ರಹವೇ ನಮ್ಮ ಏಕೈಕ ಮನೆ, ಅದಕ್ಕೆ ಬೆಂಕಿ ಬಿದ್ದಿದೆ ಅನ್ನೋ ಅರಿವೇ ಇಲ್ಲದೇನೆ ನಾವೆಲ್ಲ ಆ ಮನೆಯಲ್ಲಿ ಕೆಲವರು ಇನ್ನೂ ಎತ್ತರ ಇನ್ನೂ ಬಲಿಷ್ಠ ಬೆಳೆಯೋಕೆ ಪೈಪೋಟಿಗೆ ಬಿದ್ದಿರುವುದನ್ನು ಕಾಣಬಹುದು. ನಾವೆಲ್ಲ ನಮ್ಮ ನಮ್ಮ ಅಲ್ಪ ಆಸಕ್ತಿಗಳನ್ನು ಜಾತಿ ರಾಜಕಾರಣ, ಜನಾಂಗ ದ್ವೇಷ, ಗಡಿ ಜಗಳ ಇತ್ಯಾದಿಗಳನ್ನು ಬದಿಗಿಟ್ಟು ಭೂಮಿಯ ರಕ್ಷಣೆಗೆ ಒಂದಾಗಿ ನಮ್ಮ ಸಾಮರ್ಥ್ಯವನ್ನು ಪಣಕ್ಕಿಡೋಣ; ಅನ್ನೋದೇ ಈ ಸಂದೇಶ; ಇದೆ ಮುಂದಿನ ಯುಗದ ಆಶಾಕಿರಣ.

## 2.1 ಅಮ್ಮನ ಗುಡ್ಡ

ವರ್ಷಕ್ಕೊಮ್ಮೆಯಾದರೂ ಮನೆದೇವತೆಯ ದರ್ಶನ.

ಪಯಣ ಎತ್ತಿನ ಬಂಡಿಯಲ್ಲಿ ರೊಟ್ಟಿ ಬುತ್ತಿ ಕಟ್ಟಿಕೊಂಡು.

ಚನ್ನಗಿರಿಯಿಂದ ಮೂರು ತಾಸಿನ ಹಾದಿ ಜೋಳದಾಳು

ಕಾಡು; ಬಿದಿರು ಮೆಳೆ ತುಂಬಿದ ಕಾಡ ಸೀಮೆ; ಅಡಿ

ಇಟ್ಟಲೆಲ್ಲ ಆಳೆತ್ತರದ ಹುತ್ತ; ನಡುವೆ ಗುಡ್ಡ;

ನೆತ್ತಿಗೊಂದು ಗುಡಿ; ಒಳಗೊಂದು ಹುತ್ತ; ಗುಡ್ಡಕ್ಕೆ

ಗುಡ್ಡವೇ ಉಸಿರೆಳೆಯುವಂತೆ ಗಾಳಿ ಸುಯ್ಯಾಟ;

ನಿಂತು ಲಂಗೋಟಿಯಗಲದಲ್ಲಿ ನಭಕ್ಕೆ ಹುಯ್ಯಲಿಡುವ

ಗಾಳಿಮರ. ಇದಕ್ಕೊತ್ತಿಕೊಂಡೇ ಬಾಳೆಕಲ್ಲ ಸಿದ್ಧನ

ಬೆಟ್ಟ, ದೆವ್ವ ಹೊಕ್ಕವರ ಬಿಡಿಸುತ್ತಿದ್ದ ರುದ್ರಾವತಾರಿ.

ನೂರಾರು ಬಾರಿ ಹೊಕ್ಕಿದರೂ  ಕಾಡು ದಿಗಿಲು ಪ್ರತಿಸಲವೂ

ದಾರಿ ತಪ್ಪಬಹುದೆಂದು. ಬಿದಿರುಮೆಳೆಯ ಇಕ್ಕಟ್ಟಿನಲ್ಲಿ

ಸವರುತ್ತ ಗಿಡ ಗಂಟಿಗಳ; ಮಾಡಿಕೊಳ್ಳುತ್ತ ಹಾದಿ, ಹೊತ್ತು

ಗೊತ್ತಿಲ್ಲದೆ ಸುತ್ತು ಹಾಕಿ ಕಂಡ ಹುತ್ತಗಳಿಗೆ, ಹುರಿ

ದುಂಬಿಸಿ ಬೆದರಿದೆತ್ತುಗಳ, ಬಾಲ ತಿರುಪಿ 'ಉಧೋ'

ಎಂದು ಬೊಬ್ಬೆ ಹಾಕಿ, ಬೆದರಿಸಿ ಕಾಡುಪ್ರಾಣಿಗಳ,

ಗುಡ್ಡ ಹತ್ತಿ ಗುಡಿಗೆ. ಹಾಡಹಗಲಲ್ಲೂ ಕತ್ತಲು
ಮಗುಚಿಟ್ಟಂತಿದ್ದ ಗುಡಾರದೊಳಗೆ ಅಮ್ಮ, ಒಲ್ಲದೆ
ಹೊರಜಗತ್ತು, ಹುತ್ತ ಹೊಕ್ಕ ಮಾತಾಯಿ.

ಕುಲ ಗೋತ್ರ ನಾಮ ರೂಪ ನೆಲೆ ಇಲ್ಲದೆ, ಹೊಕ್ಕು ಹುತ್ತ
ಆದಳು ಕುಕ್ಕಡದಮ್ಮ. ಬಡಿದು ಬರಗಾಲ, ತಿಂದು ಬಿದಿರಕ್ಕಿ
ರಕ್ತಭೇದಿ ವಾಂತಿ – ತುತ್ತಾದಾಗ ಜನ, ಊರ ಗೌಡನ ಕನಸಲ್ಲಿ
ಬಂದು ತಾಯಿ ನೀಡಿದಳು ತಾನಿರುವ ಸುಳಿವ. ಕಾಡ ಹೊಕ್ಕ
ಗೌಡ. ತೊಳಲಿ ಬಳಲಿ ಬಯಸಿ ಬಂದಾಗ ಗುಡ್ಡದ ನೆತ್ತಿಗೆ,
ಕಂಡ: ಆಡುತ್ತಿದ್ದವೆರಡು ಮಿಡಿನಾಗರ ಎಳೆ ಬಿಸಿಲಲ್ಲಿ ಮಿರ್ರನೆ
ಮಿಂಚುತ್ತ; ನಡುವೆ ಹುತ್ತ; ಹುತ್ತಕ್ಕೆ ಸುತ್ತು ಹಾಕಿ ಹೆಡೆ
ಎತ್ತಿದ್ದ ತಾಯಿ ನಾಗರ; ನೋಡು ನೋಡುತ್ತಿದ್ದಂತೆ ಹೊಕ್ಕವು
ಅವು ಹುತ್ತವ. ಕಂಡವು ಆ ಸ್ಥಳದಲ್ಲಿ ಹೂವು.
'ನಿನ್ನ ಪಾದಕ್ಕೆ ಉಧೋ' ಎಂದು ಅಡ್ಡ ಬಿದ್ದ ಗೌಡ.
ಗುಡಿ ಎದ್ದಿತು ಅಲ್ಲಿ, ಪಕ್ಕದಲ್ಲೊಂದು ಕಲ್ಲುಗುಂಡು
ಪರಶುರಾಮನ ರೂಪ ಕಾಪಾಡಲು ತಾಯಮಾನ; ಎದುರಿಗೆ
ನಿಂತಳು ಕಲ್ಲಾಗಿ ಅಮ್ಮನ ರೂಪದ ಮಾತಂಗಿ.

ಬಿದಿರು ಮೆಳೆ ಸಿಕ್ಕಲ್ಲಿ ದಾರಿತಪ್ಪುತ್ತಿದ್ದುದೇ ಹೆಚ್ಚು.

ಗುಡಿಗೆ ಕೂಗಳತೆಯಲ್ಲಿದ್ದ ಕೆರೆಯೊಂದೇ ಕುರುಹು.

ಜಾತ್ರೆಗೆ ನೆರೆದಂತೆ ನಮ್ಮ ಕುಲಜನ ಬೆರೆತು,

ಬಿಟ್ಟು ಬೀಡು, ಒಲೆ ಹೂಡುತ್ತಿದ್ದರು ಕೆರೆ ಬಳಿ

ಅಮ್ಮನೊಲಿಯಲೆಂದು ಪಾಯಸ ನೇವೇದ್ಯ; ಮಾತಂಗಿ

ಪರಶುರಾಮರಿಗೆ ಕುರಿ ಕೋಳಿಗಳ ಜೀವದೋಕಳಿ.

ಅರ್ಪಿಸಿದ್ದನ್ನು ಅಟ್ಟುಂಡು ರಾತ್ರಿ ತಂಗಿ ಹೊರಡುತ್ತಿದ್ದೆವು

ಬೆಳಿಗ್ಗೆ ಮತ್ತೆ ಗಾಡಿ ಹೂಡಿ, ನೀಡಿದವರ ನಿಜವ

ಬಲ್ಲ ಆದಿಶಕ್ತಿ ಪರಾಶಕ್ತಿ ಕುಕ್ಕಡದಮ್ಮ ಹುದುಗಿ

ಹುತ್ತದೊಳಗೆ ಹರಿದು ಹಾವಾಗಿ ಹರಸುತ್ತಾಳೆ

ಹೆಡೆಯಾಡಿಸಿ ಎಂಬ ನಂಬಿಕೆಯ ಹೊತ್ತು.

ತೊಟ್ಟ ಲಂಗ ಹರಿಸಿಕೊಳ್ಳದೆ ನಾನು ಹಿಂತಿರುಗಿದ್ದೇ

ಇಲ್ಲ. ಅಮ್ಮನ ಗುಡ್ಡ ಭಯ ದಿಗಿಲಿನ ಗುಪ್ತ ತಾಣ ನನಗೆ.

ಬಿದಿರುಮೆಳೆಯ ಮರೆಯ ಕತ್ತಲು; ಹುತ್ತದೊಳಗೆ

ಹುದುಗಿರುವ ಹಾವು; ಕಾಡುಪ್ರಾಣಿ ಗಾಳಿಯ ಹುಯ್ಯಲು;

ಗುಡ್ಡದಂತರಾಳದಲ್ಲಿ ಎಲ್ಲೋ ಅಡಗಿರುವ ಅಮ್ಮ – ಬಲ್ಲವರು

ಯಾರು ಇವುಗಳ ಜಾಡ? ಕಣ್ಣು ಹೊರಳಿದತ್ತ

ಹರಿದ ಹಾವು ಕಾಣಬಹುದೆಂಬ ಭಯ ಕುತೂಹಲ ನನಗೆ.

ಗುಡಿಯ ಕತ್ತಲಲ್ಲಿ ಮೆಟ್ಟಬಹುದು ಹಾವ ಎಂದು ಹೆದರಿ

ಮಾರುದ್ದ ಮಂಡೆಗೂದಲನ್ನು ಸುತ್ತಿ ಸೊಂಟಕ್ಕೆ ನಡೆಯುತ್ತಿದ್ದೆ,

ಮುಟ್ಟಿಯೂ ಮುಟ್ಟದಂತೆ ನೆಲ.

ಊರಲ್ಲಿ ಹೆಡೆ ಎತ್ತಿದ ನಾಗನ ಬಾಲ ಹಿಡಿದು

ನೆಲಕ್ಕಪ್ಪಳಿಸುತ್ತಿದ್ದ ನನ್ನ ಮಾವ ಅಮ್ಮನ ಗುಡ್ಡ

ದಲ್ಲಿ ಮೌನದ ಮಡು. ತೇಗಿನಮರ ಮೈಮಾಟದ

ಮಾವ ಹೆದರಿದೆತ್ತುಗಳ ಹುರಿದುಂಬಿಸಿ ಗಾಡಿ ಹೊಡೆಯುವವ;

ಕುರಿ ಕತ್ತಿಗೆ ಮಚ್ಚು ಬೀಸುವವ; ಕತ್ತಲಿನ ಗುಡಿಯಲ್ಲಿ

ಹಣತೆ ಹಚ್ಚುವವ. ಸದಾ ಮೈಯೊಳಗೆ ಏನೋ ಹೊಕ್ಕಂತಿರುತ್ತಿದ್ದ

ಅವ ಮೂಡಿಸುತ್ತಿದ್ದ ಬೆರಗು ನನ್ನಲ್ಲಿ.

ಆ ವರ್ಷವೂ ಬೀಡು ಗುಡ್ಡದಲ್ಲಿ. ಹಣತೆ ಹಚ್ಚಲು

ಹೊರಟ ಮಾವನೊಂದಿಗೆ ಗುಡಿ ಹೊಕ್ಕೆ ನಾನು. ಕತ್ತಲಲ್ಲಿ

ಹೊರಳಿಸಿದೆ ಕಣ್ಣ. ಕಾಣಬಹುದೇ ಹುತ್ತ ಸುತ್ತಿಕೊಂಡ

ಹಾವು? ಆಡುವ ಮಿಡಿನಾಗರ? ಬೆದರಿದವಳ ಕೈ

ಹಿಡಿದು ಹೊರಬಂದ ಮಾವ. ಗುಡಿ ಪಕ್ಕದಲ್ಲೊಂದು

ದೈತ್ಯ ಮೆಳೆ, ಎಂದೋ ಹುಲಿಯೊಂದು ಸಿಕ್ಕಿಬಿದ್ದು

ಸತ್ತಿತ್ತಂತೆ ಅಲ್ಲಿ ಹಾದಿ ಕಾಣದೆ. ಅದರೊತ್ತಿಗಿದ್ದ
ಹುತ್ತ, ಅದರೊಳಗಿದ್ದ ಹೆಡೆ ಮಾತ್ರ ಎತ್ತಿ ಬುಸು
ಗುಟ್ಟುತ್ತಿದ್ದ ಸರ್ಪ. ಉಕ್ಕು ಕತ್ತರಿಸುವಷ್ಟು ಹರಿತ
ಅದರ ನೋಟ, ಬೆದರಿ ಒಮ್ಮೆಲೆ ಹಿಡಿದೆ ಮಾವನ್ನ.
ಬಿದ್ದೆವು ಹಿಡಿತ ತಪ್ಪಿ ನೆಲಕ್ಕೆ. ಸರ್ರನೆ ಮುಚ್ಚಿ ಹೆಡೆ
ಹುತ್ತದೊಳಗೆ ಹರಿಯಿತು ಹಾವು. ಮೇಲೆದ್ದರೂ ನಾನು
ಬಿದ್ದ ಮಾವ ಏಳಲಿಲ್ಲ. ಹುಯ್ಯಲಿಟ್ಟೆ. ಒಲೆ ಹೂಡುತ್ತಿದ್ದ
ನಮ್ಮವರೆಲ್ಲ ಬಂದರು ಓಡೋಡಿ. ಸಾಗಿಸಿದರು ಮಾವನ್ನ
ಚನ್ನಗಿರಿಗೆ. ಹುತ್ತದೊಳಗಿನ ಅಮ್ಮನ ಚಿತ್ತದಲ್ಲಿ ಏನಿದೆಯೋ
ಎಂದು ಅತ್ತೆ ಕೂತಳು ತಲೆ ಮೇಲೆ ಕೈ ಹೊತ್ತು.
ಹಾಲೂಡಿದ ಕಂದಮ್ಮ ಮಲಗಿತ್ತು ಮಡಿಲೊಳಗೆ ಹಾಯಾಗಿ.
ಎಂಥ ಮೌನ! ಸೋಂಕಿದರೂ ಸದ್ದು, ಹೆಡೆ ಎತ್ತುವಂತಿತ್ತು
ಸರ್ಪ! ತಾಗಬಾರದೆಡೆ ತಗುಲಿ ಮೆಳೆಮುಳ್ಳು, ಮಾವ
ಕಳೆದುಕೊಂಡ ನರ. ಆದರೂ ಬಿಡಲಿಲ್ಲ ಅವ ಅಮ್ಮನ ಗುಡ್ಡ.

ಸಾಗಿತು ನನ್ನ ಪಯಣ. ಚನ್ನಗಿರಿಯಿಂದ ಶಿವಮೊಗ್ಗ
ಅಲ್ಲಿಂದ ಮೈಸೂರು. ಸರಿಯಿತು ಕಾಲ. ಮೈಸೂರ
ಹೋಗುತ್ತಿದ್ದಂತೆ ಕಣ್ಣಿಗೆ ಬೀಳುವ ಚಾಮುಂಡಿ ಬೆಟ್ಟ.

ಹುಲಿ ಮೇಲೆ ಚಂಡಮುಂಡರ ರುಂಡ ಹೊತ್ತ ಈ ಅಮ್ಮ

ತರಿಸುತ್ತಿದ್ದಳು ಹುತ್ತದೊಳ ಹೊಕ್ಕ ಆ ಅಮ್ಮನ ನೆನಪು.

ಆಗಾಗ ಪತ್ರಿಕೆ ಬಾನುಲಿಯಲ್ಲಿ ಸುದ್ದಿ;ಜೋಳದಾಳು

ಕಾಡು, ಗುಡ್ಡ. ಕಾಡಲ್ಲಿ ಗಂಧ; ಅಪಾರ ಬೆಲೆಯ

ಹಾವಿನ ಪೊರೆಗಳು; ಗುಡ್ಡದಲ್ಲಿ ಕಬ್ಬಿಣದ ಅದಿರು,

ಚಿನ್ನದ ತುಣುಕು; ಗಣಿ ನಿರ್ಮಾಣ. ಹಾದಿಯಿಲ್ಲದ

ಕಾಡ ಗುಡ್ಡದ ವೃತ್ತಾಂತ, ಮನೆ ದೇವತೆಯ ಭಂಡಾರ

ಎಂದತ್ತೆ ಕಳಿಸುತ್ತಿದ್ದ ವಿಭೂತಿ, ಮರುಕಳಿಸುತ್ತಿದ್ದವು

ಅಮ್ಮನ ಗುಡ್ಡದ ವಾಸನೆಯ.

ಒಂದು ದಿನದ ಮಟ್ಟಿಗೆ ನಮ್ಮ ಪಯಣ ಕಾರಲ್ಲಿ.

ಮೂಕಳಾದೆ ತಲುಪಿದಾಗ ಜೋಳದಾಳು ಕಾಡು.

ಯಾವ ಮಾಯಾದಂಡ ತಗುಲಿತ್ತೋ ಆ ಕ್ಷೇತ್ರಕ್ಕೆ!

ಪಗಡೆ ಹಾಸಿನ ಹಸಿರು ಚೌಕಳಿಯೊಳಗೆ

ಅಗೆದು ಉತ್ತ ಭತ್ತದ ತೆನೆಯ ತುಯ್ದಾಟ; ನಡುವೆ

ಹರಿದ ಹೆಬ್ಬಾವು ಹಾದಿ; ಅಲ್ಲಲ್ಲಿ ಹಿಂಡು ಹಿಂಡಾಗಿ

ಮೇಯುತ್ತಿದ್ದ ಕುರಿದನ; ಗುಡಿ ಜಾಗದಲ್ಲಿ ದೇವಸ್ಥಾನ,

ನಲ್ಲಿ; ಜಗಜಗಿಸುವ ಬೆಳ್ಳಿ ಮುಖವಾಡ ಹೊತ್ತ

ಕುಕ್ಕಡದಮ್ಮ; ಮಂದಾಸನ; ನೀಲಾಂಜನ; ಧರ್ಮಾವರದ

ನೆರಿಗೆ; ಗೋಲಕ; ತೂಗುತ್ತಿದ್ದ ಗಂಟೆಗಳು; ಬೆಳ್ಳಿ

ಮಾವಿನೆಲೆಗಳ ತೋರಣ; ಹಗಲಲ್ಲೂ ಉರಿಯುತ್ತಿದ್ದ

ವಿದ್ಯುಚ್ಛಕ್ತಿ ದೀಪ; ಕೆಂಪು ಮಗುಟ ತೊಟ್ಟ ದ್ವಿಜ,

ಬಲಿ ಪಡೆವ ಮಾತಂಗಿ ಮುರುಕು ಜೋಪಡಿಯಲ್ಲಿ.

ತೇಗದ ಮೈ ಮಾವ ಮಾರುದ್ದ ಬೆಳ್ಳಿ ಹೊಳಪಿನ

ಗಡ್ಡ ಬಿಟ್ಟು ನೆರಿನೆರಿಯಾದ ಮೊಗದಲ್ಲಿ ಚಿಮ್ಮಿಸಿದ

ನಗೆ. ಹುತ್ತ ಸವರಿ ತೊಡಿಸಿದ್ದ ಮುಖವಾಡದತ್ತ

ತೋರಿದಾಗ ಕೈ ನಕ್ಕ: 'ಎಂದಾದ್ರೂ ಬಿತ್ತಿದ್ದುಂಟೇ

ಕುಯಿಲಾಗಿದ್ದುಂಟೇ ಇಲ್ಲಿ ಕೂಸೇ? ಈಗ ನೋಡು

ಹೊತ್ತು ಕಂತುವಾಗ ಏಳುತ್ತೆ ಗೋಧೂಳಿ. ತನ್ನ ಮಕ್ಕಳು

ಬೆಳೆಯೋದು ಮಾಗೋದು ಬೇಕವ್ವಾ ತಾಯಿಗೆ.

ಕಲೀದೆ ಇರೋ ನಮಗೆ ಗುಂಡಕಲ್ಲೇ ಪರಶುರಾಮ,

ಹುತ್ತಾನೇ ಪರಾಶಕ್ತಿ. ಕಲಿತ ಮಂದಿಗೆ ಮುಖವಾಡ

ಬೇಕು, ತೋರಣ ಬೇಕು'. ನಂಬದ ನನ್ನ ನೋಡಿ

ಮತ್ತೆ ನುಡಿದ: 'ಕುರಿ ಹಸು ಓಡಾಡೋ ಹಾದೀಲಿ

ಹುತ್ತ ಯಾಕೆ ಬೇಕು ಮಗಾ? ಅದಕ್ಕೆ ತಾಯಿ

ತೋರಿದಳು ತನ್ನ ಮೊಗ..... 'ನಗುತ್ತಾ ಹೇಳಿದ:

'ಕಾಸು ಬಿದ್ದ ಹುತ್ತಾನೇ ತೋಡಿದ್ರು ಮಂದಿ; ಇನ್ನು

ಕಬ್ಬಿಣ ಗಂಧದ ಕಾಡು ಬಿಟ್ಟಾರ ಕೂಸು? ನೀಡಿದ್ದಕ್ಕೆ

ಚಾಚದೆ, ದೋಚೋದಕ್ಕೆ ಮುಂದುಮಾಡಿದರೆ ಕೈ, ತಾಯಿ

ಏನು ಮಾಡ್ತಾಳೆ, ಕಾಲನೆರಿಗೆ ಚೆಲ್ಲಿ ನಗೋದು ಬಿಟ್ಟು?

ಮುಖವಾಡ ತೊಟ್ಟ ಮಂದಿ ತಮ್ಮ ತಪ್ಪ ಹೊಟ್ಟೇಲಿ ಹಾಕೋ

ಅಂತ ಅಮ್ಮಂಗೆ ಮುಖ ತೊಡಿಸಿದ್ರು, ಗುಡಿ ಕಟ್ಟಿಸಿದ್ರು,

ಗಂಟೆ ತೂಗಾಡಿಸಿದ್ರು, ಹಾದಿ ಮಾಡಿಸಿದ್ರು

ಕಾಡನ್ನೇ ಒಪ್ಪ ಮಾಡಿದ್ರು.... ಈಗ ಬಿಟ್ಟಿದೆ ಸರ್ಕಾರ ಕೆರೆಯಾಚೆಗೆ

ಆರು ಹುಲಿಮರಿ, ಕಾಡು ಬೆಳಸಬೇಕು ಅಂತಾ. ಗೊತ್ತಾ ಮಗೂ?'

ಹಾವು, ಹುಲಿ, ಸರ್ಕಾರ, ಕಳ್ಳಸಾಗಾಣಿಕೆ, ಕುಕ್ಕಡದಮ್ಮ

ಮಾತಂಗಿ, ಮಾವ, ಹೊತ್ತು ಮನಸ್ಸಲ್ಲಿ

ಹಿಂದಿರುಗಿದೆ ಮೈಸೂರಿಗೆ ಅಂದೇ. ಸುಕ್ಕಾಗಿರಲಿಲ್ಲ

ಉಟ್ಟ ಸೀರೆಯ ನೆರಿಗೆ ಕೂಡ.

# 2.2 ಮಾನವ ನಿರ್ಮಿತ ಮಹಾಸಮಸ್ಯೆಗಳು

**–ನಾಗೇಶ ಹೆಗಡೆ**

ಭೂಮಿಯ ಮೇಲೆ ಮಾನವ ಜೀವಿಗಳು ಓಡಾಡಲಾರಂಭಿಸಿ ಸುಮಾರು ೪೦ ಸಾವಿರ ವರ್ಷಗಳೇ ಸಂದಿವೆ. ಕಾಡುಪ್ರಾಣಿಗಳಂತೆ ಅಲೆಯುತ್ತ, ಹೊಟ್ಟೆ ತುಂಬಿಸಿಕೊಳ್ಳುವ ಏಕಮಾತ್ರ ಉದ್ದೇಶದಿಂದ ದೀರ್ಘಕಾಲ ಶಿಲಾಯುಗದಲ್ಲೇ ಕಳೆದು ಆತ ನಾಲ್ಕು ಸಾವಿರ ವರುಷಗಳ ಹಿಂದೆ ನಾಗರಿಕ ಯುಗಕ್ಕೆ ಕಾಲಿಟ್ಟ. ದೇವರು, ಧರ್ಮ, ಕರ್ಮ ಎಂದೆಲ್ಲಾ ನಂಬುತ್ತ ಪಗೋಡಗಳನ್ನೂ ಪಿರಮಿಡ್ಡುಗಳನ್ನೂ ಕಟ್ಟುತ್ತಲೇ ಇನ್ನಷ್ಟು ಕಾಲ ಕಳೆದು, ಕೇವಲ ನಾಲ್ಕು ನೂರು ವರುಷಗಳ ಹಿಂದೆ ದಿಗಂತದಾಚೆ ದೃಷ್ಟಿ ನೆಟ್ಟು, ಕಾಲಲ್ಲಿ ಚಪ್ಪಲಿ ಮೆಟ್ಟಿದ. ಆಧುನಿಕ ಯುಗದಲ್ಲಿ ಕಾಲಿಟ್ಟು. ನೂರೊಂದು ಆಡಂಬರಗಳನ್ನು ಹಚ್ಚಿಕೊಂಡು ನಲವತ್ತು ವರ್ಷಗಳ ಈಚೆಗೆ ಇಡೀ ಭೂಮಿಯನ್ನೇ ಮೆಟ್ಟಿನಿಂತ.

ನೋಡನೋಡುತ್ತಿದ್ದಂತೆಯೇ ಇಂದು ಇಡೀ ಭೂಮಂಡಲವೇ ಸಮಸ್ಯೆಗಳ ಮಡುವಾಗಿ ನಿಂತಿದೆ. ಜನಸಂಖ್ಯೆಯ ಸಮಸ್ಯೆ, ಆಹಾರ ಸಮಸ್ಯೆ, ಶಕ್ತಿ ಸಮಸ್ಯೆ, ಕಚ್ಚಾ ಪದಾರ್ಥಗಳ ಸಮಸ್ಯೆ, ಪರಿಸರ ಸಮಸ್ಯೆ.... ಒಂದಲ್ಲ ಎರಡಲ್ಲ. ಹಳೆಯ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಿರುವಂತೆ ಹೊಸ ಸಮಸ್ಯೆಗಳು ಉದ್ಭೂತವಾಗುತ್ತಿವೆ. ಭೂಮಿಯ ಯಾವುದೋ ಒಂದು ಮೂಲೆಯಲ್ಲಿ ನಿನ್ನೆ ತಲೆದೋರಿದ ಸಮಸ್ಯೆ ಇಂದು ಇಡೀ ಪೃಥ್ವಿಯನ್ನೇ ಆಕ್ರಮಿಸುತ್ತಿದೆ.

ಹಾಗೆ ನೋಡಿದರೆ, ಮಾನವನ ಇತಿಹಾಸದುದ್ದಕ್ಕೂ ಸಮಸ್ಯೆಗಳ ಸರಮಾಲೆಯೇ ಹೆಣೆದುಕೊಂಡು ಬಂದಿದ್ದು ನಮಗೆಲ್ಲ ಗೊತ್ತಿದೆ. ಅವುಗಳಿಗೆಲ್ಲ ಮನುಷ್ಯ ಆಗಾಗ ಪರಿಹಾರ ಹುಡುಕಿಕೊಂಡೆ ಪ್ರಗತಿಯ ಮೆಟ್ಟಿಲೇರುತ್ತ ಬಂದಿದ್ದಾನೆ. ಪ್ಲೇಗು, ಯುದ್ಧ, ಮಹಾಪೂರ, ಭೂಕಂಪ ಮುಂತಾದವನ್ನೆಲ್ಲ ಮಾನವ ಎದುರಿಸಿದ್ದಾನೆ. ಇವೆಲ್ಲ ಅಡೆತಡೆಗಳನ್ನೂ ನಿವಾರಿಸಿಕೊಂಡೇ ಆಧುನಿಕ ಯುಗಕ್ಕೆ ಕಾಲಿರಿಸಿದ್ದಾನೆ.

ಇಂದಿನ ಸಮಸ್ಯೆಗಳೂ ಹಿಂದಿನದೆಲ್ಲಕ್ಕಿಂತ ಭಿನ್ನವಾಗಿರಬಹುದೆ? ಇತಿಹಾಸ ಮರುಕಳಿಸುತ್ತದೆಯೆಂದೇ ನಂಬಿಕೊಂಡು, ಸಮಸ್ಯೆಗಳಿಗೆ ಪರಿಹಾರ ಸಿಕ್ಕೇ ಸಿಗುತ್ತದೆಂದು ನಮ್ಮ ಪಾಡಿಗೆ ನಾವಿರುವುದು ಸರಿಯೇ?

## –೨–

ಇತಿಹಾಸ ಮರುಕಳಿಸುವ ಸ್ಥಿತಿಯಲ್ಲಂತೂ ಇಲ್ಲ. ಇಂದಿನ ಸಮಸ್ಯೆಗಳೆಲ್ಲ ಒಟ್ಟಿಗೆ ವಕ್ಕರಿಸಿವೆ. ಒಂದೊಂದಾಗಿ ಪರಿಹರಿಸುವಂತೆಯೂ ಇಲ್ಲ. ಎಲ್ಲಾ ಒಂದಕ್ಕೊಂದು ಹೆಣೆದುಕೊಂಡಿವೆ. ಪ್ರತಿಯೊಂದೂ ವಿಶ್ವವ್ಯಾಪ್ತಿಯಾಗಿ ಕೂತಿದೆ ಬೇರೆ. ಇಷ್ಟೂ ಸಾಲದೆಂಬಂತೆ ಈ ಎಲ್ಲಾ ಸಮಸ್ಯೆಗಳ ಮೂಲ ಸ್ವರೂಪವೇ ಹಿಂದಿನದಕ್ಕಿಂತ ಭಿನ್ನವಾಗಿವೆ. ಹಿಂದಿನ ಎಲ್ಲ ಸಮಸ್ಯೆಗಳೂ 'ದುಷ್ಟ ಉದ್ದೇಶ'ಗಳಿಂದ ಸೃಷ್ಟಿಯಾಗಿದ್ದವು. ಇತರರನ್ನು ಹತ್ತಿಕ್ಕಿ ತಾನೇ ಏಕಾಧಿಪತಿಯಾಗಬೇಕೆಂದು ರಾಜರುಗಳು ದಂಡೆತ್ತಿ ಹೋಗುತ್ತಿದ್ದರು ಅಥವಾ ಜನತೆಯನ್ನು ಸಂತ್ರಸ್ತಗೊಳಿಸುವುದಕ್ಕಾಗಿಯೇ (ಅಂದಿನವರು ನಂಬಿದ್ದಂತೆ) ಪ್ಲೇಗು, ಮಹಾಪೂರ, ಭೂಕಂಪಗಳು ಸಂಭವಿಸುತ್ತಿದ್ದವು. ಇಂಥ ನೆಗೆಟಿವ್ ಕಾಸಸ್ (ಋಣ–ಅನುಬಂಧ)ಗಳಿಂದಾಗಿಯೇ ಸಂಕಷ್ಟ ಒದಗಿ ಬರುತ್ತಿದ್ದವು. ಆದರೆ ಈಗ ಹಾಗಲ್ಲ. ಮನುಷ್ಯ ತನ್ನವರ ಏಳಿಗೆಯ 'ಸದುದ್ದೇಶ'ದಿಂದ ಮಾಡಿದ ಕೆಲಸಗಳೇ ಇಂದಿನ ಸಮಸ್ಯೆಗಳಿಗೆ ಮೂಲ ಕಾರಣಗಳಾಗಿವೆ. ಮಾನವ ದೈಹಿಕ ಶ್ರಮ ಉಳಿಸಲೆಂದೇ ಶಕ್ತಿಮೂಲಗಳಾದ ಪೆಟ್ರೋಲು–ಕಲ್ಲಿದ್ದಲುಗಳನ್ನು ಅಗೆಯಲಾರಂಭಿಸಿದ್ದು. ಯಾರೂ ಆ ಬಗ್ಗೆ ತಕರಾರು ಎತ್ತಿರಲಿಲ್ಲ. ಈಗ ಇದ್ದಕ್ಕಿದ್ದಂತೆ ಪರಿಸರ ಮಾಲಿನ್ಯ ಹಾಗೂ ಶಕ್ತಿ ಸಮಸ್ಯೆಯನ್ನು ನಾವು ಎದುರಿಸಬೇಕಾಗಿದೆ. ರೋಗ ರುಜಿನಗಳಿಂದ ಮನುಷ್ಯರನ್ನು ಬಚಾವು ಮಾಡಲೆಂದೇ ಔಷಧ ಸೃಷ್ಟಿ, ವೈದ್ಯಕೀಯ ಸಂಶೋಧನೆಗಳಾಗಿದ್ದುದರಲ್ಲಿ ಯಾವ ದುರ್ಬುದ್ಧಿಯೂ ಇರಲಿಲ್ಲ. ಈಗ ನೋಡಿದರೆ ಜನಸಂಖ್ಯೆ ಅಪಾರ ಬೆಳೆದಿದೆ. ಸಾಯುವವರೇ ಕಡಿಮೆಯಾಗಿದ್ದಾರೆ.

ಮಾನವಕುಲದ ಒಳ್ಳೆಯದಕ್ಕೆಂದು ಏನೇ ಮಾಡಿದರೂ ಅದು ಶಾಪವಾಗಿಯೇ ಪರಿಣಮಿಸುವುದೇಕೆ? ಎಲ್ಲ ಮಾನವೀಯ ಆದರ್ಶಗಳನ್ನೂ ಧಾರ್ಮಿಕ ಹಿತವಚನಗಳನ್ನೂ ಪಾಲಿಸಿದರೂ ಈ ಬಗೆಯ ದುರಂತ ಕಟ್ಟಿಟ್ಟದ್ದಾದರೆ ಮುಂದೆ ಜೀವಿಸುವುದು ಹೇಗೆ? ಅನೂಚಾನವಾಗಿ ಬಂದ ಎಲ್ಲ ಸತ್ಕರ್ಮಗಳನ್ನೂ ತ್ಯಾಗ ಮಾಡುವ ಸ್ಥಿತಿ ಬಂತೇ ಈಗ?

## –೩–

ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಮಾನವ ಕುಲ ಬೆಳೆದು ಬಂದಿರುವ ವಿಧಿ ವಿಧಾನಗಳನ್ನು ಇನ್ನೊಮ್ಮೆ ಪರಿಶೀಲಿಸಬೇಕು. ತನ್ನವರ ಏಳಿಗೆಯೊಂದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಮನುಷ್ಯ ಈವರೆಗೆ ತನ್ನ ಸುತ್ತಲ ನಿಸರ್ಗವನ್ನು ಕಡೆಗಣಿಸುತ್ತ ಬಂದದ್ದಂತೂ ನಿಜ. ನಿಸರ್ಗದ ಮೇಲೆ ಮನುಷ್ಯ ಯಾವ ಯಾವ ರೀತಿಯಲ್ಲಿ ಹತೋಟಿ ಸಾಧಿಸಿಕೊಂಡಿದ್ದಾನೆ ಎಂಬುದನ್ನೇ ಒಂದು ಮಹಾ ಸಾಧನೆಯೆಂಬಂತೆಯೇ ನಾವು ಹೆಮ್ಮೆಯಿಂದ ಬೀಗುತ್ತ ಹೇಳುತ್ತಿರುತ್ತೇವೆ; ಮಕ್ಕಳಿಗೆ ಬೋಧಿಸುತ್ತಿದ್ದೇವೆ. ಗುಡ್ಡಕ್ಕೆ ಸುರಂಗ ಕೊರೆದು ನದಿಯನ್ನು ತಿರುಗಿಸಿದ್ದೇವೆ, ಮೈ ಕೊರೆಯುವ ಹಿಮಖಂಡದಲ್ಲೂ ಹೆಲಿಕ್ಯಾಪ್ಟರ್ ಇಳಿಸಿದ್ದೇವೆ; ಡಿಡಿಟಿ ಸಿಂಪಡಿಸಿ ಮಲೇರಿಯಾ ಕೀಟಾಣುಗಳನ್ನು ನಾಶಮಾಡಿದ್ದೇವೆ; ನೆಲದಾಳದ ಖನಿಜ ಕೊರೆದು ಅಣುಶಕ್ತಿ ಪಡೆದಿದ್ದೇವೆ; ಸಮುದ್ರದಾಳದಲ್ಲೂ ಕಿಂಡಿ ಕೊರೆದು.... ಇತ್ಯಾದಿ ಸಾಹಸಗಳಿಂದಾಗಿ ನಿಸರ್ಗವನ್ನು ಇನ್ನೇನು ಸಂಪೂರ್ಣವಾಗಿ ನಮ್ಮ ದಾಸ್ಯಕ್ಕೆ ಒಳಪಡಿಸಿಕೊಂಡುಬಿಟ್ಟಿದ್ದೇವೆ.

ಆದರೆ ನಾವು ತಿಳಿದುಕೊಂಡಂತೆ ನಿಸರ್ಗ ನಮಗೆ ಸೋತು ಶರಣಾಗಿಲ್ಲ. ಸರಿಪಡಿಸಲಾರದಷ್ಟು ವಿಕೃತವಾಗಿದೆ. ಅಪರೂಪಕ್ಕೆ ಅಲ್ಲಲ್ಲಿನ ಕೆಲವು ಭಾಗಗಳಲ್ಲಿ ಪ್ರಕೃತಿ ತನ್ನತನವನ್ನು ಉಳಿಸಿಕೊಂಡಿದ್ದರೂ,ಇನ್ನೂ ಹೆಚ್ಚುದಿನ ಉಳಿಸಿಕೊಳ್ಳಲಾರದಷ್ಟು ಕ್ಷೀಣವಾಗಿದೆ.

ಹಾಗಿದ್ದರೆ ಮಾನವಕುಲದ ವಿಕಾಸಪಥದಲ್ಲೇ ದೋಷವಿದೆಯೆ? ಇತರ ಪ್ರಾಣಿಗಳ ಜತೆ ಪೈಪೋಟಿ ನಡೆಸಿ ತನ್ನ ಬುದ್ಧಿಮತ್ತೆಯಿಂದಾಗಿ ಪ್ರಗತಿ ಹೊಂದಿದ ಈ ಪ್ರಾಣಿಗೆ ತನ್ನದೇ ಅಸ್ತಿತ್ವವನ್ನು ಉಳಿಸಿಕೊಳ್ಳುವಷ್ಟು ಬುದ್ಧಿಯಿಲ್ಲವೆ? ನಮ್ಮ ವಿಕಾಸಪಥವನ್ನು ಬದಲಿಸಬೇಕಾಗಿ ಬಂದಿದೆಯೇ?

## –೪–

ಏಕಮುಖ ಬೆಳವಣಿಗೆಯಿಂದಾಗಿಯೇ ಇಂದು ನಾವು ನೂರಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆಂದೂ, ಬೆಳವಣಿಗೆಯನ್ನೇ ಸ್ಥಗಿತಗೊಳಿಸಿದರೆ ಎಲ್ಲ ಸರಿಹೋಗುತ್ತದೆಂದೂ ಕೆಲವರು ವಾದಿಸುತ್ತಾರೆ. ಇದಕ್ಕೆ ತದ್ವಿರುದ್ಧವಾದ ವಾದವೂ ಅದೇ ಗುರಿಯನ್ನೇ ಸೂಚಿಸುತ್ತದೆ. ಅಂದರೆ, ನಿರಂತರವಾಗಿ (ಸಂಶೋಧನೆಗಳೇ ಮುಂತಾದ ಎಲ್ಲರಂಗಗಳಲ್ಲೂ) ಬೆಳವಣಿಗೆ ಮುಂದುವರಿದರೇನೇ ಇಂದಿನ ಸಮಸ್ಯೆಗಳಿಗೆಲ್ಲ ಪರಿಹಾರವೆನ್ನುವವರೂ ಇದ್ದಾರೆ. 'ಬೆಳವಣಿಗೆ' ಅಥವಾ 'ಪ್ರಗತಿ' ಎಂಬ ಪದಕ್ಕೆ ನಿಖರವಾದ ವ್ಯಾಖ್ಯೆಯನ್ನೇ ಕೊಡದೆ ಬೆಳವಣಿಗೆ ಬೇಕು ಅಥವಾ ಸಾಕು ಎನ್ನುವುದು ಅರ್ಥಹೀನವಾಗುತ್ತದೆ. ಜನಸಂಖ್ಯೆಯ ಬೆಳವಣಿಗೆ ಸಾಕು ಎಂಬುದನ್ನಂತೂ ಎಲ್ಲರೂ ಒಪ್ಪುತ್ತಾರೆ. ಹಾಗೆಯೇ ಆರೋಗ್ಯ ವಿಕಾಸಕ್ಕಾಗಿ ವೈದ್ಯಕೀಯ ಸಂಶೋಧನೆಗಳು ಇನ್ನಷ್ಟು ಬೆಳವಣಿಗೆಯಾಗಬೇಕೆನ್ನುವುದೂ ನಿರ್ವಿವಾದದ ಸಂಗತಿ. ಆದರೆ ಹಾಗೆ ಮಾಡಿದರೆ ಜನಸಂಖ್ಯೆಯೂ ಮತ್ತೆ ಹೆಚ್ಚುತ್ತ ಹೋಗುತ್ತದೆ. ಸಂಪನ್ಮೂಲಗಳ ಬಳಕೆಯ ಕುರಿತೂ ಇಂಥ ವಿರೋಧಾಭಾಸಗಳು ಎದುರಾಗುತ್ತವೆ. ಈ ರಂಗದಲ್ಲಿ ಬೆಳವಣಿಗೆ ಹೆಚ್ಚಾದರೆ ಶ್ರೀಮಂತ ರಾಷ್ಟ್ರಗಳಲ್ಲಿ ಪೋಲು ಮಾಡುವ ಪ್ರವೃತ್ತಿಯೂ ಬೆಳೆಯುತ್ತದೆ. ಹಾಗೆಂದು ಸಂಪನ್ಮೂಲಗಳ ಬೆಳವಣಿಗೆ ಸ್ಥಗಿತಗೊಳಿಸಿದರೆ ಬಡರಾಷ್ಟ್ರಗಳು ಇನ್ನಷ್ಟು ತತ್ತರಿಸಬೇಕಾಗುತ್ತದೆ.

ಈ ಗೋಜನ್ನು ನಿವಾರಿಸಿಕೊಳ್ಳಬೇಕೆಂದರೆ ನಿಸರ್ಗದಲ್ಲಿ ದೊರೆಯುವ ಉದಾಹರಣೆಯನ್ನೇ ಬಳಸಿಕೊಂಡು ಬೆಳವಣಿಗೆಯ ಅರ್ಥ ಹುಡುಕಬೇಕಾಗುತ್ತದೆ. ನಿಸರ್ಗದ ಜೀವರಾಶಿಗಳಲ್ಲಿ ಎರಡು ಬಗೆಯ ಬೆಳವಣಿಗೆ ಕ್ರಮವನ್ನು ನಾವು ನೋಡಬಹುದು. ಒಂದು 'ಏಕತಾನದ ಬೆಳವಣಿಗೆ' ಇನ್ನೊಂದು 'ಜೈವಿಕ ಬೆಳವಣಿಗೆ' ಏಕತಾನದ ಬೆಳವಣಿಗೆ ಕ್ರಮವೆಂದರೆ ಪ್ರತಿಯೊಂದು ಜೀವಕೋಶವೂ ಒಡೆದು ಒಂದಕ್ಕೆ ಎರಡಾಗುವುದು. ಒಂದರಿಂದ ಎರಡು, ಎರಡರಿಂದ ನಾಲ್ಕು, ನಾಲ್ಕರಿಂದ ಎಂಟು.... ಹೀಗೇ ಕೋಟ್ಯಂತರ ಜೀವಕೋಶಗಳು ಏಕರೂಪದಲ್ಲಿ ಬೆಳೆಯುವುದು. ತಾಸಿಗೊಮ್ಮೆ ಹೀಗೆ ದ್ವಿಗುಣಿತವಾಗುತ್ತ ಹೋದರೆ ಒಂದು ಜೀವಕೋಶ ೨೪ ತಾಸುಗಳಲ್ಲಿ ೧೭೦ ಲಕ್ಷ ಜೀವಕೋಶಗಳನ್ನೂ ೪೮ ತಾಸುಗಳಲ್ಲಿ ೨೮೦,೦೦೦,೦೦೦,೦೦೦,೦೦೦ ತದ್ರೂಪಿ ಜೀವಕೋಶಗಳನ್ನೂ ಉತ್ಪಾದಿಸಬಲ್ಲದು. ಕ್ಯಾನ್ಸರ್ ಕೋಶಗಳು ಬೆಳೆಯುವ ವಿಧಾನ ಇದೇ.

'ಜೈವಿಕ ಬೆಳವಣಿಗೆ' ಬೇರೆ ಬಗೆಯದು: ತಾಯಿಯ ಭ್ರೂಣದಲ್ಲಿ ಶಿಶುವಿನ ಜೀವಕೋಶ ಬೆಳೆದಂತೆ. ಒಂದೊಂದು ಬಗೆಯ ಕೋಶಕ್ಕೂ ಒಂದೊಂದು ಬಗೆಯ ಸ್ವರೂಪ; ವಿಭಿನ್ನ ಕೆಲಸ. ಒಂದು ಮೆದುಳಿನ ಕೋಶವಾಗಿ ವಿಭಜನೆಯಾಗುತ್ತ ಬೆಳೆದರೆ, ಇನ್ನೊಂದು ಮೂಳೆಯ ಕೋಶವಾಗಿ ಬೆಳೆಯುವುದು. ಕೆಲವು ಕೋಶಗಳಿಗೆ ಸದಾ

ಬೆಳವಣಿಗೆ, ಇನ್ನು ಕೆಲವಕ್ಕೆ ಒಮ್ಮೆ ಮಾತ್ರ ಬೆಳವಣಿಗೆ. ಉದಾಹರಣೆಗೆ ಮಾನವ ಶರೀರದ ಬಹಳಷ್ಟು ಭಾಗ ಸದಾ ಪುನರ್ನಿರ್ಮಾಣವಾಗುತ್ತಲೇ ಇರುತ್ತದೆ. (ಮಿದುಳಿನ ನರಕೋಶಗಳು ಮಾತ್ರ ಒಮ್ಮೆ ಬೆಳೆದು ಕೆಲಸ ಪ್ರಾರಂಭಿಸಿದ ಮೇಲೆ ಮತ್ತೆ ಚಿಗುರುವುದಿಲ್ಲ. ಸತ್ತರೆ ಮತ್ತೆ ನಿರ್ಮಾಣವಾಗುವುದಿಲ್ಲ.) ಆದರೆ ದೇಹದ ಉಳಿದ ಅಂಗಗಳ ಜೀವಕೋಶಗಳು ಹುಟ್ಟುತ್ತ ಸಾಯುತ್ತಿರುತ್ತವೆ. ಸುಮಾರು ಪ್ರತಿ ಏಳು ವರ್ಷಗಳಿಗೊಮ್ಮೆ ಶರೀರ ಕಣಕಣವಾಗಿ ಪುನರ್ನಿರ್ಮಾಣವಾಗಿರುತ್ತದೆ.

ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ನಾವು ಹಾಕಿಕೊಳ್ಳಬೇಕಾದ ಬೆಳವಣಿಗೆಯ ವಿಧಾನ ಕ್ಯಾನ್ಸರ್ ನಂತಿರಬಾರದು. ಮಾನವ ಚಟುವಟಿಕೆಯ ಕೆಲವು ರಂಗಗಳಲ್ಲಿ ಬೆಳವಣಿಗೆ ಸಂಪೂರ್ಣ ಸ್ಥಗಿತವಾಗಿ, ಕೆಲವು ರಂಗಗಳಲ್ಲಿ ಹಂತ ಹಂತದ ಬೆಳವಣಿಗೆಯಾಗುವ "ಜೈವಿಕ ವಿಧಾನ" ನಮ್ಮದಾಗಬೇಕು. ಇಂದಿನ ಸಮಾಜ ಮೊದಲಿನಂತಿಲ್ಲ. ಇಂದು ಜಗತ್ತಿನ ಯಾವ ಭಾಗವೂ, ಯಾವ ಚಟುವಟಿಕೆಯೂ ಇತರರಿಗೆ ಸಂಬಂಧವಿಲ್ಲದಂತೆ ಕಾರ್ಯ ನಿರ್ವಹಿಸುವುದು ಸಾಧ್ಯವಿಲ್ಲ. 'ವಸುಧೈವ ಕುಟುಂಬಕಮ್' ಎಂಬ ಮಾತೂ ಹಳತಾಗಿ ಈಗ 'ವಸುಧೈವ ಶರೀರಕಂ' ಎನ್ನಬೇಕಾದ ಹಂತದಲ್ಲಿ ನಾವಿದ್ದೇವೆ. ಇಡೀ ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ಒಟ್ಟಾಗಿ ಸಮಸ್ಯೆಗಳೊಂದಿಗೆ ಸೆಣಸಾಡಬೇಕಾಗಿದೆ.

–ಶ್ರೀ–

'ಮಾಸ್ಟರ್ ಪ್ಲಾನ್'

ನಿಸರ್ಗದಲ್ಲಿ ಕಾಯಿಯೊಳಗಿನ ಬೀಜ ಸಸಿಯಾಗುವಾಗ ಅಥವಾ ತಾಯಿಯೊಳಗಿನ ಭ್ರೂಣ ಶಿಶುವಾಗುವಾಗ ಪ್ರತಿ ಜೀವಾಣುವಿನಲ್ಲೂ ಒಂದು ನಿರ್ದಿಷ್ಟ ಬೆಳವಣಿಗೆಯ ಸೂತ್ರ (ಮಾಸ್ಟರ್ ಪ್ಲಾನ್) ಅಡಕವಾಗಿರುತ್ತದೆ. ಈ ಸೂತ್ರದ ಪ್ರಕಾರವೇ ಯಾವ ಯಾವ ಕೋಶಗಳು ಎಷ್ಟೆಷ್ಟು ಬೆಳೆದು ಎಂಥೆಂಥ ಅಂಗಗಳಾಗಿ ಕಾರ್ಯನಿರ್ವಹಿಸಬೇಕೆಂಬ ಸೃಷ್ಟಿನಿಯಮವಿದೆ.

ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ವ್ಯವಸ್ಥಿತವಾಗಿ ಬೆಳೆಯಬೇಕಾದರೆ ಇಂಥದೊಂದು 'ಮಾಸ್ಟರ್ ಪ್ಲಾನ್' ತೀರ ಅವಶ್ಯ. ಈವರೆಗೆ ನಾವು ಅನುಸರಿಸಿದ್ದು ಕ್ಯಾನ್ಸರ್ ರೂಪದ ಏಕತಾನದ ಬೆಳವಣಿಗೆ ವಿಧಾನ. ('ಇಡೀ ಜಗತ್ತಿಗೇ ಇಂದು ಕ್ಯಾನ್ಸರ್ ಹಬ್ಬುತ್ತಿದೆ; ಮನುಷ್ಯನೇ ಕ್ಯಾನ್ಸರ್ ಕೋಶ' ಎಂದು ಎ. ಗ್ರೇಗ್ ಎಂಬಾತ

೧೯೫೫ರಲ್ಲಿ ಹೇಳಿದ್ದ.) ಈ ವಿಧಾನದ ಪ್ರಗತಿಪಥವನ್ನು ಬಿಟ್ಟುಕೊಟ್ಟು ಜೈವಿಕ ವಿಧಾನದ ಬೆಳವಣಿಗೆಯನ್ನು ಅನುಸರಿಸಬೇಕೆಂದರೆ ಪ್ರತಿಯೊಬ್ಬ ಮಾನವನೂ ತನ್ನ ಬದುಕಿನಲ್ಲಿ ಅಷ್ಟಿಷ್ಟು ಮಾರ್ಪಾಡು ಮಾಡಿಕೊಳ್ಳಲೇಬೇಕು.

ನಮ್ಮದು ಬಡರಾಷ್ಟ್ರವಾಗಿರಲಿ ಧನಿಕದೇಶವಾಗಿರಲಿ ಪ್ರಕೃತಿಯನ್ನು ದೋಚುವ ದುಂದು ಪ್ರವೃತ್ತಿಯನ್ನು ಕಡಿಮೆ ಮಾಡಲೇಬೇಕು. ರಾಷ್ಟ್ರದ ಗಡಿ ಸಂರಕ್ಷಣೆಗಾಗಿ ಪ್ರತಿ ವರ್ಷ ಮಾನವಕುಲ ವೆಚ್ಚ ಮಾಡುವ ೫೫೦೦ ಶತಕೋಟಿ ರೂಪಾಯಿಗಳ ಧನಧಾರೆ ನಿಲ್ಲಬೇಕು. ರಾಷ್ಟ್ರೀಯ ಭದ್ರತೆಯ ವ್ಯಾಖ್ಯೆ ಬದಲಾಗಬೇಕು. ಮಿಲಿಟರಿಯ ಮೂಲಕವೇ ದೇಶದ ಸಂರಕ್ಷಣೆಯಾದೀತೆಂಬ ಧೋರಣೆ ಬದಲಾಗಬೇಕು. ಇಂದು ಶಕ್ತ ರಾಷ್ಟ್ರಗಳೂ ತತ್ತರಿಸುತ್ತಿರುವುದು ಗಡಿಯಾಚೆ ಕೂತಿರುವ ವೈರಿಯ ಭಯದಿಂದಲ್ಲ; ಗಡಿಯೊಳಗೇ ಕುದಿಯುತ್ತಿರುವ ಪ್ರಜಾಕೋಟಿಯ ಸಮಸ್ಯೆಗಳಿಂದ ಶುದ್ಧಗಾಳಿಯ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಸಂಪನ್ಮೂಲ ಸಮಸ್ಯೆ, ಮಳೆ ಬೆಳೆಯ ಸಮಸ್ಯೆ...

ಅಣ್ವಸ್ತ್ರಗಳ ಪ್ರಯೋಗದಿಂದ ಈ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಿಲ್ಲ. ಭೀಕರ ಲೇಸರ್ ಶಸ್ತ್ರಗಳನ್ನು ಹೊತ್ತ ಹತ್ತು ತಲೆಯ ಖಂಡಾಂತರ ಕ್ಷಿಪಣಿಗಳೂ ಈ ಸಮಸ್ಯೆಗಳಿಗೆ ಪರಿಹಾರ ದೊರಕಿಸಲಾರವು. ನೂರಾರು ಮಾರಕಾಸ್ತ್ರಗಳನ್ನು ಹೊತ್ತು ಗಗನದಲ್ಲಿ ಗಸ್ತು ತಿರುಗುವ ಗೂಢಚಾರಿ ಉಪಗ್ರಹಗಳೂ ಮಾನವನ ಸಂಕಟ ಸಮಯಕ್ಕೆ ನೆರವಿಗೆ ಬರಲಾರವು.

**–೬–**

ಏಕೈಕ ಭೂಮಿ

ಕಂಗೆಟ್ಟ ಭೂಮಿಯನ್ನು ಮತ್ತೆ ಸುಸ್ಥಿತಿಗೆ ತರಬೇಕೆನ್ನುವಲ್ಲಿ ಒಂದು ಬಹು ಮೂಲ್ಯ ಕಾರಣವಿದೆ.

ಇಡೀ ವಿಶ್ವದಲ್ಲಿ ಜೀವಿಗಳಿರಬಹುದಾದ ಬೇರೆ ಯಾವ ಗ್ರಹಗಳೂ ನಮ್ಮ ಗಮನಕ್ಕೆ ಈವರೆಗೆ ಬಂದಿಲ್ಲ. ಚಂದ್ರನ ಮೇಲೆ ಇಳಿದು ಸ್ವತಃ ನೋಡಿಯಾಯಿತು. ಬರೀ ಬರಡೋ ಬರಡು. ಬುಧ, ಮಂಗಳ, ಗುರು, ಶನಿಗ್ರಹಗಳವರೆಗೂ ಯಂತ್ರದೂತರನ್ನು ಕಳಿಸಿಯಾಯ್ತು. ಓಗೊಡುವವರು ಮಾತ್ರ ಯಾರೂ ಕಂಡುಬಂದಿಲ್ಲ. ಜೀವರಾಶಿ ತುಂಬಿ ತುಳುಕುವ, ತುಂಬ ಅಪರೂಪದ ಏಕಾಕಿ ಭೂಮಿ ನಮ್ಮದು. ಇದನ್ನು ಉಳಿಸಿಕೊಳ್ಳಬೇಕು.

# 2.3 ಬಡತನ ನಿರ್ಮೂಲನಕ್ಕೆ ಸಂಪತ್ತಿನ ಸೃಷ್ಟಿ ಅಗತ್ಯ

**–ಸುಧಾಮೂರ್ತಿ**

ತರುಣ ನಾರಾಯಣ ಮೂರ್ತಿ ಸ್ವಭಾವತಃ ಅಂತರ್ಮುಖಿ ಮತ್ತು ಆದರ್ಶವಾದಿ. ಇದು ೧೯೭೦ ರಿಂದ ೧೯೭೪ರನೇ ವರ್ಷದ ಸಮಯ. ಆಗ ಅವರು ಫ್ರಾನ್ಸ್ ದೇಶದ ಪ್ಯಾರಿಸ್ ಚಾರ್ಲ್ಸ್ ಡಿ–ಗಾಲ್ ಏರ್ಪೋರ್ಟಿನ ಕಂಪ್ಯೂಟರ್ ವಿಭಾಗದಲ್ಲಿ ಉನ್ನತ ಹುದ್ದೆಯಲ್ಲಿದ್ದರು. ಒಳ್ಳೆಯ ಸಂಬಳ ಮತ್ತು ತಲೆ ತುಂಬಾ ಆದರ್ಶಗಳು ಅವರನ್ನು ಕಮ್ಯೂನಿಸ್ಟ್ ವಾದಿಗಳನ್ನಾಗಿ ಮಾಡಿತ್ತು. ಹೀಗಾಗಿ ತಾವು ಗಳಿಸಿದ ಅಪಾರ ಹಣವನ್ನು ಪ್ಯಾರಿಸಿನ ಒಂದು ಎನ್ ಜಿ ಓ ಗೆ ದಾನಮಾಡಿದ್ದರು. ಆ ಎನ್ ಜಿ ಓ ಇವರು ಕೊಟ್ಟ ಹಣವನ್ನು'ಬಡತನದಲ್ಲಿರುವ ದೇಶಗಳಿಗೆ ಸಹಾಯ ಮಾಡುತ್ತೇವೆ' ಎಂದು ಆಶ್ವಾಸನೆ ಕೊಟ್ಟಿದ್ದರು. ಭಾರತಕ್ಕೆ ತಿರುಗಿ ಬಂದು ದೇಶದಲ್ಲಿ ಏನಾದರೂ ಕೆಲಸ ಮಾಡಬೇಕು, ಬಡವರಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಉಳಿದ ಸಾಮಾನುಗಳನ್ನೆಲ್ಲಾ ಹಂಚಿ, ಬೆನ್ನ ಮೇಲೊಂದು ಬ್ಯಾಗ್ ಪ್ಯಾಕ್ ಮಾಡಿಕೊಂಡು ಪ್ಯಾರಿಸಿನಿಂದ ಮೈಸೂರಿಗೆ ಪ್ರಯಾಣ ಮಾಡಲು ಮೊದಲಾದರು. ಅವರ ಪ್ರವಾಸವೋ ವಿಚಿತ್ರವಾಗಿತ್ತು. ಅವರು ನೇರವಾಗಿ ಭಾರತಕ್ಕೆ ಬರದೇ ರೈಲು – ಬಸ್ಸು– ಕಾರು ಹೀಗೆ ಬೇರೆ ಬೇರೆ ವಾಹನಗಳಿಂದ, ಬೇರೆ ಬೇರೆ ದೇಶಗಳನ್ನು ನೋಡುತ್ತಾ ಮೂರು ತಿಂಗಳಲ್ಲಿ ಭಾರತವನ್ನು ತಲುಪಲಿದ್ದರು. ಕೆಲವು ವೇಳೆ ಯಾವ ವಾಹನವೂ ಸಿಗದಿದ್ದಾಗ ಅವರು ನಡೆದದ್ದೂ ಉಂಟು. ಯೂರೋಪ್ ದೇಶಗಳಲ್ಲಿ ತರುಣ ಪೀಳಿಗೆಗಳಲ್ಲಿ ಇದು ಅತೀ ಸಾಮಾನ್ಯ. ರಸ್ತೆ ಬದಿಗೆ ನಡೆಯುವ ಇಂಥ ತರುಣರಿಗೆ ಅನೇಕ ಕಾರು ಮಾಲಿಕರು ಲಿಫ್ಟ್ ಕೊಡುವುದೂ ಉಂಟು. ಇಂಥ ಪ್ರಯಾಣದ ನಡುವೆ ಒಂದು ಘಟನೆ ಕೇವಲ ತರುಣ ನಾರಾಯಣ ಮೂರ್ತಿಯನ್ನು ಮಾತ್ರವಲ್ಲ ಬದಲು ಭಾರತದ ಇಂದಿನ ಮಾಹಿತಿ ತಂತ್ರಜ್ಞಾನದ ದಿಕ್ಕನ್ನೇ ಬದಲಿಸಿತು ಎಂದರೆ ತಪ್ಪಾಗಲಾರದು.

ಅದೊಂದು ಕಡು ಚಳಿಗಾಲದ ರವಿವಾರದ ಮುಂಜಾವು. ಮೂರ್ತಿ ಇಟಲಿ ದೇಶದಿಂದ 'ನಿಸ್' ಎನ್ನುವ ಊರನ್ನು ಬಂದು ತಲುಪಿದರು. ಅದು ಆಗ ಬಲ್ಗೇರಿಯಾ ಮತ್ತು ಯುಗೊಸ್ಲಾವಿಯಾ ದೇಶದ ಗಡಿಯಲ್ಲಿದ್ದಿತು. ಮೂರ್ತಿ ಅಲ್ಲಿಂದ ಇಸ್ತಾಂಬುಲಕ್ಕೆ ಹೋಗುವ ವಿಚಾರದಲ್ಲಿದ್ದರು. ಹೀಗಾಗಿ 'ನಿಸ್' ರೈಲು ನಿಲ್ದಾಣದಿಂದ ಹಾದುಹೋಗುವ 'ಸೋಫಿಯಾ ಎಕ್ಸ್ ಪ್ರೆಸ್' ರೈಲನ್ನು ಹಿಡಿಯುವ ವಿಚಾರ ಮಾಡಿದರು. ರೈಲು ನಿಲ್ದಾಣಕ್ಕೆ ಬಂದ ಮೂರ್ತಿ, ರೈಲು ರಾತ್ರಿ ಎಂಟು ಗಂಟೆಗೆ ಬರುವುದೆಂದು ತಿಳಿದು ಅಲ್ಲಿಯೇ ತಿಂಡಿ ತೀರ್ಥ ಮುಗಿಸಿ

ನಿಲ್ದಾಣದ ಬೆಂಚೊಂದರಲ್ಲಿ ಬ್ಯಾಗ್ ಪ್ಯಾಕನ್ನೇ ತಲೆದಿಂಬಾಗಿರಿಸಿ ಮಲಗಿದರು. ರೈಲು ನಿಯಮಿತ ವೇಳೆಗೆ ಬಂದಿತು. ರೈಲು ಬೋಗಿಯೊಳಗೆ ಇವರೊಬ್ಬರೇ ಪ್ರಯಾಣಿಕರು. ಅಂತರ್ಮುಖಿಯಾದ ಇವರಿಗೆ ಅದೇನೂ ಕಷ್ಟಕರವಾದದ್ದಲ್ಲ. ಪುಸ್ತಕ ತೆಗೆದು ಓದುತ್ತಿರುವಾಗ ಅನಿರೀಕ್ಷಿತವಾಗಿ ಎತ್ತರ ನಿಲುವಿನ, ನೀಲಗಣ್ಣಿನ, ಹೊನ್ನ ಕೂದಲಿನ, ಬಿಳಿಯ, ಚಲುವ ತರುಣಿಯೊಬ್ಬಳು ಒಳಗೆ ಬಂದಳು. ತನ್ನ ಸಹ ಪ್ರಯಾಣಿಕನನ್ನು ನೋಡಿ ಅಪರಿಚಿತನಾದರೂ ಸ್ನೇಹದ ಮುಗುಳ್ನಗೆಯನ್ನು ನಕ್ಕಳು. ಸಾಮಾನ್ಯವಾಗಿ ಯಾವ ದೇಶದಲ್ಲಿದ್ದರೂ ಹೆಣ್ಣು ಮಕ್ಕಳು ಹೆಚ್ಚು ಮಾತನಾಡಲು ಇಚ್ಛಿಸುತ್ತಾರೆ. ಇದಕ್ಕೆ ಅವಳೂ ಅಪವಾದವಿರಲಿಲ್ಲ. ಅವಳ ಎರಡು ಪ್ರಶ್ನೆಗೆ ಮೂರ್ತಿ ಒಂದು ಉತ್ತರ ಕೊಡುತ್ತಿದ್ದರೂ ಸಂಭಾಷಣೆ ಮುಂದುವರೆಯಿತು. ಆಗ ಭಾರತದ ನಿಲುವು ಸಮಾಜವಾದ ಮತ್ತು ಕಮ್ಯೂನಿಸ್ಟ್ ಪರವಾಗಿತ್ತು. ಮಾತುಮಾತಿನಲ್ಲಿ ಅವರವರ ವೈಯಕ್ತಿಕ ವಿಚಾರಗಳೂ ಹೊರಬಂದವು. ಆ ತರುಣಿ ತನ್ನ ಪರಿಚಯ ಮಾಡಿಕೊಂಡು "ನಾನು ಸೋಫಿಯಾ ಊರಿನವಳು. ನಮ್ಮದು ಕಮ್ಯೂನಿಸ್ಟ್ ದೇಶ. ಸರ್ಕಾರದಿಂದ ನನಗೆ ವಿದ್ಯಾರ್ಥಿವೇತನ ಸಿಕ್ಕು ನಾನು ಪಿಎಚ್.ಡಿ. ಅಧ್ಯಯನ ಮಾಡಲು ರಷ್ಯದ ಕೀವ್ ವಿಶ್ವವಿದ್ಯಾಲಯಕ್ಕೆ ಹೋಗಿದ್ದೆ. ಅಲ್ಲಿ ನನಗೆ ಪೂರ್ವ ಜರ್ಮನಿಯಿಂದ ಬಂದ ಒಬ್ಬ ತರುಣನ ಭೇಟಿಯಾಯಿತು. ಅವನೂ ಓದಲಿಕ್ಕೆ ಬಂದಿದ್ದ. ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಿದೆವು. ಮದುವೆಯಾಗಬೇಕೆಂದು ತುಂಬಾ ಇಚ್ಛಿಸಿದೆವು. ಆದರೆ... " ಆ ಚೆಲುವೆ ನಿಟ್ಟುಸಿರುಬಿಟ್ಟಳು. (ಪೂರ್ವ ಜರ್ಮನಿ ಆಗ ಕಮ್ಯೂನಿಸ್ಟ್ ರಾಜ್ಯವಾಗಿತ್ತು).

ಅನುಕಂಪದಿಂದ ಮೂರ್ತಿ– "ನೀವಿಬ್ಬರು ಒಬ್ಬರನ್ನೊಬ್ಬರು ಮೆಚ್ಚಿಕೊಂಡಿದ್ದೀರಿ ಮದುವೆ ಆಗಲಿಲ್ಲ ಯಾಕೆ? ಏನಾದರೂ ತೊಂದರೆ ಇದ್ದಿತ್ತೇ?" ಎಂದರು.

"ಇಲ್ಲ ನಾವು ಮದುವೆಯಾದೆವು, ಆದರೆ ನಾವಿಬ್ಬರೂ ಒಂದೇ ಸ್ಥಳದಲ್ಲಿ ಒಟ್ಟಿಗೆ ಇರಲಾರೆವು. ನಮ್ಮ ದೇಶದ ಕಾಯಿದೆಯ ಪ್ರಕಾರ ಮದುವೆಗಾಗಿ ನಾವು ಅರ್ಜಿಯನ್ನು ಹಾಕಬೇಕು. ಎರಡೂ ದೇಶದವರು ಅದನ್ನು ಮಾನ್ಯ ಮಾಡಬೇಕು. ಆಮೇಲೆ ಸರ್ಕಾರದ ಅನುಮತಿ ಪಡೆದು ಅವನ ದೇಶದಲ್ಲಾಗಲೀ ಒಟ್ಟಿಗೆ ಇರಬಹುದು. ಆದರೆ ನಮ್ಮಿಬ್ಬರಲ್ಲಿ ಬೇರೆ ತರಹದ ಸಮಸ್ಯೆಯಿದೆ. ನಮ್ಮ ಸರಕಾರದವರು ನನಗೆ ವಿದ್ಯಾರ್ಥಿವೇತನ ಕೊಟ್ಟು ಬೇರೆ ದೇಶದಲ್ಲಿ ಪಿಎಚ್.ಡಿ ಮುಗಿದ ಮೇಲೆ ನಾನು ಹಲವು ವರ್ಷವಾದರೂ ಸರ್ಕಾರಕ್ಕೆ ಸೇವೆ ಸಲ್ಲಿಸಬೇಕು. ಅಂತೆಯೇ ನನ್ನ ಗಂಡನೂ ಅವರ ದೇಶದಲ್ಲಿ ಹಲವು ವರ್ಷ ಸರ್ಕಾರಿ ಸೇವೆ ಮಾಡಬೇಕು. ಆದ್ದರಿಂದ ಪ್ರತಿ ಆರು ತಿಂಗಳಿಗೊಂದು ಬಾರಿ ನನ್ನ ಗಂಡ ಬರುತ್ತಾರೆ. ಸಾಮಾನ್ಯ ದಾಂಪತ್ಯ ಜೀವನ ನಮಗೆ ದುರ್ಲಭವಾಗಿದೆ".

ಮೂರ್ತಿಗೆ ಅವಳ ಬಗ್ಗೆ ಅನುಕಂಪ ಮೂಡಿತು. ಸ್ವಲ್ಪ ಆವೇಶದಲ್ಲಿ "ಇದೆಂಥಾ ಸರ್ಕಾರ? ಯಾವುದೇ ದೇಶದಲ್ಲಿ ಕಮ್ಯೂನಿಸ್ಟ್ ಸರ್ಕಾರವೇ ಇರಲಿ, ಬಂಡವಾಳಶಾಹಿಗಳೇ ಇರಲಿ ಆಥವಾ ಮತ್ಯಾರೇ ಆಳಿದರೂ ಸಂಗಾತಿಯನ್ನು ಆರಿಸುವುದು, ಕೆಲಸವನ್ನು ತೆಗೆದುಕೊಳ್ಳುವುದು, ತಮ್ಮ ಮನಸ್ಸಿನ ವಿಚಾರವನ್ನು ಮುಕ್ತವಾಗಿ ಹೇಳಿಕೊಳ್ಳುವುದನ್ನು ಯಾರೂ ತಡೆಯಬಾರದು. ಅದು ಮಾನವನ ಮೂಲಭೂತ ಹಕ್ಕು. ಅದನ್ನು ವಿರೋಧಿಸುವ ಸರ್ಕಾರ ನಿಜವಾಗಿ ಹೃದಯ ವಿಹೀನ.... "

ಇವರ ಸಂಭಾಷಣೆಯ ಮಧ್ಯದಲ್ಲಿ, ನಡುವಿನ ನಿಲ್ದಾಣದಲ್ಲಿ ಇವರ ಬೋಗಿಯಲ್ಲಿ ಬಂದು ಸೇರಿದ ಮೂರನೇ ಪ್ರಯಾಣಿಕನನ್ನು ಇವರು ಮರೆತುಬಿಟ್ಟಿದ್ದರು. ಇವರ ಮಾತುಕತೆಗಳು ಫ್ರೆಂಚ್ ಭಾಷೆಯಲ್ಲಿ ನಡೆದಿದ್ದವು. ಇವರ ಮಾತುಕತೆಯ ಮಧ್ಯೆ ಆತ ಎದ್ದು ಹೋದ. ಕೆಲವೇ ಕ್ಷಣಗಳಲ್ಲಿ ಎರಡು ಭೀಮಾಕಾರದ, ಕಠೋರ ಚಹರೆಯ ಪೋಲಿಸರನ್ನು ಆತ ಕರೆತಂದ. ಬಂದವರಲ್ಲಿ ಒಬ್ಬ ಹೆಚ್ಚು ಮಾತನಾಡದೇ ನಾರಾಯಣ ಮೂರ್ತಿಯ ಶರ್ಟಿನ ಕಾಲರ್ ಹಿಡಿದು ದರದರನೇ ಎಳೆದು ರೈಲು ನಿಂತ ಮೇಲೆ ನಿಲ್ದಾಣದ ಹೊರಕ್ಕೆ ತಳ್ಳಿದ. ಇನ್ನೊಬ್ಬ ಪೋಲಿಸ್ ಆ ಹುಡುಗಿಯನ್ನು ಎಳೆದುಕೊಂಡು ಹೋದ. ಮೂರ್ತಿಯವರನ್ನು ನಿಲ್ದಾಣದಲ್ಲಿ ಸ್ವಲ್ಪವೂ ಬೆಳಕಿಲ್ಲದೆ ಇರುವ ಕತ್ತಲೆಕೋಣೆಯ ಒಳಗೆ ಕೂಡಿಹಾಕಿದರು. ನೆಲವೋ ಮಂಜಿನಷ್ಟು ತಣ್ಣಗೆ ಕೊರೆಯುತ್ತಿತ್ತು. ಅಲ್ಲೊಂದು ಮೂತ್ರಾಲಯ ಇದೆ ಎಂದು ವಾಸನೆಯಿಂದ ತಿಳಿಯುತ್ತಿತ್ತು. ಅದೊಂದು ಜೈಲುಖಾನೆ. ಮೂರ್ತಿಯ ಮನಸ್ಸಿಗೆ ದಿಗ್ಭ್ರಮೆ. ಅದರೊಂದಿಗೆ ಆ ಹುಡುಗಿಯ ಗತಿಯೇನಾಯಿತೋ? ಎಂದು ಆತಂಕ. ಇನ್ನೂ ಇಲ್ಲಿ ಎಷ್ಟು ದಿನ ಕಳೆಯಬೇಕೋ ಎನ್ನುವ ಹೆದರಿಕೆ, ಅನಿಶ್ಚಿತ ಭವಿಷ್ಯ. ತನಗೇನಾದರೂ ಆದರೆ ತನ್ನ ಸಾವಿನ ಬಗ್ಗೆ ಮನೆಯವರಿಗೆ ಸುದ್ದಿಯಾದರೂ ಹೇಗೆ ತಿಳಿಯಬೇಕು? ಎನ್ನುವ ವಿಚಾರ ಮತ್ತೆ ಮತ್ತೆ ಹಾಯುತಿತ್ತು. ಆಗಲೇ ಅವರ ತಂದೆ ಅರ್ಧಾಂಗ ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದಿದ್ದರು. ಮದುವೆಯಾಗದ ಮೂವರು ತಂಗಿಯರು, ಅವರ ಜವಾಬ್ದಾರಿ ಬೇರೆ. ಸ್ವಲ್ಪ ಹೊತ್ತಾದ ಮೇಲೆ ಆ ಘಟನೆಯನ್ನು ಅವರು ಹಿಂತಿರುಗಿ ನೋಡಿದಾಗ, ಆ ಸಹಪ್ರಯಾಣಿಕ ಬಹುಶಃ ಗೂಢಾಚಾರನಿದ್ದನೋ ಏನೋ? ಎಂದುಕೊಂಡರು.

ಕಾಲ ಯಾರಿಗೂ ದಾರಿ ಕಾಯುವುದಿಲ್ಲ. ಹಗಲು ಸರಿಯಿತೋ,ಇರುಳು ಕಳೆಯಿತೋ ಏನೊಂದೂ ಕತ್ತಲ ಕೋಣೆಯಲ್ಲಿ ಗೊತ್ತಾಗಲೇ ಇಲ್ಲ. ಆಗೀಗ ಬ್ರೆಡ್ಡಿನ ತುಣುಕೊಂದನ್ನು ಯಾರೋ ಬಾಗಿಲು ತೆಗೆದು ಇರಿಸಿ ಹೋದಾಗ ಬೆಳಕಿನ ಕಿರಣವಿದೆ ಎನ್ನುವುದು ಗೊತ್ತಾಗುತ್ತಿತ್ತು.ನಿಶ್ಶಕ್ತಿಯಿಂದ ಗಾಬರಿ ಇಮ್ಮಡಿಯಾಯಿತು. ಬಹುಶಃ ಒಂದೆರಡು ದಿನಗಳು ಉರುಳಿದವೋ ಏನೋ? ಕೊನೆಗೊಂದು ದಿನ ಒಬ್ಬ ಪೋಲಿಸಿನವನು ಬಾಗಿಲು ತೆಗೆದು

ಮೂರ್ತಿಯವರನ್ನು ಹೊರಗೆಳೆದು ಕೈಯಲ್ಲಿ ಬ್ಯಾಗ್ – ಪ್ಯಾಕ್ ಕೊಟ್ಟನು. ಅಲ್ಲೇ ಇಸ್ತಾಂಬುಲಕ್ಕೆ ಹೋಗುವ ಇನ್ನೊಂದು ರೈಲು ನಿಂತಿತ್ತು. ಅದಕ್ಕೆ ಮೂರ್ತಿಯನ್ನು ಹತ್ತಲು ಹೇಳಿ, ಕೈಯಲ್ಲಿ ಪಾಸ್ಪೋರ್ಟ್ ತುರುಕಿದರು. ರೈಲನ್ನು ಏರಿದ ಮೂರ್ತಿ ಹಿಡಿಕೆಯನ್ನು ಬಿಗಿಯಾಗಿ ಹಿಡಿದುಕೊಂಡು ಅಳಿದುಳಿದ ಧೈರ್ಯದಿಂದ "ನನ್ನದೇನು ತಪ್ಪಾಗಿತ್ತು?" ಎಂದು ಪ್ರಶ್ನಿಸಿದರು.

ಕಲ್ಲು ಮುಖದ ಪೋಲಿಸ್ "ನಿನಗೂ ಆ ಹುಡುಗಿಗೂ ಏನು ಸಂಬಂಧ?"

"ಅವಳೂ ನನ್ನಂತೆ ಸಹಪ್ರಯಾಣಿಕಳು."

"ಹಾಗಿದ್ದರೂ ನೀನೇಕೆ ಕಮ್ಯೂನಿಸ್ಟ್ ದೇಶವನ್ನು ಟೀಕಿಸುತ್ತಿದ್ದೆ. ಸರ್ಕಾರವನ್ನು ದೂಷಿಸುವುದು ನಮ್ಮ ದೇಶದಲ್ಲಿ ಅಕ್ಷಮ್ಯ ಅಪರಾಧ"

"ಆ ತರುಣಿ ಏನಾದಳು?"

"ಅದು ನಿನಗೆ ಸಂಬಂಧಪಟ್ಟ ವಿಷಯವಲ್ಲ. ನಿನ್ನ ಬ್ಯಾಗ್ – ಪ್ಯಾಕ್ ನಲ್ಲಿರುವ ಪಾಸ್ಪೋರ್ಟ್ ಕೂಲಂಕಷವಾಗಿ ನೋಡಿದೆವು. ನೀನು ಕೆಲಸ ಮಾಡುವ ಜಾಗದಲ್ಲಿಯೂ ನಿನ್ನ ಬಗ್ಗೆ ವಿಚಾರಿಸಿದೆವು. ಭಾರತ ದೇಶಕ್ಕೂ ನಮ್ಮ ದೇಶಕ್ಕೂ ಬಹಳ ಗೆಳೆತನವಿದೆ. ಆದ್ದರಿಂದ ನಿನಗೆ ನಾವು ಶಿಕ್ಷೆ ಕೊಡದೆ ಕಳುಹಿಸುತ್ತಿದ್ದೇವೆ. ಇನ್ನೊಂದು ಸಾರಿ ಹೆಚ್ಚು ಮಾತನಾಡಿದರೆ ನೋಡು ಪರಿಣಾಮ ನೆಟ್ಟಗಾಗಲಿಕ್ಕಿಲ್ಲ".ಎಂದು ಉತ್ತರಕ್ಕಾಗಿ ಕಾಯದೇ ರೈಲ್ವೇಬೋಗಿಯ ಬಾಗಿಲು ದೂಡಿದರು. ರೈಲು ಚುಕುಬುಕು ಎನ್ನುತ್ತಾ ಹೊರಟಿತು.

ಮೂರ್ತಿ ಆಯಾಸದಿಂದ ಕಿಟಕಿ ಬಳಿ ಇರುವ ಸೀಟಿನಲ್ಲಿ ಒರಗಿದರು. ಊಟ ನಿದ್ದೆಯಿಲ್ಲದೆ ದೇಹಮನಸ್ಸು ನಿಶ್ಶಕ್ತವಾಗಿದ್ದವು. ಎದುರಿಗಿದ್ದ ಸಹಪ್ರಯಾಣಿಕರಿಂದ ಆ ದಿನದ ದಿನಾಂಕವನ್ನು ಕೇಳಿ, ನಾಲ್ಕು ದಿನ ಜೈಲಿನಲ್ಲಿ ಕಳೆದಿದ್ದನ್ನು ಖಚಿತಪಡಿಸಿಕೊಂಡರು.

ಆ ನಾಲ್ಕು ದಿನಗಳಲ್ಲಿ ಜೀವನದ ದೃಷ್ಟಿ ಎಷ್ಟೊಂದು ಬದಲಾಗಿತ್ತು? ಅಲ್ಲಿಯವರೆಗೆ ನಾರಾಯಣ ಮೂರ್ತಿ ಪ್ಯಾರಿಸ್ ನಗರದ ಸುಂದರವಾದ ರಸ್ತೆಗಳ ಬದಿಯಲ್ಲಿ ಸಂಜೆಯ ವೇಳೆ ಗೆಳೆಯರೊಂದಿಗೆ ಕುಳಿತುಕೊಂಡು ಕಮ್ಯೂನಿಸ್ಟ್ ಸಿದ್ಧಾಂತದ ಬಗ್ಗೆ ಕಾಫಿ ಕುಡಿಯುತ್ತಾ ಗಂಟೆಗಟ್ಟಲೆ ಮಾತನಾಡುತ್ತಿದ್ದರು. ಅವರ ಮಾತಿನಲ್ಲಿ ಕಾರ್ಲ್ ಮಾರ್ಕ್ಸ್, ಲೆನಿನ್, ಮಾವೋ ಝೆಡ್ಯಾಂಗ್, ಹೋಚಿಮಿನ್ ಇವರುಗಳ ಬಗ್ಗೆ ಎಷ್ಟೊಂದು

ವರ್ಣಿಸುತ್ತಿದ್ದರು. ಇವೆಲ್ಲಾ ಮಾತುಕತೆಗಳು ಹೊಟ್ಟೆತುಂಬಿದ ಮೇಲೆ, ಬ್ಯಾಂಕಿನಲ್ಲಿ ಹಣದ ಮೊತ್ತ ಏರಿದ ಮೇಲೆ ನಿರಾತಂಕವಾಗಿ ಹೊತ್ತು ಕಳೆಯುವ ಮಾರ್ಗಗಳಾಗಿದ್ದವು. ನಿಜವಾಗಿ ಕಮ್ಯೂನಿಸಮ್ ಎಂದರೇನು? ಅವರ ಯಾವ ಸಿದ್ಧಾಂತಗಳಿಂದ ಯಾರಿಗೆ ಸಹಾಯವಾಗುತ್ತದೆ? ಕಮ್ಯೂನಿಸಮ್ ನಲ್ಲಿ ಎಷ್ಟೊಂದು ಸ್ವಾತಂತ್ರ್ಯ ಹರಣವಾಗುತ್ತಿದೆ? ಮೂಲಭೂತ ಹಕ್ಕುಗಳು ಮಾಯವಾಗಬಹುದು ಹೊಟ್ಟೆ ತುಂಬಬಹುದು. ಯಾವ ದೇಶಕ್ಕೆ, ಯಾವ ಜನಾಂಗಕ್ಕೆ ಈ ಕಮ್ಯೂನಿಸಂ ಹೊಂದಲು ಸಾಧ್ಯ? ಪ್ರತಿ ದೇಶಕ್ಕೆ ಆದರದೇ ಆದ ಸಂಸ್ಕೃತಿ ಇರುವುದರಿಂದ ಕಮ್ಯೂನಿಸಂ ರೂಪುಗೊಂಡು ಕೇವಲ ಪುಸ್ತಕರೂಪವಾಗಿ ಸೈದ್ಧಾಂತಿಕವಾಗಿ ಅದು ಉಳಿಯದೇ ಜನರಿಗೆ ಸಹಾಯ ಮಾಡುವ, ಜನರ ಕಣ್ಣೀರನ್ನು ಅಳಿಸುವ ವ್ಯವಸ್ಥೆಯಾಗಬೇಕು ಎಂಬುದರ ಅರಿವು ಈಗ ನಾರಾಯಣ ಮೂರ್ತಿಗಾಯಿತು. ಯಾವ ದೇಶದಲ್ಲಿ ಮಾನವನ ಮೂಲತತ್ವಗಳಿಗೆ ಬೆಲೆಯಿಲ್ಲವೋ ಅಂಥಾ ದೇಶ ಏನನ್ನು ಸೃಷ್ಟಿಸೀತು? ಯಾರಿಗೆ ಸಾಂತ್ವನ ನೀಡೀತು? ಆಹಾರ, ಬಟ್ಟೆಗಳು ಎಲ್ಲಾ ಮಾನವರಿಗೂ ಬೇಕು ಆದರೆ ಅದರ ಜೊತೆಗೆ ವಾಕ್ ಸ್ವಾತಂತ್ರ್ಯವೂ ಬೇಕು. ಬಡತನದ ಬೇಗೆ ಕೇವಲ ದೈಹಿಕವಾದದ್ದಲ್ಲ ಮಾನಸಿಕವೂ ಹೌದು. ಬಡತನವನ್ನು ಬೇರು ಸಹಿತ ಕಿತ್ತು ಹಾಕುವುದು ಕೇವಲ ಮಾತಿನಿಂದ ಸಾಧ್ಯವಿಲ್ಲ. ಬೇರೆ ಬೇರೆ ಧ್ಯೇಯವಾಕ್ಯ ಬರೆದು ಕೂಗಾಡುವುದರಿಂದಲ್ಲ. ಬಡತನದ ಬೇಗೆಯನ್ನು ಗುಣಪಡಿಸಲು ಸಂಪತ್ತನ್ನು ಸೃಷ್ಟಿಸಬೇಕು. ಸಂಪತ್ತಿನ ಸೃಷ್ಟಿಯೇ ಬಡತನದ ವೈರಿ. ಸೃಷ್ಟಿಸಿದ ಸಂಪತ್ತನ್ನು ಬಡ ಜನರಿಗೆ ಹಂಚಬೇಕು ಆಗಲೇ ನೆಮ್ಮದಿಯ ಸಾಮಾಜಿಕ ವ್ಯವಸ್ಥೆ ಸಾಧ್ಯ. ನಮ್ಮ ದೇಶಕ್ಕೆ ಇಂಥ ಸಾಮಾಜಿಕ ವ್ಯವಸ್ಥೆಯ ಅವಶ್ಯಕತೆಯಿದೆ. ಪ್ಯಾರಿಸಿನಲ್ಲಿರುವ ಯಾವ ಎನ್ ಜಿ ಓಗೆ ತಾನು ಹಣ ಕೊಟ್ಟಿದ್ದೇನೆ, ಆ ಹಣದಿಂದ ಯಾವ ಪ್ರಯೋಜನವೂ ನಮ್ಮ ದೇಶದಲ್ಲಿ ಆಗಲು ಸಾಧ್ಯವಿಲ್ಲ. ಕೇವಲ ನಿರುಪಯೋಗ ಭಾಷಣ ಮಾತ್ರ ಸಾಧ್ಯವಿದೆ. ನಮ್ಮ ದೇಶದ ಬಡತನ ತೆಗೆಯಲು ಬರುವುದಿಲ್ಲ. ಒಂದು ದಿನ ತಾನು ಸಂಪತ್ತನ್ನು ಕಾನೂನು ಮತ್ತು ನೀತಿ ಪ್ರಕಾರವಾಗಿ ಸೃಷ್ಟಿಸಬೇಕು.

ಪ್ಯಾರಿಸಿನಿಂದ ಬಂದ ನಂತರ ನಾರಾಯಣ ಮೂರ್ತಿ ಪುಣೆಯಲ್ಲಿ 'ಸಿಸ್ಟಂ ರಿಸರ್ಚ್ ಇನ್ಸಿಟ್ಯೂಟ್' ಎಂಬಲ್ಲಿ ಇದೇ ಉದ್ದೇಶದಿಂದ ಕೆಲಸ ಮಾಡಿದರು. ಅಲ್ಲಿಂದ ತಮ್ಮದೇ ಆದ 'ಸಾಫ್ಟ್ ಟ್ರಾನಿಕ್ಸ್' ಎಂಬ ಕಂಪನಿಯನ್ನು ತೆಗೆದರು. ಅನಂತರ ಮುಂಬೈನ 'ಪಟ್ನಿ ಕಂಪ್ಯೂಟರ್ಸ್' ಸೇರಿದರು. ಈ ಏಳು ವರ್ಷದ ವಿಧ ವಿಧ ಪ್ರಯೋಗಗಳಲ್ಲಿ ಅವರಿಗೆ ಎಲ್ಲಿಯೂ ಸಮಾಧಾನ ಸಿಗಲಿಲ್ಲ. ಹೃದಯಾಂತರಾಳದಿಂದ ಹುಟ್ಟಿ ಬಂದ "ಸಂಪತ್ತನ್ನು ಸೃಷ್ಟಿಸಿ ಬಡತನವನ್ನು ಕಳೆಯಬೇಕು" ಎಂಬ ವಿಚಾರಧಾರೆ ಅವರ ಮನಸ್ಸಿನಿಂದ ಅಳಿಯಲೇ ಇಲ್ಲ.

ಕೊನೆಗೆ ತನ್ನೊಡನಿದ್ದ ಆರು ಸಹೋದ್ಯೋಗಿಗಳೊಂದಿಗೆ ಮತ್ತು ನನ್ನ ಉಳಿತಾಯದ ಹತ್ತು ಸಾವಿರ ರೂಪಾಯಿಗಳಿಂದ ೧೯೮೧ ಜುಲೈ ೨ ರಂದು ಪುಣೆಯಲ್ಲಿ ಸಣ್ಣ ಮನೆಯಲ್ಲಿ ’ಇನ್ಫೋಸಿಸ್’ ಎನ್ನುವ ಚಿಕ್ಕ ಕಂಪನಿಯನ್ನು ಆರಂಭಿಸಿದರು.

’ಇನ್ಫೋಸಿಸ್’ ಮುಂದಿನ ಯಶೋಗಾಥೆ ನಿಮ್ಮೆಲ್ಲರಿಗೂ ತಿಳಿದಿದ್ದೇ ಇದೆ.

# 2.4 (ಓದುಪತ್ರ)

# ಬೆಂಗಳೂರು ಬಹುರೂಪಿ ನಗರವಾಗಿ ಬೆಳೆದುನಿಂತ ಕಥೆ.

**ಸಿ. ಆರ್. ಸಿಂಹ**

ಒಂದೊಂದು ಪತ್ರ ಬರೆಯುವುದು ಕೂಡ ತ್ರಿಲ್. ಪ್ರಿಯರಾದ ಒಬ್ಬರಿಗೆ ಬರೆಯುವುದೇ ಸಂತೋಷದ ಸಮಾಚಾರವಾದರೆ, ಇನ್ನೂ ಲಕ್ಷಾಂತರ ಪ್ರೀತಿಪಾತ್ರರಾದ ನಿಮಗೆ ಬರೆಯುವುದೆಂದರೆ ಹೇಗಿರಬೇಡ ಹೇಳಿ. ಆದರೆ ಅದಕ್ಕಿಂತ ಖುಷಿಯಾದ ಮಾತು ಒಂದಿದೆ. ನಿಮ್ಮ ಸಿಂಹನ ಪತ್ರ ಓದಿದ ನೀವು ಜನಾಭಿಪ್ರಾಯ ಎಂಬ ಕಾಲಮ್ಮಿನಲ್ಲಿ ಮೆಚ್ಚಿಗೆ ಸೂಸಿ ನಾಲ್ಕು ಮಾತು ಬರೆಯುತ್ತೀರಲ್ಲ. ಆಗ ನನ್ನ ಸಂತೋಷ ನೂರ್ಮಡಿಯಾಗುತ್ತದೆ. ಅದಕ್ಕಾಗಿ ಇದೋ ನಿಮಗೆ ಥ್ಯಾಂಕ್ಸ್.

ಒಂದು ವೈಯೆನ್ಕೆ ಜೋಕ್ ಜ್ಞಾಪಕಕ್ಕೆ ಬರುತ್ತಿದೆ ಪ್ರತಿಭಾಸಂಪನ್ನ ಪತ್ರಕರ್ತರು ಆಪ್ತರು ಆಗಿದ್ದ ವೈಯೆನ್ಕೆ ಅವರನ್ನು ರೇಡಿಯೋದಲ್ಲಿ ಇಂಟರ್ವ್ಯೂ ಮಾಡಿದೆ. ಕೊನೆಯಲ್ಲಿ ಸಂದರ್ಶನಕ್ಕೆ Thanks ಹೇಳಿದೆ. ಅವರು ಕೇಳಿದರು, ಸಿಂಹಾ Thanks ಅನ್ನೋಕೆ ಕರೆಕ್ಟಾಗಿ ಕನ್ನಡದಲ್ಲಿ ಏನು? ನಾನು ಯೋಚಿಸಿ ನೀವೇ ಹೇಳಿ ಅಂದೆ ಥ್ಯಾಂಕ್ಸ್ ಅಂದರು ವೈಯೆನ್ಕೆ.

ಪ್ರಿಯ ಓದುಗರೇ,

ನಿಮಗೆ ಥ್ಯಾಂಕ್ಸ್ ಹೇಳಿ ಪತ್ರ ಮುಂದುವರೆಸುತ್ತೇನೆ. ವೈಯೆನ್ಕೆ ನೆನಪಾದದ್ದರಿಂದ ಇದು ಅವರಿಗೆ ಪ್ರಿಯವಾದ ಬೆಂಗಳೂರಿನ ಬಗ್ಗೆ ಪತ್ರ.

ಒಂದಾನೊಂದು ಕಾಲದಲ್ಲಿ ಅಂದರೆ ಐವತ್ತು ವರ್ಷದ ಹಿಂದೆ ಬೆಂಗಳೂರು ಹೇಗಿತ್ತು? ಈಗ ಇರುವ ಹಾಗೆ ಇರಲಿಲ್ಲ. ಇಷ್ಟು ಜನಜಂಗುಳಿ ಇಲ್ಲ. ಆಟೋರಿಕ್ಷಾ ಇಲ್ಲ. ಮೋಟರುಗಳೂ ಮರ್ಯಾದೆಯಿಂದ ಅಷ್ಟಷ್ಟೇ ಇದ್ದವು. ಹಾಗಿದ್ದರಿಂದಲೇ ನಮ್ಮ ಹಾದಿಬೀದಿಗಳೆಲ್ಲ ಕ್ಷೇಮವಾಗಿದ್ದವು. ಆಗೊಮ್ಮೆ–ಈಗೊಮ್ಮೆ ಒಂದು ಜಟಕಾ ಬಂಡಿ. ಕುದುರೆ ಕಾಲಿನ ಟಕುಟುಕು ಶಬ್ದ. ಸಂಗೀತ ಕಚೇರಿಯಲ್ಲಿ ತಾಳಹಾಕಿದಂತೆ. ಯ್ಯಾಲಿ, ರಾಬಿನ್

ಹುಡ್ ಸೈಕಲ್ಲುಗಳು. ಟ್ರಿನ್ ಟ್ರಿನ್ ಶಬ್ದ. ದೇವರಮನೆಯಲ್ಲಿನ ಚಿಕ್ಕ ಗಂಟೆಗಳು ಬಾರಿಸಿದಂತೆ. ಬೀದಿಯಲ್ಲೇ ಆಡುವ ಪುಟಾಣಿಗಳ ಕೇಕೆ. ನೂರಾರು ಹೂಗಳೇ ಅರಳಿ ನಕ್ಕಂತೆ. ಶಬ್ದಮಾಲಿನ್ಯವಿಲ್ಲ. ವಾಯುಮಾಲಿನ್ಯವಿಲ್ಲ.

ಬೆಂಗಳೂರಿನ ಜನ ಬಿಡುಬೀಸಾಗಿ, ನಿರಾಳವಾಗಿ ಓಡಾಡಿಕೊಂಡಿದ್ದರು. ಯಾವುದಕ್ಕೂ ಧಾವಂತವಿಲ್ಲ. ಜೆ.ಸಿ. ರಸ್ತೆಯಲ್ಲಿ ಜನ ಕಳ್ಳೇಕಾಯಿ ತಿನ್ನುತ್ತಾ ವಾಕಿಂಗ್ ಹೋಗುತ್ತಿದ್ದರು ಎಂದರೆ ಈಗಿನವರು ಮೂರು ಜನ ಕೂಡ ಆ ಮಾತನ್ನು ನಂಬುವುದಿಲ್ಲ. ಮಹಾತ್ಮ ಗಾಂಧೀಜಿ (ಎಂ.ಜಿ.) ರಸ್ತೆಗೆ ಆಗಿನ ಹೆಸರು ಸೌತ್ ಪೆರೇಡ್, ಆ ಕಂಟೋನ್ಮೆಂಟಿಗೆ ಹೋಗುವುದು ಎಂದರೆ ಈ ಕಡೆಯ ಸಿಟಿ ಜನಕ್ಕೆ ಫಾರಿನ್ಗೆ ಹೋದಷ್ಟು ಆನಂದ.

ಬಸವನಗುಡಿಯಲ್ಲಿ ಬ್ಯೂಗಲ್ ರಾಕ್ ಅಂತ ಇದೆ. ಹೆಬ್ಬಂಡೆ ಮೇಲಿನ ಮಂಟಪದಲ್ಲಿ ರಾತ್ರಿ ಕುಳಿತಿದ್ದಾಗ ಮೂರು ಮೈಲುಗಳಾಚೆಯ ನ್ಯಾಷನಲ್ ಹೈಸ್ಕೂಲ್ ಗೋಪುರದ ಗಡಿಯಾರದ ಗಂಟೆ ಹೊಡೆವ ಸದ್ದು ಕೇಳಿಸುತ್ತಿತ್ತು. ಅಂಥಾ ನಿಶ್ಯಬ್ದ. ಮನೆಬಾಗಿಲಿಗೆ ಬಂದು ಹಾಲು ಕರೆಯುತ್ತಿದ್ದರು. ಸೇರು ಪಾವಿನ ಲೆಕ್ಕ. ಹಾಲಿನ ವರ್ತನೆ ಹಾಗೇ ಸೊಪ್ಪು ಮಾರುವವರೂ ಇದ್ದರು. ತಿಂಗಳ ಕೊನೆಗೆ ಲೆಕ್ಕ. ಚುಕ್ತಾ. ರೂಪಾಯಿಗೆ ಹದಿನಾರಾಣೆ. ಆಣೆಗೆ ಹನ್ನೆರಡು ಕಾಸು. ಈ ರೂಢಿ ಗಣಿತದಲ್ಲಿ ಆ ಹೆಂಗಸರೇ ಲೆಕ್ಕ ಇಷ್ಟಾಯಿತು ಅನ್ನುತ್ತಿದ್ದರು. ಶಾಲೆಯ ಮುಖವೂ ಕಾಣದವರು. ಇವರನ್ನು ಕುರಿತೋದದೆಯುಂ ಗಣಿತ ಪ್ರಯೋಗ ಪರಿಣತಮತಿಗಳ್ ಅಂತ ಕರೆಯಬಹುದು.

ಹಬ್ಬದ ದಿನಗಳು ಅಂತಂದ್ರೆ ಬೆಂಗಳೂರಿನ ಬೀದಿಗಳಲ್ಲಿ ಪ್ರತಿ ಮನೆಯ ಮುಂದೆ ರಂಗವಲ್ಲಿ. ಬಾಗಿಲಿಗೆ ಮಾವಿನೆಲೆಯ ತೋರಣ. ಸಂಭ್ರಮದಿಂದ ನಡೆದಾಡುವ ಹೊಸ ಬಟ್ಟೆಯುಟ್ಟ ಜನ. ಇಡೀ ಊರಿನಲ್ಲೇ ಒಂದು ಸಂಭ್ರಮ. ಮಳೆಗಾಲದಲ್ಲಿ ತುಂಬಿ ಹರಿಯುವ ಮೋರಿ ನೀರಿನಲ್ಲೇ ಕಾಗದದ ದೋಣಿ ಮಾಡಿ ತೇಲಿಬಿಡುವ ಮಕ್ಕಳು. ಗಾಳಿ ಕಾಲದಲ್ಲಿ ಬೀದಿ ಮೈದಾನಗಳಲ್ಲೆಲ್ಲಾ ಹಾರಾಡುವ ಬಣ್ಣಬಣ್ಣದ ಗಾಳಿಪಟಗಳು, ಚಳಿಗಾಲ ಬಂತೆಂದರೆ ಸಾಕು ಉಲ್ಲನ್ ಸ್ವೆಟರ್, ಮಫ್ಲರ್. ಬೆಂಗಳೂರಿನ ಚಳಿಯ ಮ್ಯಾಜಿಕ್ ಬಹಳ ವಿಶೇಷ. ಸೊಗಡು ಅವರೆಕಾಯಿಗೆ ಬಾಯಿಬಾಯಿ ಬಿಡುವ ಜನ ನಾವು.

ಪ್ರಿಯ ಓದುಗರೆ,

ಮೇಲಿನ ವಿವರಣೆ ಎಲ್ಲ ಕೇಳಿದರೆ ಯಾವುದೋ ಒಂದು ಸಣ್ಣ ಪಟ್ಟಣದ ಚಿತ್ರ ಕಣ್ಣೆದುರಿಗೆ ಬರುತ್ತದೆ ಅಲ್ಲವೇ. ಬೆಂಗಳೂರು ದೊಡ್ಡ ಸಿಟಿ ಎನಿಸಿಕೊಂಡರೂ ಲಕ್ಷಣವೆಲ್ಲ ಸಣ್ಣ ಪಟ್ಟಣದ್ದೇ. ಈ ಎಲ್ಲ ಕಾರಣದ ಜೊತೆಗೆ ಮತ್ತೊಂದು ವಿಶ್ವವಿಖ್ಯಾತ ಗುಣ ಬೆಂಗಳೂರಿಗೆ ಇತ್ತು. ವರ್ಷಪೂರ್ತಿ ಇರುವ ಸಮಶೀತೋಷ್ಣ ವಾತಾವರಣ. ಐದು ಡಿಗ್ರಿ ಹೀಗೆ ಐದು ಡಿಗ್ರಿ ಹಾಗೆ. ಆಗಿನ ಬೇಸಿಗೆಕಾಲ. ಈಗಿನವರು ಖಂಡಿತ ನಂಬಲಾರರು. ಮಿಡಲ್ ಕ್ಲಾಸಿನ ಯಾವ ಮನೆಯಲ್ಲೂ ಫ್ರಿಜ್ಜೂ ಇಲ್ಲ, ಫ್ಯಾನೂ ಇಲ್ಲ. ಇಲ್ಲ ಅಂದರೆ ಕೊಳ್ಳೋದಕ್ಕೆ ಗತಿ ಇಲ್ಲ ಅಂತಲ್ಲ, ಬೆಂಗಳೂರಿನ ಬೇಸಿಗೆಯಲ್ಲೂ ಅದು ಬೇಕಿರಲಿಲ್ಲ.

ನಾನು ಇಡೀ ದೇಶ ಸುತ್ತಿದ್ದೀನಿ. ವಿದೇಶಗಳಲ್ಲೂ ಸಂಚರಿಸಿ ಬಂದಿದ್ದೀನಿ. ನಮ್ಮ ಬೆಂಗಳೂರಿನಂಥ ಪರಮಾಯಿಷಿ ವಾತಾವರಣ ಎಲ್ಲೂ ಕಂಡಿಲ್ಲ. ಒಂದು ಊರು ಚಳಿಗಾಲಕ್ಕೆ ಚೆಂದ. ಮತ್ತೊಂದು ಊರು ಬೇಸಿಗೆಯಲ್ಲಿ ಮಾತ್ರ ಬದುಕಲು ಚೆಂದ. ಆದರೆ ನಮ್ಮ ಬೆಂಗಳೂರಿನ ಹಾಗೆ ಎಲ್ಲ ಕಾಲಕ್ಕೂ ಚಂದದ ಊರೆಂದರೆ ಬೆಂಗಳೂರು ಮಾತ್ರ. ಅದಕ್ಕೆ ಸಾಟಿಯಿಲ್ಲ.

ಆದರೆ ಏನಾಗಿಹೋಯಿತು ನೋಡಿ. ಬೆಂಗಳೂರಿನ ಈ ವಿಶಿಷ್ಟ ಗುಣವೇ, ದೇಶದ ಅನೇಕ ಭಾಗಗಳಿಂದ ಲಕ್ಷೋಪಲಕ್ಷ ಜನ ಇಲ್ಲಿಗೆ ವಲಸೆ ಬರಲು ಕಾರಣವಾಯಿತು. ಊರು ಬೆಳೆಯುತ್ತಾ ಹೋಯಿತು. ಆರು ಲಕ್ಷ ಇದ್ದದ್ದು ಹದಿನಾರಾಯಿತು. ಮೂವತ್ತೆರಡಾಯಿತು. ಈಗ ಅದರ ಡಬ್ಬಲ್ ಜನಸಂಖ್ಯೆ. ಊರಿನ ಒಳಗೆ ಮತ್ತು ಸುತ್ತಮುತ್ತ ಸುಮಾರು ಇನ್ನೂರ ಐವತ್ತು ಕೆರೆ ಕೊಳಗಳು ಇದ್ದವು. ಈಗ ಉಳಿದಿರೋವು ಐವತ್ತೂ ಸಹ ಇಲ್ಲ. ಎಲ್ಲಾ ನಿವೇಶನಗಳಾಗಿಬಿಟ್ಟವು. ಮನೆ–ಮನೆ, ಮಹಾಮನೆ, ಜನ. ಇಷ್ಟು ಜನ ಬಂದಮೇಲೆ ಉದ್ಯೋಗ ಬೇಡವೇ. ಸಣ್ಣವು ದೊಡ್ಡವು ಕಾರ್ಖಾನೆಗಳು, ಅಂಗಡಿ ವಾಣಿಜ್ಯ ಕೇಂದ್ರಗಳು. ಒಂದು ಬೃಹತ್ ಜಾಲವೇ ನಿರ್ಮಾಣ ಆಗಿಬಿಟ್ಟಿತು. ಇನ್ನು ಈ ಮಹಾಪಟ್ಟಣದ ಪರಿಚಾರಿಕೆಗೆ, ಸೇವೆಗೆ ಆಳುಕಾಳು ಅಂತ ನಮ್ಮದೇ ಹಳ್ಳಿಗಳಿಂದ, ಹೊರರಾಜ್ಯಗಳಿಂದ ಲಕ್ಷಾಂತರ ಬಡಜನರೂ ಬಂದರು. ಮನೆಕೊಳ್ಳಲು ಕೈಲಾಗದ ಈ ಜನ ನಿರ್ವಾಹವಿಲ್ಲದೆ ಕೊಳೆಗೇರಿ ಸೇರಿದರು. ಸ್ಲಂಗಳು ಹತ್ತಿದ್ದದ್ದು, ನೂರಾಯಿತು. ಈಗ ಸಾವಿರಗಟ್ಟಲೆ ಇವೆ. ದೇಶದಲ್ಲೇ ಏಕೆ ಇಡೀ ಏಷ್ಯಾ ಖಂಡದಲ್ಲೇ ಈ ಪಾಟಿ ವೇಗದಲ್ಲಿ ಬೆಳೆದ ಮತ್ತೊಂದು ಮಹಾನಗರ ಇಲ್ಲ.

ಇಂಥ ಬೆಂಗಳೂರಿನ ಕೀರ್ತಿ ವಿದೇಶಗಳಲ್ಲೂ ಹಾರಾಡಿತು. ಜಗತ್ತಿನ ನಾನಾ ಕಡೆಯಿಂದ ಬಂದಿಳಿದರು. ಪ್ರತಿಷ್ಠಾಪನೆ ಆದರು. ಇನ್ನೂ ಕೂಡ ಬೆಂಗಳೂರು ಕೈಬೀಸಿ ಕರೆಯುತ್ತಲೇ ಇದೆ. ಈಗಂತೂ ಬೆಂಗಳೂರು ಇಡೀ ಜಗತ್ತಿನ ಭೂಪಟಗಳಲ್ಲಿ ಮಿನುಗುತ್ತಿರುವ ತಾರಾನಗರಿ. ಇದನ್ನು ಬೆಂಗಳೂರಿನ ಜಾಗತೀಕರಣ ಅಂತ ಕರೆಯೋಣ.

ಪ್ರಿಯ ಓದುಗರೆ,

ಬೆಂಗಳೂರು ಬೆಳೆದದ್ದು ಕಂಡು ಬೇರೆಯವರ ಮುಂದೆ ಬಡಾಯಿಕೊಚ್ಚಿಕೊಳ್ಳೋಣ. ಅದಕ್ಕೆ ಬೇಕು ಬೇಕಾದಷ್ಟು ಕಾರಣಗಳೂ ಇವೆ. ಆದರೆ ನೂರು ಪರ್ಸೆಂಟ್ ಬೆಂಗಳೂರಿಗರಾದವರಿಗೆ ಅಂತರಂಗದಲ್ಲಿ ಕೊರಗೂ ಇದೆ. ಸಣ್ಣವಯಸ್ಸಿನಲ್ಲಿ ನಾವು ಕಂಡ ಬೆಂಗಳೂರು ಎಲ್ಲಿ ಕಾಣೆಯಾಯಿತು ಅಂತ. ಅಭಿವೃದ್ಧಿ ಎಂಬ ಬಿರುಗಾಳಿಯಲ್ಲಿ ನಮ್ಮ ಹಲವಾರು ವಿಶಿಷ್ಟ ಗುಣಲಕ್ಷಣಗಳು ಹಾರಿಹೋದವು. ಹಾದಿ–ಬೀದಿಗಳಲ್ಲೆಲ್ಲಾ ಗೋಲಿ, ಬುಗುರಿ, ಬುಗುರಿ ಚಿನ್ನಿದಾಂಡು, ಕುಂಟೋಬಿಲ್ಲೆ ಆಡಿಕೊಂಡಿರುತ್ತಿದ್ದ ಮಕ್ಕಳೆಲ್ಲಿ?

ಪಾಪ ಮಕ್ಕಳಿರಲಿ, ದೊಡ್ಡವರೂ ಸಹ ಬೆಂಗಳೂರಿನ ಬೀದಿಗೆ ಇಳಿಯಬೇಕೆಂದರೆ ಸ್ಪೆಷಲ್ ವಿಮೆ ಮಾಡಿಸಬೇಕು. ಒಂದು ಲಕ್ಷ ಆಟೋ, ಮೂರು ಲಕ್ಷ ಕಾರು, ಬಸ್ಸು, ಹತ್ತು ಲಕ್ಷ ಮೀರಿದ ಬೈಕು ಸ್ಕೂಟರು. ವಿಧಿಯೇ ಇಲ್ಲ. ಜನಜಂಗುಳಿ, ವಾಹನ ಜಂಗುಳಿ, ವಾಯುಮಾಲಿನ್ಯ, ಶಬ್ದಮಾಲಿನ್ಯ, ಹೇಗೋ ಹೊಂದಿಕೊಂಡು ಬದುಕಲೇಬೇಕು. ಸಾಧ್ಯವಾದಷ್ಟೂ ಸಮಸ್ಯೆಗೆ ಉತ್ತರ ಕಂಡುಕೊಳ್ಳಲೇಬೇಕು. ತೀರಾ ಚಳಿಯ ಕಾಲ ಬಿಟ್ಟರೆ ವರ್ಷ ಪೂರಾ ಫ್ಯಾನು ತಿರುಗಲೇಬೇಕು. ಮಧ್ಯಮ ಮನೆಗಳಲ್ಲೂ ಫ್ರಿಜ್ಜು ಬೇಕೇಬೇಕು. ದಾಹ ತಣಿಸಲು ಕಾವೇರಿ ನದಿ ಕೊಳವೆಗಳಲ್ಲಿ ಹರಿಯಲೇಬೇಕು. ತುರುಬು ನೆನೆಸಿಕೊಂಡು ಗೋಳಾಡಿದರೇನು ಬಂತು.

ಇದು ಜಾಗತೀಕರಣ. ಸದ್ಯಕ್ಕಂತೂ ಇದು ವಾಸ್ತವತೆ. ನಾವು ಈ ಪ್ರವಾಹದಲ್ಲೇ ಈಸಬೇಕು, ಇದ್ದು ಜೈಸಬೇಕು. ಸುಮ್ಮನೆ ಗೋಳಾಡಿದರೆ ನಮ್ಮೊಂದಿಗೆ ಗೋಳು ಮಾತ್ರ ಇರುತ್ತದೆ. ಫಲ ಮಾತ್ರ ಏನೂ ಇಲ್ಲ. ಅದರ ಬದಲು ಜಾಗತೀಕರಣವನ್ನು ಧೈರ್ಯದಿಂದ ಎದುರಿಸುವ ಸಂಕಲ್ಪ ಮಾಡಬೇಕು. ಬಲಿಷ್ಠ ಎದುರಾಳಿ ಬರುತ್ತಾನೆ ಅಂತ ಪಂದ್ಯ ಬಿಟ್ಟು ಓಡುವುದೋ, ಪಂದ್ಯವೇ ಬೇಡವೆಂದು ಶಂಖ ಹೊಡೆಯುವುದೋ ಬೇಕಾಗಿಲ್ಲ.

. ಅದಕ್ಕಿಂತ ತುರ್ತಾಗಿ ಪಂದ್ಯಾವಳಿಯ ಅನೇಕ ಪಟ್ಟುಗಳನ್ನು, ಒಳ ಮಾರ್ಗೋಪಾಯಗಳನ್ನು ಕರಗತ ಮಾಡಿಕೊಳ್ಳಬೇಕು. ಎದುರಾಳಿ ಬಲಿಷ್ಠ ನಿಜ. ಹಾಗಂತ ನಾವು ಬೆದರಿ ಅದುರಿಬಿಟ್ಟರೆ ಏನು ಬಂತು. ನಮ್ಮ ಎಲ್ಲಾ ಬುದ್ಧಿಶಕ್ತಿ ಗಳನ್ನು ಪಣಕ್ಕೆ ಹಚ್ಚಿ ಒಂದು ಕೈ ನೋಡಿಯೇಬಿಡೋಣ ಅಂತ ಮನಸ್ಸು ಗಟ್ಟಿ ಮಾಡಬೇಕು. ಆದರೆ ಆತ್ಮಸ್ಥೈರ್ಯ(Self confidence) ನಮ್ಮಲ್ಲಿ ನಾವೇ ತುಂಬಿಸಿಕೊಳ್ಳಬೇಕು. ಅದು ಬಿಟ್ಟು ಬೇರೆ ಮಾರ್ಗವಿಲ್ಲ. ಯಾವುದೋ ದೇಶದ ಒಂದು ಮಾಲು, ಸಾವಿರಾರು ಮೈಲು ದಾಟಿಬಂದು, ನಮ್ಮ ಮಾರುಕಟ್ಟೆಯಲ್ಲಿ ನೂರು ರೂಪಾಯಿಗೆ ಬಿಕರಿ ಎಂದಾದರೆ ನಾವು ಇಲ್ಲಿಯೇ ತಯಾರಿಸಿದ ಅದೇ ಮಾಲು ಅದಕ್ಕಿಂತ ಕಮ್ಮಿ ಬೆಲೆಗೆ ಕೊಡಲು ನಮಗೇನು ಗೋಳು. ಗೋಳು ಇದೇ ಅಂತ ಕಾರಣಗಳ ಪಟ್ಟಿ ಮಾಡುತ್ತಾ ಕೂಡುವುದರ ಬದಲು, ಗೋಳಿನ ಕಾರಣಗಳನ್ನು ನಿವಾರಿಸುವತ್ತ ಹೆಜ್ಜೆ ಇಡಬೇಕು. ಅದು ನೋಡಿ ಪಾಸಿಟಿವ್ ಯೋಚನೆ.

ಪ್ರಿಯ ಓದುಗರೇ, ,

ಈಗ ನಿಮ್ಮನ್ನು ಬೆಂಗಳೂರಿನ ಇತ್ತೀಚಿನ ಚಿತ್ರವನ್ನು, ಪಾಸಿಟಿವ್ ಯೋಜನೆಯನ್ನು ದಯವಿಟ್ಟು ಕಾಣಿರಿ ಅಂತ ಕೇಳಿಕೊಳ್ಳುತ್ತೇನೆ. ಜಾಗತೀಕರಣವನ್ನು ತಮ್ಮ ರೀತಿಯಲ್ಲೇ ಎದುರಿಸಿದ ಪರಿಯನ್ನು, ಜಾಣತನವನ್ನು ನಾವು ನೀವೆಲ್ಲ ಗಮನಿಸಬೇಕು. ಪಕ್ಕಾ ಉದಾಹರಣೆಯೆಂದರೆ ಬೆಂಗಳೂರಿನ ತಿಂಡಿ ತಿನಿಸಿನ ಲೋಕ. ಗಾಂಧಿಬಜಾರಿನ ವಿದ್ಯಾರ್ಥಿಭವನದ ಮಸಾಲೆದೋಸೆ, ಶಂಕರಪುರದ ಇಡ್ಲೀ, ಮಾವಳ್ಳಿಯ ಎಂಟಿಆರ್, ಗುಂಡಪ್ಪನ ಹೋಟೇಲುಗಳು, ಗಣೇಶ್ ಭವನಗಳು, ಹಾದಿಬದಿಯ ಬೋಂಡಾ ಗಾಡಿಗಳು.

ಇಷ್ಟರಲ್ಲೇ ಬೀಗುತ್ತಿತ್ತು ಬೆಂಗಳೂರು. ಈಗ ನೋಡಿರಿ ಜಾಗತೀಕರಣದಿಂದ ಚೈನೀಸ್ ಗೋಬಿಮಂಚೂರಿ, ನೂಡಲ್ಸು, ಫ್ರೈಡ್ ರೈಸು, ಇಟಲಿ ದೇಶದ ರೊಟ್ಟಿ, ವಿಶೇಷ ಪೀಟ್ಜಾ(Pizza) ಅಮೆರಿಕಾ ದೇಶದ ಬರ್ಗರುಗಳು ಯುರೋಪಿನ ಸೋಪುಗಳು, ಇವೆಲ್ಲಾ ಒಂದು ಕಾಲಕ್ಕೆ ಸಾಲಂಕೃತ ಹೊಟೇಲುಗಳಲ್ಲಿ, ಪಿಂಗಾಣಿ ತಟ್ಟೆ ಬಟ್ಟಲುಗಳಲ್ಲಿ ಮೇಲುವರ್ಗದ ಜನಕ್ಕೆ ಮಾತ್ರ ನಿಲುಕುವುದಾಗಿತ್ತು. ಈಗ ನಮ್ಮ ಬೆಂಗಳೂರಿನ ಬೀದಿಬೀದಿಗಳಲ್ಲಿ, ಕೈಗಾಡಿಗಳಲ್ಲಿ, ಸಣ್ಣಪುಟ್ಟ ಹೊಟೇಲುಗಳಲ್ಲಿಯೂ ಸಿಗುವಂತಾಗಿದೆ. ದೋಸೆ–ಇಡ್ಲಿಗಳ ದುಡ್ಡಿನಷ್ಟೇ ಇವಕ್ಕೂ ಸಹ ಲಕ್ಷಾಂತರ ಸಾಮಾನ್ಯ ಜನ ಅನ್ಯಜಗತ್ತಿನ ಈ ವಿಶೇಷಗಳನ್ನೂ ಧಾರಾಳವಾಗಿ ಕೊಂಡು ತಿಂದು ಆನಂದಿಸುತ್ತಿದ್ದಾರೆ. ಜಾಗತೀಕರಣವನ್ನು ನುಂಗಿ ಅರಗಿಸುತ್ತಿದ್ದಾರೆ.

ಒಂದು ಉದಾಹರಣೆ ಕೊಡಲೇ. ಹೊಸದಾಗಿ ಪಿಟ್ಜಾ ಬಂದಾಗ ಇನ್ನೂರು ಮುನ್ನೂರು ತೆರಬೇಕಿತ್ತು. ಯಥಾಪ್ರಕಾರ ನಮ್ಮ ಗೋಳುಕರೆ ಬಂಧುಗಳು ಲಬೋಲಬೋ ಎಂದರು. ನಮ್ಮ ದೇಶದ ಅಮುಲ್ ಸಂಸ್ಥೆ ಹತ್ತೊಂಬತ್ತು ರೂಪಾಯಿಗೆ ಪೀಟ್ಜಾ ತಂದರು. ಜನ ಬಾಯಿಬಾಯಿ ಬಿಟ್ಟುಕೊಂಡು ತಿಂದರು. ಮುನ್ನೂರು ರೂಪಾಯಿಗೆ ಮಾರುತ್ತಿದ್ದ ಮಂದಿ ಬಾಲ ಮುದುರಿಕೊಂಡರು. ಹಿಂದೆ ಐಸ್ಕ್ಯಾಂಡಿ ಮಾತ್ರ ಕೊಳ್ಳಲು ಶಕ್ತರಾಗಿ ಐಸ್ಕ್ರೀಮ್ ಎಂಬುದನ್ನು ಕನಸಿನಲ್ಲಿ ಮಾತ್ರ ಕಾಣುತ್ತಿದ್ದ ಶಾಲಾ ಮಕ್ಕಳಿಗೂ ನಮ್ಮವರೇ ಎಂಟಿಆರ್ ಬರೇ ಐದು ರೂಪಾಯಿಗೆ ಸಾಫ್ ಟೀ(Softee) ಕೊಡುತ್ತಿದ್ದಾರೆ. ಐದು ರೂಪಾಯಿಗೇ ಒಂದು ಬಟ್ಟಲು ಸೂಪು ಸಿಗುತ್ತದೆ. ಹೇಗೆ ಸಾಧ್ಯವಾಯಿತು ಇದೆಲ್ಲ. ಮನಸ್ಸಿದ್ದರೆ ಮಾರ್ಗ ಅಂತ ಇದಕ್ಕೆ ಅನ್ನುವುದು. ಇಷ್ಟಾಗಿ ಇವತ್ತಿಗೂ ವಿದ್ಯಾರ್ಥಿ ಭವನ ನಡೆದೇ ಇದೆ. ಎಂಟಿಆರ್ ಒಳಗೆ ಕ್ಯೂನಲ್ಲಿ ಜನ ಕಾಯುತ್ತಲೇ ಇದ್ದಾರೆ. ಶಂಕರಪುರದ ಇಡ್ಲಿಗಾಗಿ ಕಾರು ಸ್ಕೂಟರು ಸಾಲುಸಾಲಾಗಿ ನಿಂತೇ ಇವೆ. ವಿಶ್ವೇಶ್ವರಪುರದ ಹಾದಿಯಲ್ಲಿ ದೋಸೆ ಇತ್ಯಾದಿಗಳ ಭರಾಟೆ ನಡೆದೇ ಇದೆ. ಇನ್ನು ದರ್ಶಿನಿಗಳ ಮೋಡಿಯಂತೂ ಕೇಳಲೇಬೇಡಿ. ಅಂದರೆ ನಮ್ಮದು ಅನ್ನುವುದೇನೂ ಕಳೆಯಲಿಲ್ಲ. ನಮ್ಮದರ ಜೊತೆಜೊತೆಗೇ ವಿದೇಶೀ ಅನ್ನುವುದೂ ನಮ್ಮ ತಟ್ಟೆ ಬಟ್ಟಲಿಗೆ ಇಳಿಯಿತು. ತಿಂಡಿ ತಿನಿಸಿನ ಜಗತ್ತಿನ ಈ ಜೀನಿಯಸ್ ಜಾಗತೀಕರಣಕ್ಕೆ ಸಬಲ ಉತ್ತರ.

ಆ ಕ್ಷೇತ್ರದಲ್ಲಿ ಸಾಧ್ಯವಾದದ್ದು ಉಳಿದ ಕ್ಷೇತ್ರದಲ್ಲಿ ಯಾಕೆ ಸಾಧ್ಯವಿಲ್ಲ?

# 3 ಕರುಣೆ

1 ಮಳೆರಾಜನ ಹಾಡು - ಜನಪದ ಗೀತೆ

2 ಮನುವಿನ ರಾಣಿ - ಕೊಡಗಿನ ಗೌರಮ್ಮ

3 ಒಲುಮೆ ಹೊನಲ ತಡೆಗಳು - ಪು.ತಿ.ನ

4 (ಓದುಪಥ್ಯ)ಹಾಗಾದರೆ ’ಮಾರಿಬಿಡಿ - ಎಂ.ಆರ್. ಕಮಲ

# 3 ಕರುಣೆ

**ಆಶಯ :**

ಭೂಮಿಯ ಮೇಲಿನ ಅತಿವೃಷ್ಟಿ, ಅನಾವೃಷ್ಟಿ ಎರಡೂ ಭೀಕರ. ಮಳೆ ಬಿದ್ದರೆ ಭೂಮಿ ಹಸನು; ಗಿಡ, ಮರ, ಬಳ್ಳಿ, ಹಸಿರು, ಹಸಿರೇ. ಮತ್ತೆ ಮಳೆಗೆ ಆಸರೆ. ಇದು ಪ್ರಕೃತಿ ಧರ್ಮ, ಇದು ಆವರ್ತ. ಆದರೆ ಅತಿಯಾದ ಮಳೆಯಿಂದ ಭೂಮಿ ಕೊಚ್ಚಿಕೊರೆದು, ತೆನೆಗಳುದುರಿ, ಗಿಡಮರಗಳು ಬೇರು ಸಹಿತ ಉರುಳಿ, ಹಾನಿಯಾದರೆ ಅದೊಂದು ಪ್ರಳಯ ಭಯಂಕರ. ಮಳೆ ಇಲ್ಲದೆ ಕೆರೆ, ಹೊಳೆಗಳು ಬತ್ತಿ, ನೀರಿನ ಪಸೆ ಹಿಂಗಿ, ಬೋಳಾದ ಮರಗಳು ಒಣಗಿ, ಬಿರುಕು ಬಿಟ್ಟ ಹೊಲಗದ್ದೆಗಳು, ತಿನ್ನಲು ಅನ್ನ ಆಹಾರವಿಲ್ಲದ ಜೀವ ಜಂತು, ಮಾನವರ ಹಸಿವಿನ ಹಾಹಾಕಾರ ಇದೊಂದು ಹೃದಯವಿದ್ರಾವಕ ಸಂದರ್ಭ.

ಈ ಎರಡರೊಂದಿಗೂ ಹೋರಾಡಿ ಬದುಕುಳಿದಿರುವ ಮಾನವ ಮತ್ತು ಅನಾವೃಷ್ಟಿಯ ಹೊಡೆತಕ್ಕೆ ಸಿಲುಕಿ, ನಲುಗಿದ ಅನಾಮಿಕ ಮನುಷ್ಯನ ಮನದಾಳದ ಸ್ವಾನುಭವವೇ 'ಮಳೆಹಾಡು'. ತನ್ನ ಅನುಭವದ ಸೃಜನಾಭಿವ್ಯಕ್ತಿಯಿಂದ ಕಾವ್ಯರೂಪ ಕೊಟ್ಟ ಜನಪದರು ಶಿಷ್ಟ ಕವಿಗಳಿಗಿಂತ ಶ್ರೇಷ್ಠರು.

ಮಾನವನ ಬದುಕು ಒಂದು ಪಯಣದಂತೆ. ಈ ಪಯಣದಲ್ಲಿ ಅನೇಕ ನಿಲ್ದಾಣಗಳು, ಘಟನೆಗಳು, ಸಂಬಂಧಗಳು– ಪ್ರೀತಿ, ಸ್ನೇಹ ವಿಶ್ವಾಸಗಳ ಜೊತೆಯಲ್ಲಿ ಬದುಕು ಮುಂದುವರಿಯುತ್ತದೆ. ಹೀಗೆ ಮುಂದುವರೆದ ಬದುಕಿಗೆ ಒಂದು ಕೊನೆ ಇರಲೇಬೇಕು, ಅದು ಸಂಬಂಧವೋ, ಜೀವನದ ಕೊನೆಯೋ ಆಗಬಹುದು. ಅಂತಹ ಸಂದರ್ಭಗಳನ್ನು ಮನುಷ್ಯ ನಿರಂತರವಾಗಿ ಒಳಗೊಂಡು ಬದುಕುವುದು ವಿಶೇಷವೇ ಸರಿ– ಇಂತಹ ಬದುಕಿನ ಚಿತ್ರಣವನ್ನು ಕೊಡಗಿನ ಗೌರಮ್ಮ ಅವರ 'ಮನುವಿನ ರಾಣಿ' ಕಥೆಯಲ್ಲಿ ಕಾಣಬಹುದಾಗಿದೆ.

# 3.1. ಮಳೆರಾಜನ ಹಾಡು

– ಜನಪದ ಸಾಹಿತ್ಯ

ಯಾತಕ್ಕೆ ಮಳೆ ಹೋದವೋ ಶಿವ ಶಿವ

ಲೋಕ ತಲ್ಲಣಿಸುತಾವೋ

ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿದು

ಉರಿಸಿ ಕೊಲ್ಲಲು ಬಾರದೇ

ಹೊಟ್ಟೆಗೆ ಅನ್ನ ಇಲ್ಲದಲೇ

ನಡೆದರೆ ಜೋಲಿ ಹೊಡೆಯುತ್ತಲೇ

ಪಟ್ಟದಾನೆಯಂಥ ಸ್ತ್ರೀಯರು ಸೊರಗಿ

ಸೀರೆ ನಿಲ್ಲದಿಲ್ಲ ಸೊಂಟದಲೇ

ಹಸುಗೂಸು ಹಸಿವಿಗೆ ತಾಳದಲೆ

ಅಳುತವೆ ರೊಟ್ಟಿ ಕೇಳಿ ಕೇಳೀ

ಹಡೆದ ಬಾಣಂತಿಗೆ ಅನ್ನವಿಲ್ಲದಲೆ

ಏರುತಾವೆ ಮುಂಗೈಗೆ ಬಳೀ

ಯಾವ ಕಡೆ ಹೋಗಾನ ವನವಾಸಾ

ಯಾವಾ ನದಿ ಇಲ್ಲಿ ಯಾವ ದೇಶ

ಎಲ್ಲಿ ನೋಡಿದರೂ ಒಂದೇ ಶಬ್ದ

ದಯಮಾಡೋ ನೀ ಜಗದೀಶಾ

ಒಕ್ಕಲು ಮಕ್ಕಳಂತೇ – ಅವರಿನ್ನು

ಮಕ್ಕಳ ಮಾರ್ಯ್ರುಂಡಾರೋ

ಮಕ್ಕಳನು ಮಾರ್ಯ್ರುಂಡು ದುಃಖವನು ಮಾಡುತಾರೆ

ಮುಕ್ಕಣ್ಣ ಮಳೆ ಕರುಣಿಸೋ

ಬಣ್ಣದ ಗುಬ್ಬ್ಯಾರು ಮಳೆರಾಜಾ। ಅವರು।

ಮಣ್ಣಾಗಿ ಹೋದರು ಮಳೆರಾಜಾ।

ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು

ಅನ್ಯದ ದಿನ ಬಂದು ಮಳೆರಾಜಾ।

ಒಕ್ಕಲಗೇರ್ಯಾಗ ಮಳೆರಾಜ

ಮಕ್ಕಳ ಮಾರ್ಯಾರು ಮಳೆರಾಜ

ಮಕ್ಕಳ ಮಾರಿ ರೊಕ್ಕ ಹಿಡಕೊಂಡು

ಭತ್ತಂತ ತಿರುಗ್ಯಾರು ಮಳೆರಾಜ॥

ಸೊಲಗಿ ಹಿಟ್ಟಿನಾಗ ಮಳೆರಾಜ

ಸುಣ್ಣಾನ್ನು ಕುಡಿಸ್ಯಾರು ಮಳೆರಾಜ

ಹಸ್ದು ಬಂದು ಕೇರಿ ಗಪಗಪಾನೆ ತಿಂದು

ಒದ್ದಾಡಿ ಸತ್ತಾರು ಮಳೆರಾಜ॥

ಗಿದ್ನ ಅಕ್ಕ್ಯಾಗ ಮಳೆರಾಜ
ಅಪುವನ್ನು ಕುಡಿಸ್ಯಾರು ಮಳೆರಾಜ
ಸಣ್ಣ ಕೂಸೀಗೀ ಮನ್ನಿಸಿ ಉಣಿಸ್ಯಾರು ಅವು
ಕಣ್ಣನೆ ಮುಚ್ಚ್ಯಾವು ಮಳೆರಾಜ॥

ಗಂಡುಳ್ಳ ಬಾಲೇರು ಮಳೆರಾಜ
ಭಿಕ್ಷಾಕ್ಕೆ ಹೊರಟಾರು ಮಳೆರಾಜ
ಗಂಡುಳ್ಳ ಬಾಲೇರು ಭಿಕ್ಷಾಕ್ಕೆ ಹೊರಟಾರು
ಅನ್ಯದ ದಿನಬಂದು ಮಳೆರಾಜ॥

ಕವಿ ಪರಿಚಯ

ಜನಪದ ಸಾಹಿತ್ಯ: ಅನಾಮಧೇಯನೊಬ್ಬ ತಾನು ಅನುಭವಿಸಿದ ಬದುಕಿನ ಸಂಕೀರ್ಣ ಮತ್ತು ಜಟಿಲ ಸಮಸ್ಯೆಗಳನ್ನು ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುತ್ತಾ, ಕಾಲಾಂತರದಲ್ಲಿ ಅವು ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ರವಾನೆಯಾಗುತ್ತಾ, ಕೆಲವು ಸಾಲುಗಳು ಪರಿಷ್ಕರಣೆಗೊಳ್ಳುತ್ತಾ, ಕಾವ್ಯ ತತ್ವದ ತಳಹದಿಯ ಮೇಲೆ ಅಮರ ಸಾಹಿತ್ಯ ಶಕ್ತಿಯಾಗಿ ಉಳಿದಿದೆ.

ಕಠಿಣ ಪದಗಳ ಅರ್ಥ: ತಲ್ಲಣ – ನಡುಗು, ಭಯ; ಜೋಲಿ – ಸಮತೋಲನ ತಪ್ಪುವುದು; ವನವಾಸ – ಕಷ್ಟ,ಸಮಸ್ಯೆ; ಸೊಲಗಿ – ಒಂದು ಅಳತೆ; ರೊಕ್ಕ – ಹಣ; ಅನ್ಯದ – ಅನ್ಯಾಯದ; ಮುಕ್ಕಣ್ಣ – ಮೂರು ಕಣ್ಣುಳ್ಳವನು, ಶಿವ; ಒಕ್ಕಲು ಮಕ್ಕಳು – ರೈತರು

# 3.2 ಮನುವಿನ ರಾಣಿ

## ಕೊಡಗಿನ ಗೌರಮ್ಮ

ನನಗೆ ಆ ಊರಿಗೆ ವರ್ಗವಾಗಿ ಬರೇ ಎರಡು ತಿಂಗಳುಗಳಾಗಿದ್ದವು ಅಷ್ಟೇ. ಆ ದಿನ ನನಗೆ ತುಂಬಾ ಕೆಲಸವಿತ್ತು. ಬೆಳಿಗ್ಗೆ ಆರು ಗಂಟೆಗೆ ಹೋದವನು ಅದೇ ಆಗ ಮನೆಗೆ ಬಂದಿದ್ದೆ. ನಾನು ಮೆಟ್ಟಿಲುಗಳನ್ನು ಹತ್ತುವಾಗ ಆಸ್ಪತ್ರೆಯ ಗಡಿಯಾರವು ಹನ್ನೊಂದು ಹೊಡೆಯಿತು. ಮಕ್ಕಳು ಕೆಲಸದವರೂ ಮಲಗಿ ನಿದ್ರೆಮಾಡಿಬಿಟ್ಟಿದ್ದರು. ಪಾರ್ವತಿ ಮಾತ್ರ ನನ್ನ 'ಪ್ರತಿಕ್ಷೆ'ಯಲ್ಲೇ ಕೂತಿದ್ದಳು. ಒಳಗೆ ಹೋಗಿ ಬಟ್ಟೆ ಬದಲಾಯಿಸಿ ಕೈಕಾಲು ತೊಳೆದು ಇನ್ನೇನು ಊಟಕ್ಕೆ ಕೂರಬೇಕು. ಅಷ್ಟರಲ್ಲಿ ಮುಂಬಾಗಿಲನ್ನು ತಟ್ಟುವ ಶಬ್ದ ಕೇಳಿಸಿತು. ಪಾರ್ವತಿಗೆ ರೇಗಿ ಹೋಯ್ತು; 'ಥೂ', ಇದೇನಿದು ಬೆಳಗಿನ ಜಾವಕ್ಕೆ ಹೋದವರು ಈಗ ಬಂದಿದ್ದಾರೆ. ಒಂದಿಷ್ಟು ಊಟ ಮಾಡುವುದಕ್ಕೂ ಪುರುಸೋತಿಲ್ಲ– ಅಷ್ಟರಲ್ಲಿ ಬಂದರು ಇನ್ನೊಬ್ಬರು. "ಕದ ತಟ್ಟುತ್ತಿರಲಿ; ನಾನೇನೂ ಬಾಗಿಲು ತೆರೆಯುವುದಿಲ್ಲ" ಎಂದಳು. ಹೌದು–ನಾನು ಬೆಳಗಿನಿಂದಲೂ ಹಸಿದಿದ್ದೆ ಆದರೆ...ನನಗೆ ಮನಸ್ಸು ತಡೆಯಲಿಲ್ಲ. 'ಹೋಗಲಿ ಬಿಡು ಪಾರ್ವತಿ. ಬಾಗಿಲು ತೆರೆದು ಯಾರೆಂದು ವಿಚಾರಿಸು' ಎಂದೆ. ಅವಳಿಗೆ ಇನ್ನಷ್ಟು ಕೋಪ ಬಂತು; "ನಿಮ್ಮದಮ್ಮಯ್ಯ ಬೆಳಗಿನಿಂದ ಹೊಟ್ಟೆಗೇನೂ ಇಲ್ಲ. ಮೊದಲು ಊಟ ಮಾಡಿ; ಆಮೇಲೆ ನೋಡೋಣ" ಎಂದಳು. ಈ ಮಧ್ಯೆ ಬಾಗಿಲು ತಟ್ಟುವುದು ಬಹಳ ಜೋರಾಯ್ತು. ಮನುಷ್ಯ ಪ್ರಾಣಿಯೊಂದು ಜೀವನ ಮರಣಗಳ ಮಧ್ಯೆ ಹೊರಳಾಡುತ್ತಿರುವಾಗ ನಾನು ಊಟ ಮಾಡುತ್ತಾ ಕೂತಿರಲೆ? ಎದ್ದು ನಾನೇ ಕದ ತೆರೆಯಲು ಹೋದೆ. ಪಾರ್ವತಿಯ ಕಣ್ಣೀರು ತುಂಬಿದ ಮುಖವನ್ನು ನೋಡಿ ನನ್ನ ಮನಸ್ಸು ನೊಂದರು ಆಗ ಅವಳನ್ನು ಸಮಾಧಾನ ಪಡಿಸುವಂತಿರಲಿಲ್ಲ. ಹೋಗಿ ಕದ ತೆರೆದೆ.

ಕದ ತಟ್ಟಿದವನೆಂಬ ಹುಡುಗ– ಸುಬ್ಬ –ಆ ಊರಿನ ಬಿಟ್ಟೀ ಬಸವಯ್ಯ. 'ಏನೋ' ಎಂದು ಕೇಳಿದೆ. "ರಾಜಮ್ಮಾವ್ರ ಮನೇಲಿ ಬಾಳ ಕಾಯಿಲೆ ಅಂತೆ. ಈಗ್ಲೇ ಬರಬೇಕಂತೆ", ಎಂದ. ರಾಜಮ್ಮ! ಅವಳ ಹೆಸರನ್ನು ಕೇಳಿದ ಕೂಡಲೇ ಕದ ತೆರೆಯುವಾಗಿದ್ದ ಸಹಾನುಭೂತಿ, ಕರುಣೆ ಎಲ್ಲೋ ಮಾಯವಾಯಿತು. 'ಬೆಳಿಗ್ಗೆ ಬರುತ್ತೇನೆ, ನಡೆ' ಎಂದೆ. ಅವನು ಹೊರಟುಹೋದ. ಕದ ಮುಚ್ಚಿ ನಾನೂ ಒಳಗೆ ಹೋದೆ. ಪಾರ್ವತಿ ಊಹಿಸಿದ್ದಂತೆ ನಾನು ಹೊರಟು ಹೋಗದೇ ಮರಳಿ ಬಂದುದರಿಂದ ಅವಳಿಗೂ ಸಮಾಧಾನವಾಯಿತು. ಊಟಕ್ಕೆ ಬಡಿಸುತ್ತಾ 'ಯಾರು ಬಂದವರು?' ಎಂದು ಕೇಳಿದಳು. 'ಸುಬ್ಬು, ರಾಜಮ್ಮನ ಮನೆಗೆ ಕೂಡಲೇ ಬರಬೇಕೆಂದು ಕರೆಯುವುದಕ್ಕೆ 'ಎಂದೆ.

ರಾಜಮ್ಮನ ಹೆಸರು ಕೇಳಿ ಪಾರ್ವತಿ ' ಇವಳಿಗೇನು ಈಗ ಕೇಡು ! ಬೆಳಿಗ್ಗೆ ಹೋದರೆ ಸಾಲದೇನೋ ಇಷ್ಟಕ್ಕೂ ಸತ್ತುಹೋದರೆ ಭೂಮಿ ಭಾರವೇ ಕಮ್ಮಿ ಯಾಯಿತು' ಎಂದಳು.

ರಾಜಮ್ಮ– ಹೆಸರು ಕೇಳಿದ ಮಾತ್ರದಿಂದಲೇ ತಿರಸ್ಕರಿಸಲ್ಪಡುತ್ತಿದ್ದ ರಾಜಮ್ಮ ಸೂಳೆ. ನಾನವಳನ್ನು ಕಣ್ಣಾರೆ ನೋಡಲಿಲ್ಲವಾದರೂ ಅವಳ ವಿಷಯವಾಗಿಯೂ ಜನರಾಡಿಕೊಳ್ಳುತ್ತಿದ್ದ ಮಾತುಗಳನ್ನು ಕೇಳಿಯೇ 'ಅವಳು ನಿಜವಾಗಿಯೂ ರಾಕ್ಷಸಿ; ಎಂದೆನಿಸಿ ಹೋಗಿತ್ತು ನನಗೆ. ಅಂತವಳ ಮನೆಗೆ ಈಗ ಯಾರು ಹೋಗುತ್ತಾರೆ ? ಬೆಳಗಿನಿಂದಲೂ ಊಟ ಸಹ ಮಾಡಿಲ್ಲ– ನಾಳೆ ಬೆಳಿಗ್ಗೆ ಹೋದರಾಯಿತು' ಎಂದು ಸಮಾಧಾನ ಮಾಡಿಕೊಂಡು ಮಲಗಿದೆ. ಅಷ್ಟರಲ್ಲಿ ಪುನಃ ಬಾಗಿಲನ್ನು ಬಡಬಡನೆ ಬಡಿಯುವ ಶಬ್ದ ಕೇಳಿಸಿತು. ಹೋಗಿ ಬಾಗಿಲು ತೆರೆದೆ. ಸುಬ್ಬು ! "ಈಗ್ಲೇ ಬರ್ಬೇಕಂತೆ ಡಾಕ್ಟ್ರೇ ಬಹಳ ಜೋರಂತೆ; ಕಾಲಿಗೆ ಬಿದ್ದು ಕರ್ಕೊಂಡು ಬಾ ಅಂದ್ರು" ಎಂದ . 'ಯಾರಿಗೋ ಕಾಯಿಲೆ?' ಎಂದು ಕೇಳಿದೆ. ಅವನಿಗೆ ಗೊತ್ತಿರಲಿಲ್ಲ. ಅಂತೂ ಕಾಯಿಲೆ ರಾಜಮ್ಮನಿಗಲ್ಲ ಎಂದು ತಿಳಿಯಿತು. ಇನ್ಯಾರಿಗೆ? ಯಾರಿಗೆ ಆದರೂ ರಾಜಮ್ಮನಿಗೆ ಆದರೂ ಹೋಗಿ ನೋಡುವುದು ನನ್ನ ಕರ್ತವ್ಯ. ಅವಳು ಸೂಳೆ ಎಂದ ಮಾತ್ರಕ್ಕೆ ಅಷ್ಟೊಂದು ಅಲಕ್ಷ್ಯ ಮಾಡಲು ನನಗೆಲ್ಲಿಯ ಅಧಿಕಾರ ? ಸ್ವಲ್ಪ ಹೊತ್ತಿನ ಮೊದಲೇ ನನ್ನ ಕರ್ತವ್ಯವನ್ನು ಅವಳು ಸೂಳೆ ಎಂಬ ನೆವದಿಂದ ಬದಿಗೊತ್ತಿ ಸಮಾಧಾನ ಮಾಡಿಕೊಂಡಿದ್ದೆ. ನೆನಪಿಸಿಕೊಂಡು ನನಗೆ ನಾಚಿಕೆಯಾಯಿತು – 'ಬರುತ್ತೇನೆ ತಡೆ' ಎಂದು ಹೇಳಿ ಒಳಗೆ ಹೋಗಿ ಬೇಗ ಬೇಗ ಬಟ್ಟೆ ಹಾಕಿಕೊಂಡೆ. ಪಾರ್ವತಿಗೆ ನಿದ್ರೆ ಬಂದು ಹೋಗಿತ್ತು. ಔಷಧಿಯ ಪೆಟ್ಟಿಗೆಯನ್ನು ತೆಗೆದುಕೊಂಡು ಹಾಗೆಯೇ ಬಾಗಿಲನ್ನೆಳೆದುಕೊಂಡು ಹೊರಟೆ.

ರಾಜಮ್ಮನ ಮನೆ ನಮ್ಮನೆಗೆ ಸುಮಾರು ಮುಕ್ಕಾಲು ಮೈಲು ದೂರದಲ್ಲಿ ಒಂದು ತೋಟದೊಳಗೆ ಒಂಟಿಯಾಗಿತ್ತು. ಅದರ ಹತ್ತಿರ ಹತ್ತು ಹನ್ನೆರಡು ಮಾರು ದೂರದಲ್ಲಿ ಒಂದೆರಡು ಬಡ ಕೂಲಿಯವರ ಗುಡಿಸಲುಗಳಲ್ಲದೆ ಬೇರೆ ಮನೆಗಳಿರಲಿಲ್ಲ. ನಾವು ಹೋಗುವಾಗ ರಾಜಮ್ಮನ ಮನೆ ಬಾಗಿಲು ತೆರೆದೇ ಇತ್ತು. ಸುಬ್ಬು 'ಅಮ್ಮಾವ್ರೇ' ಎಂದು ಕೂಗಿದ. ರಾಜಮ್ಮ ಹೊರಗೆ ಬಂದಳು. ಅದೇ ಮೊಟ್ಟ ಮೊದಲು ನಾನು ರಾಜಮ್ಮನನ್ನು ನೋಡಿದ್ದು. ಅವಳ ವಿಷಯವಾಗಿ ಜನರಾಡುತ್ತಿದ್ದ ಮಾತುಗಳನ್ನು ಕೇಳಿ ರಾಜಮ್ಮ ರಾಕ್ಷಸಿ ಎಂಬ ಭಾವನೆಯಾಗಿ ಹೋಗಿತ್ತು ನನಗೆ. ಆದರೆ ಅದೇಕೋ – ವ್ಯಸನದಿಂದ ಬಾಡಿದ ಅವಳ ಮುಖವಂತೂ ಅತ್ತು ಅತ್ತು ಕೆಂಪಾಗಿ ಊದಿಕೊಂಡಿದ್ದ ಅವಳ ಕಣ್ಣುಗಳನ್ನು ನೋಡಿ ನನಗೆ ಅತ್ಯಂತ ಕರುಣೆಯುಂಟಾಯಿತು. ಯಾರಿಗಮ್ಮ ಕಾಯಿಲೆ ? ಎಂದು ಕೇಳಿದೆ. ರಾಜಮ್ಮ ಪ್ರತ್ಯುತ್ತರ ಕೊಡದೆ, ನನ್ನನ್ನು ಒಳಗೆ ಕರೆದುಕೊಂಡು ಹೋದಳು. ಅಲ್ಲೊಂದು ಕೋಣೆಯಲ್ಲಿ ಮಂಚದ ಮೇಲೊಬ್ಬನು ಮಲಗಿದ್ದ. ರಾಜಮ್ಮ ಆತನ ಕಡೆ ಕೈ ತೋರಿದಳು. ಹತ್ತಿರ ಹೋಗಿ ನೋಡಿದೆ. ಸತ್ತ ಹೆಣದ ಮುಖದಂತಿತ್ತು ಅವನ ಮುಖ.

ಕಣ್ಣುಗಳನ್ನು ಬಿಟ್ಟುಕೊಂಡೇ ಇದ್ದರೂ ಆ ಕಣ್ಣುಗಳಲ್ಲಿ ಜೀವದ ಬೆಳಕಿದ್ದಂತೆ ತೋರಲಿಲ್ಲ. ಬಗ್ಗಿ ಆತನ ಕೈಹಿಡಿದು ನೋಡಿದೆ. ಬೆಂಕಿಯಂತೆ ಸುಡುತ್ತಿತ್ತು ಕೈ. ಜ್ವರದ ತಾಪದಿಂದ ಅವನಿಗೆ ಪ್ರಜ್ಞೆ ಇರಲಿಲ್ಲ. ನೋಡಿದೊಡನೆಯೇ ಆತ ಬದುಕುವಂತಿಲ್ಲವೆಂದು ನನಗೆ ತಿಳಿಯಿತು. ರಾಜಮ್ಮ ಅವನ ಕಾಲು ಹತ್ತಿರ ತಲೆಯನ್ನಿಟ್ಟು ಶೂನ್ಯದೃಷ್ಟಿಯಿಂದ ನನ್ನ ಕಡೆ ನೋಡುತ್ತಿದ್ದಳು. ನಾನು ಎಷ್ಟೋ ಜನರು ಸಾಯುವುದನ್ನು ನೋಡಿದ್ದೇನೆ. ಅದೆಷ್ಟೋ ಜನರು ಎದೆ ಎದೆ ಬಡಿದುಕೊಂಡು ಅಳುವ ಕರುಣಾಕ್ರಂದನವನ್ನೂ ಕೇಳಿದ್ದೇನೆ. ಆದರೆ ಅದಾವ ದೃಶ್ಯಗಳೂ ರಾಜಮ್ಮನ ಮೂಕ ರೋದನದಷ್ಟು ವ್ಯಥೆಯನ್ನು ಉಂಟುಮಾಡಿರಲಿಲ್ಲ. ಸ್ವಲ್ಪ ಹೊತ್ತಿನ ಹಿಂದೆ ನಾನು ರಾಜಮ್ಮನನ್ನು ನೋಡಿ ಸಹ ಇರಲಿಲ್ಲ. ಅವಳ ವಿಷಯದಲ್ಲಿ ತಿರಸ್ಕಾರವಿತ್ತು; ಸತ್ತರೂ ಸಾಯಲಿ ಎಂಬ ಭಾವನೆ ಇತ್ತು. ಒಂದು ಸಾರಿ ಅವಳ ಅಳುವ ಮುಖವನ್ನು ನೋಡಿದ ಮಾತ್ರದಿಂದ ನನಗವಳ ವಿಷಯದಲ್ಲಿದ್ದ ಎಲ್ಲಾ ಭಾವನೆಗಳೂ ಮಾಯವಾಗಿ ಅಸೀಮ ಕರುಣೆಯೊಂದು ಮಾತ್ರ ಅದೇಕೆ ಉಳಿಯಿತೋ ಹೇಳಲಾರೆ. ಅವಳ ಪ್ರಾಯವೇನೊ ಹೆಚ್ಚಾಗಿದ್ದಂತೆ ತೋರಲಿಲ್ಲ. ನನ್ನ ಮಗಳು ಶಾಂತಿಗಿಂತ ಒಂದೆರಡು ವರ್ಷಕ್ಕೆ ಹಿರಿಯಳೋ ಏನೋ, ಇಷ್ಟೊಂದು ಚಿಕ್ಕ ಪ್ರಾಯದಲ್ಲೇ ಇಂತಹ ಅವಸ್ಥೆ! ಹೆಸರಾದ ಸೂಳೆ ಎಂಬ ಕೀರ್ತಿ!

ಮಲಗಿದ್ದ ಮನುಷ್ಯ ಹೊರಳಾಡಿದ. ನಾನು ಕುಡಿಸಿದ ಔಷಧಿಯ ಪ್ರಭಾವದಿಂದ ಅವನನ್ನು ಬದುಕಿಸುವುದು ಅಸಾಧ್ಯವಾದರೂ ಅವನಿಗೆ ಸ್ಮೃತಿ ಬರುವ ಸಂಭವವಿತ್ತು. ಕಾಲ ದಿಸೆಯಲ್ಲಿ ಕುಳಿತಿದ್ದ ರಾಜಮ್ಮ ಎದ್ದು ಬೆವರುತ್ತಿದ್ದ ಅವನ ಮುಖವನ್ನು ಒರೆಸತೊಡಗಿದಳು. ಆತನ ತುಟಿ ಅಲುಗಾಡಿತು. ಸ್ವಲ್ಪ ನೀರನ್ನು ಕುಡಿಸುವಂತೆ ಹೇಳಿದೆ. ಅವಳು ಒಂದೆರಡು ಚಮಚ ನೀರನ್ನು ಕುಡಿಸುತ್ತಲೇ ಅವನು ಮೆಲ್ಲಗೆ ರಾಣಿ ಎಂದ. ರಾಜಮ್ಮ ನನ್ನ ಕಡೆಗೊಮ್ಮೆ ಕೃತಜ್ಞತೆಯಿಂದ ನೋಡಿ, 'ಏನು ?' ಎಂದಳು. ಪಾಪ ಅವಳಿಗೆ ಗೊತ್ತಿರಲಿಲ್ಲ. ಆರುವ ಮೊದಲು ದೀಪ ಉರಿಯುವುದೆಂದು 'ರಾಣಿ, ರಾಣಿ ,ರಾಣಿ' ಎಂದು ಕೂಗುತ್ತಾ ಆತ ಅವಳ ಕೈಗಳನ್ನು ಹಿಡಿದುಕೊಂಡ. 'ಇಲ್ಲೇ ಇದ್ದೇನೆ, ಮನು ಏನು?' ಎಂದು ರಾಜಮ್ಮ ಕೇಳಿದಳು. ಪುನಃ ಇನ್ನೊಮ್ಮೆ ರಾಣೀ ಎಂದು ಜೋರಾಗಿ ಚೀರಿದ ಆತ. ಆಯ್ತು; ಅದೇ ಅಂತ್ಯ.

ಬೆಳಗಿನ ಹತ್ತು ಗಂಟೆಯಾಗಿತ್ತು. ಮರುದಿನ ನಾನು ಮನೆಗೆ ಹೋಗುವಾಗ, ಮಕ್ಕಳಿಬ್ಬರೂ ಸ್ಕೂಲಿಗೆ ಹೋಗಿದ್ದರು. ಪಾರ್ವತಿ ಹೋದೊಡನೆಯೇ 'ಎಲ್ಲಿಗೆ ಹೋಗಿದ್ರಿ? ರಾತ್ರೀನೇ ಹೋದ್ರೋ, ಬೆಳಗಾಗಿತ್ತೋ? ಯಾರಿಗೆ ಕಾಯಿಲೆ?' ಎಂದು ಮುಂತಾಗಿ ಪ್ರಶ್ನೆಗಳ ಮಳೆಯನ್ನೇ ಸುರಿಸಿಬಿಟ್ಟಳು. ಆದರೆ ಆಗ ಅವಳ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ ನನ್ನ ಮನಸ್ಸು. ಹಿಂದಿನ ದಿನದ ಆ ರೋಗಿ, ಕೆದರಿದ ಕೂದಲಿನ ಊದಿದ ಕಣ್ಣುಗಳ ಬಾಡಿದ ಮುಖದ ರಾಜಮ್ಮ ಅವಳ ಮುಖ ರೋಧನ, ಎಲ್ಲಾ ಕಣ್ಣು ಮುಂದೆ ಕಟ್ಟಿದಂತಿತ್ತು. ನನ್ನಿದಿರು ಪಾರ್ವತಿಯೇ ನಿಂತಿದ್ದರೂ ನನ್ನ ಕಣ್ಣುಗಳಿಗೆ ರಾಜಮ್ಮನ ಬಾಡಿ ಬೆಂಡಾಗಿದ್ದ ಆ ಮುಖ ಕಾಣಿಸುತ್ತಿತ್ತು.

ನಾನೂ ಮೂಕನಂತೆ ಬೆಪ್ಪಾಗಿ ನಿಂತಿರುವುದನ್ನು ನೋಡಿ ಪಾರ್ವತಿಗೆ ಆಶ್ಚರ್ಯವೇ ಆಗಿರಬೇಕು. ಹಿಂದಿನ ದಿನದ ನನ್ನ ವಿಪರೀತದ ಕೆಲಸದಿಂದಲೇ ನಾನು ಹಾಗಿರುವುದೆಂದು ಅವಳು ಬಲು ನೊಂದುಕೊಂಡಳು. 'ನಿನ್ನೆ ಇಡೀ ದಿನ ನಿದ್ರೆಯಿಲ್ಲ; ಹೊತ್ತಿಗೆ ಸರಿಯಾಗಿ ಊಟವಿಲ್ಲ. ಇನ್ನಾದರೂ ಫಲಹಾರ ಮಾಡಿ ವಿಶ್ರಾಂತಿ ತಕ್ಕೊಳ್ಳಿ' ಎಂದು ಕಾಫಿ ತಿಂಡಿಯನ್ನು ತಂದಿಟ್ಟುಕೊಂಡು ಬಲವಂತಪಡಿಸತೊಡಗಿದಳು. 'ಈಗೇನು ಬೇಡ ಪಾರ್ವತಿ, ಸ್ವಲ್ಪ ಮಲಗಿ ನಿದ್ರೆ ಮಾಡಿದರೆ ಎಲ್ಲಾ ಸರಿಯಾಗುತ್ತೆ' ಎಂದು ಬಟ್ಟೆಯನ್ನು ಸಹ ಬದಲಾಯಿಸದೆ ಹಾಗೆಯೇ ಬಿದ್ದುಕೊಂಡೆ. ನಾನು ನಿದ್ರೆ ಮಾಡಲೆಳಸುವೆನೆಂದೆಣಿಸಿ ಪಾರ್ವತಿ ಹೊರಗೆ ಹೊರಟಳು. 'ಇಲ್ಲಿ ಬಂದು ಕೂತ್ಕೋ ಪಾರ್ವತಿ' ಎಂದೆ. ಪಾರ್ವತಿ ನನ್ನ ಹತ್ತಿರ ಬಂದು ಕುಳಿತಳು. 'ಇವತ್ತು ನಿಮಗೆ ಏನಾಗಿದೆ' ಎಂದು ಕೇಳುವಂತಿತ್ತು ಪಾರ್ವತಿಯ ಪ್ರಶ್ನಾಸೂಚಕವಾದ ದೃಷ್ಟಿ. ನಾನವಳಿಗೆ ಹಿಂದಿನ ರಾತ್ರಿ ರಾಜಮ್ಮನ ಮನೆಯಲ್ಲಿ ನಡೆದುದ್ದೆಲ್ಲವನ್ನೂ ಹೇಳಿದೆ. ನನ್ನ ಮಾತುಗಳನ್ನು ಕೇಳಿ ಪಾರ್ವತಿ 'ಸತ್ತವನು ಯಾರು? ರಾಜಮ್ಮನಿಗೆ ಏನಾಗಬೇಕು?' ಎಂದು ಕೇಳಿದಳು. ಅಷ್ಟರವರೆಗೂ ನನಗಾ ವಿಷಯ ಹೊಳೆದಿರಲಿಲ್ಲ. ಸತ್ತವನು ಯಾರು? ರಾಜಮ್ಮನಿಗೆ ಅಷ್ಟೊಂದು ವ್ಯಸನವನ್ನುಂಟು ಮಾಡಲು ಅವನಿಗೂ ಅವಳಿಗೂ ಏನು ಸಂಬಂಧ? ಎಂದು ನನಗೂ ಈಗ ಎನಿಸಿತು. ಪಾರ್ವತಿಗೆ ರಾಜಮ್ಮನ ಮೇಲೆ ಬಹಳ ಸಂದೇಹ; 'ಎಲ್ಲಾದರೂ ರಾಜಮ್ಮ ಅವನನ್ನು ವಿಷಹಾಕಿ ಕೊಂದಿರಬಹುದೇ' ಎಂತ. ಒಂದೇ ಒಂದು ದಿನದ ಹಿಂದೆ ಪಾರ್ವತಿಯಂತೆಯೇ ನನಗೂ ಸಂದೇಹ ಉಂಟಾಗುತ್ತಿತ್ತು. ರಾಜಮ್ಮ ನನ್ನೊಂದುಸಾರಿ ನೋಡಿದ ಮೇಲೆ ನನ್ನ ಆ ತರದ ಭಾವನೆಗಳೆಲ್ಲಾ ಬದಲಾಗಿ ಹೋಗಿದ್ದವು. ಅದರಿಂದ ಅವಳ ವಿಷಯದಲ್ಲಿ ಪಾರ್ವತಿಯ ಸಂಶಯದ ಮಾತುಗಳನ್ನು ಕೇಳಿ ನನಗೆ ಕೋಪ ಬಂತು. 'ಸುಮ್ಮನಿರು ಪಾರ್ವತಿ ' ಎಂದು ಬಿಟ್ಟೆ. ನನ್ನ ಸ್ವರ ಕಠೋರವಾಗಿದ್ದಿರಬೇಕು, ಸಿಟ್ಟಿನಿಂದ ಪಾರ್ವತಿಯ ಕಣ್ಣುಗಳಲ್ಲಿ ನೀರು ತುಂಬಿತು. ಅವಳ ಮುಖವನ್ನು ನೋಡಿ ನನ್ನ ಕಠೋರತೆಗಾಗಿ ನಾಚಿಕೆಯಾಯಿತು. ಅವಳನ್ನು ಸಮಾಧಾನಪಡಿಸುತ್ತ 'ರಾಜಮ್ಮ ವಿಷಹಾಕಿ ಕೊಲ್ಲುವಂತ ರಾಕ್ಷಸಿಯಂತೆ ತೋರುವುದಿಲ್ಲ ಪಾರ್ವತಿ. ನನ್ನ ಶಾಂತಿಗಿಂತ ಎಲ್ಲಾದರೂ ಒಂದೆರಡು ವರ್ಷಕ್ಕೆ ದೊಡ್ಡವಳಾಗಿರಬೇಕು. ಪಾಪ, ಅವಳನ್ನು ನೋಡುವಾಗ ಬಹಳ ಮರುಕವಾಗುತ್ತೆ. ಜನರಿಗೇನು, ಸುಮ್ಮನೆ ಏನಾದರೂ ಹೇಳುತ್ತಿರುತ್ತಾರೆ' ಎಂದು ಹೇಳಿದೆ. ಆದರೆ ಪಾರ್ವತಿಗೆ ರಾಜಮ್ಮನ ಮೇಲಿನ ಸಂದೇಹವು ಸಂಪೂರ್ಣವಾಗಿ ದೂರವಾದಂತೆ ತೋರಲಿಲ್ಲ. ಸತ್ತವನು ಹಣಗಾರನಾಗಿರಬಹುದು – ಅವನ ಹಣಕ್ಕಾಗಿ ಅವನನ್ನು ಕೊಂದಿರಬಹುದು. ಈಗ ವ್ಯಸನವನ್ನು ನಟಿಸಿ ಪಾರಾಗಲು ಯತ್ನಿಸುತ್ತಿದ್ದಾಳೆ ಎಂದು ಪಾರ್ವತಿಯ ಊಹನೆ.

ಆ ದಿನ ನಾನು ಆಸ್ಪತ್ರೆಗೆ ಹೋಗಲಿಲ್ಲ. ವಿಶ್ರಾಂತಿಯನ್ನು ತೆಗೆದುಕೊಳ್ಳುವ ನೆವದಿಂದ ಹಾಸಿಗೆಯ ಮೇಲೆಯೇ ಹೊರಳಾಡುತ್ತಿದ್ದೆ. ನಿದ್ರೆ ಮಾತ್ರ ಎಷ್ಟೆಷ್ಟು ಪ್ರಯತ್ನಿಸಿದರೂ ಬರಲಿಲ್ಲ. ಕೊನೆಗೆ ಸಾಯಂಕಾಲ ಸ್ವಲ್ಪ

ಹೊರಗೆ ಹೋಗಿ ತಿರುಗಾಡಿಕೊಂಡಾದರೂ ಬರೋಣ ಎಂದು ಹೊರಟೆ. ನನಗೆ ತಿಳಿಯದಂತೆಯೇ ಕಾಲುಗಳು ನನ್ನನ್ನು ರಾಜಮ್ಮನ ಮನೆಯ ಕಡೆ ಎಳೆದುಕೊಂಡು ಹೋದವು. ಬಾಗಿಲು ತೆರೆದಿತ್ತು. ಒಳಗೆ ಹೋದೆ. ಹಿಂದಿನ ದಿನ ರೋಗಿಯು ಮಲಗಿದ್ದ ಮಂಚದ ಹತ್ತಿರ ನೆಲದ ಮೇಲೆ ಕುಳಿತುಕೊಂಡು ನೆಟ್ಟ ದೃಷ್ಟಿಯಿಂದ ಬಾಗಿಲ ಕಡೆ ನೋಡುತ್ತಿದ್ದಳು ರಾಜಮ್ಮ. ಬಾಗಿಲಿನಿಂದ ನಾನು ಒಳಗೆ ಹೋಗಿದ್ದರೂ ನನ್ನನ್ನು ಅವಳು ನೋಡಿದಂತೆ ತೋರಲಿಲ್ಲ. ನನಗವಳ ಸ್ಥಿತಿಯನ್ನು ನೋಡಿ ಬಹಳ ಕಳವಳವಾಯಿತು. ಹೆಣದ ದಹನವಾಗಿತ್ತು. ಈಗ ಅವಳೊಬ್ಬಳೇ ಆ ಮನೆಯಲ್ಲಿ, ಸೂಳೆಯ ಜೊತೆಗೆ ಹೋಗುವವರು ಯಾರು? ಪಾರ್ವತಿಯನ್ನಾದರೂ ಜೊತೆಯಲ್ಲಿ ಕರೆತರಬೇಕಾಗಿತ್ತು ಎನಿಸಿತು ನನಗೆ. ಹಿಂದಿನ ದಿನ ಯಾರಾದರೂ ನನ್ನೊಡನೆ ರಾಜಮ್ಮನ ಮನೆಗೆ ನನ್ನ ಹೆಂಡತಿಯನ್ನು ಕರೆದುಕೊಂಡು ಹೋಗೆಂದಿದ್ದರೆ ನಾನವನೊಡನೆ ಖಂಡಿತವಾಗಿಯೂ ಜಗಳಾಡಿ ಬಿಡುತ್ತಿದ್ದೆ. ರಾಜಮ್ಮನನ್ನು ನೋಡಿದ ಮೇಲೆ ಆ ತರದ ಭಾವನೆಗಳೇಕೋ ಮಾಯವಾಗಿ ಹೋಗಿದ್ದವು. ಹಿಂದೆ ನಾನವಳ ವಿಷಯವಾಗಿ ನೆನಸಿಕೊಂಡುದನ್ನೆಲ್ಲಾ ಯೋಚಿಸಿಕೊಂಡಾಗ ನನ್ನ ಮೇಲೆ ನನಗೇ ಧಿಕ್ಕಾರ ಉಂಟಾಗುತ್ತಿತ್ತು.

ಅವಳಿಗೆ ನಾನು ಹೋದುದ್ದು ತಿಳಿಯಲಿಲ್ಲ . 'ರಾಜಮ್ಮ' ಎಂದು ಕೂಗಿದೆ . ಬೇರೆ ಯಾವುದನ್ನೋ ನೋಡುತ್ತಿದ್ದವಳು ಫಕ್ಕನೆ ತಿರುಗುವಂತೆ ನನ್ನ ಮಾತು ಕೇಳಿ ಅವಳು ತಿರುಗಿದಳು . ಮೊದಮೊದಲು ನಾನು ಯಾರಂತ ಅವಳಿಗೆ ಗುರುತು ಸಿಕ್ಕಿದಂತೆ ತೋರಲಿಲ್ಲ. ಅವಳನ್ನು ನಾನೆಷ್ಟೋ ಸಮಾಧಾನಪಡಿಸಲು ಯತ್ನಿಸಿದೆ. ಅವಳು ಅಳುತ್ತಿರಲಿಲ್ಲವಾದರೂ ನನ್ನ ಮಾತುಗಳಿಂದ ಅವಳಿಗೆ ಸಮಾಧಾನವಾದಂತೆ ತೋರಲಿಲ್ಲ. ಕತ್ತಲಾಗುತ್ತಾ ಬಂದಿತ್ತು. ಅವಳೊಬ್ಬಳೇ ಆ ಮನೆಯಲ್ಲಿ ಆದರೆ ನಾನೇನೂ ಮಾಡುವಂತಿರಲಿಲ್ಲ. ಕೊನೆಗೆ ಯಾರನ್ನಾದರೂ ಜೊತೆಗೆ ಕಳುಹಿಸುತ್ತೇನೆ ಎಂದು ಹೇಳಿ ಹೊರಟೆ. ಬಾಯಲ್ಲಿ ಹೇಳುವಷ್ಟು ಸುಲಭವಾಗಿರಲಿಲ್ಲ. ರಾಜಮ್ಮನ ಮನೆಗೆ ಜನರನ್ನು ಕಳುಹಿಸುವುದು. ಅಂತೂ ಕೊನೆಗೆ ನಮ್ಮನೆಯ ಕೆಲಸದವರನ್ನು ಆ ರಾತ್ರಿಯ ಮಟ್ಟಿಗೆ ಅಲ್ಲಿಗೆ ಹೋಗಲು ಒಪ್ಪಿಸಿದೆ. (ಶಾಂತಿ ನಾನು ಅವಳೊಡನೆ ಹೋಗುತ್ತೇನೆಂದಳು. ನನ್ನ ಆಕ್ಷೇಪಣೆ ಇಲ್ಲದಿದ್ದರೂ ಪಾರ್ವತಿ ಅವಳನ್ನು ಕಳುಹಿಸಲು ಒಪ್ಪಲಿಲ್ಲ.)

ಎರಡು ದಿನಗಳಿಂದ ನಿದ್ರೆ ಸರಿಯಾಗಿಲ್ಲದುದರಿಂದ ಆ ದಿನ ನಿದ್ರೆ ಚೆನ್ನಾಗಿ ಬಂದುಹೋಗಿತ್ತು. ನನಗೆ ಪಾರ್ವತಿಯೂ ಎಚ್ಚರಗೊಳಿಸಿರಲಿಲ್ಲ. ಅದರಿಂದ ಆ ದಿನ ನಾನು ಏಳುವಾಗ ಎಂಟು ಹೊಡೆದು ಹೋಗಿತ್ತು. ಆಸ್ಪತ್ರೆಗೆ ಹೋಗಲು ಹೊತ್ತಾಗುವುದೆಂದು ಅವಸರವಾಗಿ ಹೊರಟಿದ್ದೆ. ಗೇಟನ್ನು ದಾಟುವಾಗ ರಾತ್ರಿ ರಾಜಮ್ಮನ ಮನೆಗೆ ಹೋಗಿದ್ದ ನಮ್ಮ ಕೆಲಸದವಳು ಇದಿರಾಗಿ ಬಂದಳು. ಅವಸರದಲ್ಲಿ ರಾಜಮ್ಮನ ಸುದ್ದಿಯೇ ಮರೆತು ಹೋಗಿತ್ತು ನನಗೆ. ಅವಳನ್ನು ನೋಡಿ ರಾಜಮ್ಮ ಹೇಗಿದ್ದಾಳೆ ಎಂದು ವಿಚಾರಿಸಿದೆ. ತಾನು ಬರುವಾಗ ಇನ್ನೂ

ಎದ್ದಿರಲಿಲ್ಲವೆಂದೂ ನಿದ್ರೆ ಮಾಡುತ್ತಿದ್ದಳೆಂದೂ ಹೇಳಿ ಅವಳೂ ತನ್ನ ಕೆಲಸಕ್ಕೆ ಹೊರಟು ಹೋದಳು.

ಆ ದಿನ ನನಗೂ ಸ್ವಲ್ಪ ಹೆಚ್ಚು ಕೆಲಸವಿತ್ತು. ಅದೇ ಮನೆಗೆ ಊಟಕ್ಕೆ ಬರುವಾಗ ಮೂರು ಗಂಟೆಯಾಗಿತ್ತು. ಊಟವಾದ ಮೇಲೆ ನಾನೂ ಪಾರ್ವತಿಯೂ ಮಾತನಾಡುತ್ತಾ ಕುಳಿತಿರುವಾಗ ಮಧ್ಯಾಹ್ನದ ಟಪ್ಪಾಲಿನಲ್ಲಿ ಬಂದ ಒಂದು ಕಾಗದವನ್ನು ಪಾರ್ವತಿ ಕೊಟ್ಟಳು. ಕಾಗದವನ್ನು ಬಿಡಿಸಿದೆ. ಅಕ್ಷರಗಳು ನನಗೆ ಪರಿಚಿತವಾಗಿರಲಿಲ್ಲ. ಯಾರ ಕಾಗದವಿರಬಹುದೆಂದು ಕುತೂಹಲದಿಂದ ಕೊನೆಯನ್ನು ನೋಡಿದೆ. ರಾಜಮ್ಮ! ನನಗೆ ತುಂಬಾ ಆಶ್ಚರ್ಯವಾಯಿತು. ರಾಜಮ್ಮ ನನಗೆ ಬರೆಯುವಂತಹ ವಿಷಯವೇನು! ಆತುರದಿಂದ ಓದ ತೊಡಗಿದೆ!

"ಡಾಕ್ಟ್ರೇ"

ನನ್ನಂಥವಳ ಮೇಲೆ ಜನರಿಗೆ ಕರುಣೆ ಇರುವುದು ಅಪರೂಪ. ನನ್ನಂಥವರಿಗೆ ಕಷ್ಟ ಬಂದಾಗ ಸಹಾಯ ಮಾಡುವುದು ಸಹ ಮನುಷ್ಯ ಧರ್ಮಕ್ಕೆ ವಿರೋಧವೆಂದು ಭಾವಿಸುವವರೇ ಹೆಚ್ಚು. ಇಷ್ಟು ದಿನ– ಈಗ ನಾಲ್ಕು ವರ್ಷ ನಾನೂ ಯಾರಿಂದಲೂ ಸಹಾಯವನ್ನಾಗಲಿ ಸಹಾನುಭೂತಿಯನ್ನಾಗಲಿ ಅಪೇಕ್ಷಿಸಿದವಳಲ್ಲ. ಮೊನ್ನೆ ಮನುವಿಗೆ ಒಂದೇ ಸಾರಿ ಜ್ವರ ಜೋರಾಯಿತು. ಸುಬ್ಬು ವಿನಾಃ ನನ್ನ ಮನೆಯ ಕಡೆ ಮತ್ತಾರು ಸುಳಿಯುವುದಿಲ್ಲ. ಅವನನ್ನೇ ಕಳುಹಿಸಿದೆ. ಡಾಕ್ಟರನ್ನು ಕರೆದುಕೊಂಡು ಬರುವುದಕ್ಕೆ. ತಾವು ಮನೆಯಲ್ಲಿರಲಿಲ್ಲ..... ಬೇರೆ ಡಾಕ್ಟರ್ ಮನೆಗೆ ಕಳುಹಿಸಿದೆ. ಅವರು ನಿರ್ಧಾಕ್ಷಿಣ್ಯವಾಗಿ ಬರುವುದಿಲ್ಲ ಎಂದು ಹೇಳಿ ಕಳುಹಿಸಿಬಿಟ್ಟರು. ಪುನಃ ನಿಮಗೆ ಹೇಳಿ ಕಳುಹಿಸಿದೆ. ನೀವು ಬೆಳಗ್ಗೆ ಬರುವೆನೆಂದುಬಿಟ್ಟಿರಿ. ಈ ಮಧ್ಯೆ ಮನುವಿಗೆ ನಿಮಿಷ ನಿಮಿಷಕ್ಕೆ ಜೋರಾಗುತ್ತಿತ್ತು. ಕಾಲಿಗೆ ಬಿದ್ದಾದರೂ ಕರೆದುಕೊಂಡು ಬಾ ಎಂದು ತಿರುಗಿ ಸುಬ್ಬುವನ್ನು ಕಳುಹಿಸಿದೆ. ನಿಮಗೇನೋ ದಯೆ ಬಂತು. ನೀವು ಬಂದಿರಿ. ಆದರೆ ಮನುವನ್ನು ಇಟ್ಟುಕೊಳ್ಳುವ ಭಾಗ್ಯ ನನಗಿರಲಿಲ್ಲ. ಅವನು ಹೊರಟು ಹೋದ.

ನಾನು ಯಾರು, ಮನು ಯಾರು? ನಮನಮಗೆ ಸಂಬಂಧವೇನು? ಎಂದು ಮುಂತಾಗಿ ನೀವು ಯೋಚಿಸಬಹುದು. ನನ್ನ ವಿಷಯವಾಗಿ ಜನರಾಡಿಕೊಳ್ಳುವ ಮಾತುಗಳನ್ನೂ ನೀವು ಕೇಳಿರಬಹುದು. ಹೌದು.(ನನ್ನ ತಾಯಿ ಸೂಳೆಯಾಗಿದ್ದಳು.) ನಾನು ಅದೇ ವೃತ್ತಿಗಾಗಿ ತಯಾರು ಮಾಡಲ್ಪಟ್ಟಿದ್ದೆ. ನನ್ನ ತಾಯಿಯು ನನ್ನಿಂದ ತುಂಬಾ ಹಣ ಸಂಪಾದಿಸಲು ಬಯಸುತ್ತಿದ್ದಳು. ಅವಳ ಬಯಕೆಯೂ ನಿರರ್ಥಕವಾಗುವಂತಿರಲಿಲ್ಲ. ಏಕೆಂದರೆ ಅನೇಕ ಗಣ್ಯ ಮಾನ್ಯ ಧನಿಗಳು ನನ್ನನ್ನು ಮೆಚ್ಚಿ ಮನಸೋತಿದ್ದರು . ಆದರೆ ಮನುವಿನಿಂದಾಗಿ ನನ್ನ ತಾಯಿಯ ಆಸೆ ನಿರಾಸೆಯಾಗಬೇಕಾಯಿತು. ಮನು– ಎಂತ ಅವನ ಹೆಸರು. ಭಾಗ್ಯವಂತರ ಒಬ್ಬನೇ ಮಗ. ಚಿಕ್ಕಂದಿನಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡಿದ್ದುದರಿಂದ ಹೇಳುವವರು ಕೇಳುವವರು ಯಾರು ಇರಲಿಲ್ಲ ಅವನಿಗೆ. ಒಂದು ದಿನ ನನ್ನ ತಾಯಿಯ ಹಳೆಯ ಸ್ನೇಹಿತನೊಬ್ಬನು ಅವನನ್ನು ನಮ್ಮನೆಗೆ ಕರೆದುಕೊಂಡು ಬಂದನು. ಅಂದಿನಿಂದ ಯಾವಾಗಲೂ ಮನು ನಮ್ಮನೆಗೆ ಬರತೊಡಗಿದ, ನನಗಾಗಿ.

ಸೂಳೆಯರಿಗೆ ಹೃದಯವಿರಬಾರದೆಂದು ನನ್ನ ತಾಯಿ ಹೇಳಿಕೊಟ್ಟಿದ್ದರೂ ಮನುವನ್ನು ನಾನು ಪ್ರೀತಿಸತೊಡಗಿದೆ. ಆತನು ನನ್ನನ್ನೂ ಪ್ರೀತಿಸುತಿದ್ದ. ಮನುವಿನ ಮತ್ತು ನನ್ನ ವ್ಯವಹಾರಗಳು ನನ್ನ ತಾಯಿಗೆ ಸರಿಬೀಳುತ್ತಿದ್ದಿಲ್ಲ. ಈ ಮಧ್ಯೆ ಮನುವಿನ ಹಣ– ಕಾಸೆಲ್ಲ ನಮ್ಮ ಪೆಟ್ಟಿಗೆಗೆ ಸೇರಿಹೋಗಿತ್ತು. ಆದುದರಿಂದ ಮುಂದೆ ಅವನಿಂದ ನನ್ನ ತಾಯಿಗೆ ಪ್ರಯೋಜನವಾಗುವಂತಿರಲಿಲ್ಲ.

ಅಕಸ್ಮಾತ್ತಾಗಿ ಮನು ನಮ್ಮನೆಗೆ ಬರುವುದು ನಿಂತುಹೋಯ್ತು. ನಾನು ತಾಯಿಯನ್ನು ವಿಚಾರಿಸಿದಾಗ ಅವನು ಮದುವೆಯಾಗಿರುವನೆಂದು ಹೇಳಿದಳು. ಮನುವಿನ ಮದುವೆಯ ಮಾತು ಕೇಳಿ ನನಗೆ ಬಹಳ ದುಃಖವಾಯಿತು. ಒಂದೆರಡು ತಿಂಗಳು ಪ್ರಾಣಾಂತಿಕವಾದ ಕಾಯಿಲೆಯಲ್ಲಿ ನಲುಗಿಹೋದೆ. ಆಗಲೇ ನಾನು ಏಕೆ ಸಾಯಲಿಲ್ಲವೋ! ಅಂತೂ ನನಗೆ ಜ್ವರ ಬಿಟ್ಟಾಗ (ನಮ್ಮ ಕೆಲಸದವಳ ಮೂಲಕ ಮನು ಮದುವೆಯಾಗಲಿಲ್ಲವೆಂದೂ ನಾನು ಸತ್ತು ಹೋದೆನೆಂದು ನಮ್ಮ ತಾಯಿ ಹುಟ್ಟಿಸಿದ ವರ್ತಮಾನದಿಂದ ಅವನು ಅರೇ ಹುಚ್ಚನಾಗಿರುವನೆಂದೂ ತಿಳಿಯಿತು. ಅದೇ ದಿನ ರಾತ್ರಿ ನಾನು ಮನೆ ಬಿಟ್ಟು ಹೊರಟುಬಿಟ್ಟೆ. ಮನುವಿನ ಮನೆಗೆ ಹೋದೆ. ಅವನು ಹುಚ್ಚನಾಗಿ ಹೋಗಿದ್ದ. ಹುಚ್ಚಿನಲ್ಲಿ ಕಣ್ಣಿಗೇನೋ ಹಾಕಿಕೊಂಡಿದ್ದರಿಂದ ಎರಡು ಕಣ್ಣುಗಳೂ ದೃಷ್ಟಿಹೀನವಾಗಿದ್ದುವು. ನಮಗೆ ಕೊಟ್ಟು ಉಳಿದಿದ್ದ ಹಣವೂ ಖರ್ಚಾಗಿ ಹೋಗಿತ್ತು. ಆದರೆ ನನ್ನ ಹತ್ತಿರ ಮನು ಉತ್ತಮ ಸ್ಥಿತಿಯಲ್ಲಿದ್ದಾಗ ಕೊಟ್ಟ ಕೆಲವು ನಗಗಳಿದ್ದುವು. ಅವುಗಳನ್ನೆಲ್ಲಾ ಮಾರಿ ಮನುವಿಗೆ ಚಿಕಿತ್ಸೆ ಮಾಡಿಸಿದೆ. ಚಿಕಿತ್ಸೆಯಿಂದ ಅವನ ಹುಚ್ಚು ಸಂಪೂರ್ಣ ವಾಸಿಯಾಗದಿದ್ದರೂ ಕೆಲವು ವೇಳೆ ಅವನು ಸರಿಯಾಗಿರುತ್ತಿದ್ದ. ಆದರೆ ಅದರಿಂದ ಆಗಾಗ ಜ್ವರ ಬರುತ್ತಿತ್ತು. ಅಂತೂ ಮೊದಲಿನ ಮನುವನ್ನು ನನ್ನ ತಾಯಿ ಕೊಂದುಹಾಕಿಬಿಟ್ಟಿದ್ದಳು. ಮನುವಿನ ಆ ಸ್ಥಿತಿಯಲ್ಲಿ ನಾನವನೊಡನೆ ಹೆಚ್ಚು ಕಾಲ ನಿಲ್ಲಲಾರೆನೆಂದು ನನ್ನ ತಾಯಿ ಯೋಚಿಸಿದ್ದಳು. ಆದರೆ ಅವಳು ಕರೆಯುವಾಗ ನಾನು ಅವಳೊಡನೆ ಹೋಗುದಿದ್ದುದರಿಂದ ಅವಳಿಗೆ ತುಂಬಾ ಸಿಟ್ಟು ಬಂತು. ಅದರ ಮೇಲೆ ನಾನಲ್ಲಿರುವುದೇ ಕಷ್ಟವಾಯಿತು. ಕೊನೆಗೆ ನಾನು ಮನುವೂ ಊರುಬಿಟ್ಟು ಇಲ್ಲಿಗೆ ಬಂದುಬಿಟ್ಟೆವು. ದಿನಗಳು ಕಳೆದಂತೆ ಮನುವಿನ ಬುದ್ಧಿ ಸಂಪೂರ್ಣವಾಗಿ ಲೋಪವಾಗಿಹೋಯಿತು, ಏನೇನು ಮಾಡಿದರೂ ಅವನಿಗೆ ವಾಸಿಯಾಗಲಿಲ್ಲ. ಕೇವಲ ರಾಣಿ ಎಂದು ನನ್ನನ್ನು ಕೂಗುವುದಲ್ಲದೆ ಹೆಚ್ಚಿನ ಮಾತುಗಳನ್ನೇ ಆಡುತ್ತಿರಲಿಲ್ಲ. ಅದರವನಿಗೆ ನಾನು ಹತ್ತಿರವಿರುವುದು ತಿಳಿಯುತ್ತಿತ್ತು. ನಾನೆಲ್ಲಾದರೂ ಸ್ವಲ್ಪ ಅತ್ತಿತ್ತ ಹೋದರೆ 'ರಾಣಿ' ಎನ್ನುತ್ತಿದ್ದ. ಮೂರು ವರ್ಷಗಳಿಂದ ನಾವಿಬ್ಬರೂ ಈ ಮನೆಯಲ್ಲಿದ್ದೆವು. ಈಗ ಅವನಿಲ್ಲ. ಮತ್ತೆ ನನಗಿಲ್ಲೇನು ಕೆಲಸ?

ಡಾಕ್ಟ್ರೆ, ನಾನು ನಿಮಗಿದೆಲ್ಲ ಬರೆಯುತ್ತಿರುವೆನೇಕೆ? ಇಷ್ಟು ವರ್ಷಗಳಲ್ಲಿ ನಮ್ಮಿಬ್ಬರ ವಿಷಯದಲ್ಲಿ ಮನುಷ್ಯೋಚಿತವಾದ ಕರುಣೆಯಿಂದ ವರ್ತಿಸಿದವರು ನೀವು ಮತ್ತು ಸುಬ್ಬು ಇಬ್ಬರೇ, ಅದರಿಂದ ನಿಮಗೆ ಹೇಳಿ

ಹೋಗುವ ಸಲುವಾಗಿ ಇದನ್ನು ಬರೆಯಬೇಕಾಯಿತು. ನೀವು ಮನುವಿನ ಕೊನೆಗಾಲದಲ್ಲಿ ಮಾಡಿದ ಸಹಾಯ ಎಂದೂ ಮರೆಯುವಂತಿಲ್ಲ. ನನ್ನಂಥ ದರಿದ್ರ ಪ್ರಾಣಿ ನಿಮಗೆ ಯಾವ ಪ್ರತಿಫಲವನ್ನು ಕೊಡಬಲ್ಲದು? ದೇವರೇ ನಿಮಗೆ ಒಳ್ಳೆಯದನ್ನು ಮಾಡಬೇಕು.

………………...ರಾಜಮ್ಮ

ಓದಿ ಪಾರ್ವತಿಯ ಕೈಗೆ ಕೊಟ್ಟೆ. ಅವಳೂ ಓದಿದಳು. ಕಣ್ಣುಗಳೆರಡರಲ್ಲೂ ನೀರು ತುಂಬಿತ್ತು. 'ನಾನೆಂಥಾ ಪಾಪಿ' ಎಂದುಕೊಂಡಳು. ನನ್ನ ಮನಸ್ಸು ಏನೋ ಒಂದು ತರವಾಗಿತ್ತು. ಅದೂ ಪಾರ್ವತಿಯ ಮಾತನ್ನೇ ಹೇಳುವಂತೆ 'ನಾನೆಂಥಾ ಪಾಪಿ'

ಎಂದಿತು

ಆ ದಿನ ಸಾಯಂಕಾಲ ತಿರುಗಾಡಲು ಹೊರಡುವಾಗ ಪಾರ್ವತಿಯು ತಾನೂ ಬರುತ್ತೇನೆಂದಳು. ಇಬ್ಬರೂ ರಾಜಮ್ಮನ ಮನೆಗೇ ಹೋದೆವು. ಆದರೆ ನಾವು ಹೋಗುವ ಮೊದಲೇ ಅವಳು ಹೊರಟುಹೋಗಿದ್ದಳು.

ಎಲ್ಲಿಯೋ ಯಾರಿಗೆ ಗೊತ್ತು!

# 3.3 ಒಲುಮೆಹೊನಲ ತಡೆಗಳು

**ಪು.ತಿ. ನರಸಿಂಹಾಚಾರ್ಯ**

ಒಲುಮೆಹೊನಲಿಗಣೆಗಳೆಷ್ಟು–
ಹರಿಯ ಬಿಡದ ತಡೆಗಳು !
ಹೊನಲ ತಡೆವುವೇನು ಹಿತದಿ !
ಆದರೇನು ?– ತಡೆಗಳು !

ತಾಯಿ, ತಂದೆ, ಅಣ್ಣ, ತಮ್ಮ,
ಕೆಳೆಯ, ಸುತರು, ಪುತ್ರಿಯು,
ಬಾಳಿನರಕೆ ಪೂರ್ಣಗೈವ
ಸತಿಯು ಎಂಬ ತಡೆಗಳು !

ಜ್ವರದ ಬೇಗೆ ತಾಳದಂದು
ರೋಗಿ ನರಳಿ ಸುಯ್ದನು.
ಗಂಟಲೊಣಗಿ ದಾಹ ಹೆಚ್ಚೆ
ಹಣ್ಣನೊಂದ ಬಯಸುತ.

ಅಂದು ಮಡಿಲೊಳಿತ್ತು ಹಣ್ಣು

ಅರಸ ಮೆಚ್ಚುವಂಥದು,

ಅವನ ಬಯಕೆ ರೂಪುಗೊಂಡು

ಎನ್ನೊಳವಿತ ತೆರದಳು.

"ಎಂಥ ಮಗನು ! ಪ್ರೇಮ ಪ್ರತಿಮೆ !"

ಎಂದು ನಲಿವ ತಾಯನು

ನೆನೆದು, ಕೇಳಿದಷ್ಟು ಬೆಲೆಯ

ಕೊಟ್ಟು ಕೊಂಡ ಸೇಬದು.

ರೋಗಿಯರಿಯ ಹಣ್ಣಿ ನಿರವ;

ನರಳಿ ಸುಯ್ದು ಬಯಸುತ.

ಅವನ ಸಹಿಸದಳಲ ಕಂಡು

ತುಡಿದುದೆನ್ನ ಹೃದಯವು

ಮಡಿಲೊಳಿಟ್ಟೆ ಕೈಯ– ತಾಯ

ನೆನಪು ತಡೆದುದೆನ್ನನು;

ಪ್ರೇಮ ತುಂಬಿ ಕಣ್ಣೊಳವಳು

ಹರಸಿ ನಲಿವ ಚಿತ್ರವು.

" ವರುಷಕೊಮ್ಮೆ ನೋಡಹೋಗಿ

ಬರಿಯ ಕೈಯ ತೋರಲೆ?

ಎಂಥ ಹಣ್ಣು; ಹಿಗ್ಗುತೆಷ್ಟು

ಸವಿವಳೆನ್ನ ತಾಯಿಯು !"

ಕೈಯ ತೆಗೆದೆ ಕಿವಿಯೊಳಿರಿಯಿ–

ತವನ ಕೂಗು ಬೇಗೆಯ;

ತಿರುಗಿ ಕೈಯ ಮಡಿಲೊಲಿಟ್ಟೆ;

ತಿರುಗಿ ತೆಗೆದೆ– ಬರಿದನು!

ಇಂತು ಭಾವವೆರಡು ತುಮುಲ–

ವೆದ್ದು ವೆನ್ನ ಮನದೊಳು;

"ತಾಯನೊಲಿಸಲೇನು?– ರೋಗಿ–

ಗಿತ್ತು ಬೇಗೆಯಳಿಸಲೆ ?"

ಹಣ್ಣ ತಿಂದು ತಾಯಿ ಪಡೆವ

ಹಿತವ ಬಲ್ಲೆ– ಎನ್ನದು.

ರೋಗಿ ಸವಿದು, ಬೇಗೆಯಡಗೆ

ಪಡುವ ಹಿತವ ಬಲ್ಲೆನೆ ?

ದ್ರಾಕ್ಷಿಯನ್ನೊ ಕಿತ್ತಳೆಯನೋ
ರೋಗಿಗೀಯೊ" ಎನ್ನುತ
ಆಳಿಗೆಸೆದೆ ಮೂರು ದುಡ್ಡ;
ಮಡಿಲ ಹಣ್ಣ ಮರೆಸಿದೆ.

ಅಂದಿನಿರುಳು ಊರ ಸೇರಿ
ಕಂಡೆ ನೆನ್ನ ತಾಯನು.
ಹಣ್ಣ ನೀಯೆ ಕಂಗಳರಳಿ
ನಗೆಯ ಸೂಸೆ, ನಲಿದೆನು.

ಹಣ್ಣ ತಿಂದೆವಿಬ್ಬರಂದು–
ಅರಸ ಮೆಚ್ಚು ವಂಥದ.
ರೋಗಿಗೀಯಗೊಡದ ಮೋಹ
ಮಾಯವಾಯ್ತು ಕ್ಷಣದೊಳು.

ಶಯನವೇರಿ ಕುಳಿತೆ– ಮನಕೆ

ಮರಳಿತಂದಿನನುಭವ.
ಹಣ್ಣ ಸವಿಯೆ ಹೆಚ್ಚು ಹಕ್ಕು
ರೋಗಿಗಿತ್ತು ಎನಿಸಿತು.

ಅಮ್ಮ ಪ್ರೇಮವೆರೆಯುತೆನ್ನ
ಬಾಳಿಗರ್ಥವೀವಳು.
ಅವಳ ಸುಖವ ಸವಿಯಬಲ್ಲೆ,
ಅಳಲನೆನ್ನ ದೆಂಬೆನು.

ಇಂಥ ಪ್ರೇಮ ಮೋಹ ಹರಿಯೆ
ಮಮತೆ ಕಟ್ಟ ಚಿಗಿಯಲು
ಎಷ್ಟು ಸುಲಭವಾಗುತ್ತಿತ್ತು
ರೋಗಿಯಳಲು ನನ್ನದು !

ಒಲುಮೆಹೊನಲಿಗಣೆಗಳೆಷ್ಟು–
ಹರಿಯ ಬಿಡದ ತಡೆಗಳು !
ಹೊನಲ ತಡೆವುವೆಷ್ಟು ಹಿತದಿ!
ಆದರೇನು?– ತಡೆಗಳು !

# ೩.೪ (ಓದುಪಠ್ಯ) ಹಾಗಾದರೆ ಮಾರಿಬಿಡಿ

**ಎಂ. ಆರ್. ಕಮಲ**

ಅಮ್ಮನ ಒಂದು ಜೊತೆ ಬಂಗಾರದ ಬಳೆ
ಅವಳ ಬದುಕಿನಂತೆಯೇ ನವೆದು, ಸವೆದು
ಬಣ್ಣ ಕಳೆದುಕೊಂಡು ಕೊನೆಗೀಗ ಮುರಿದೇ ಹೋಗಿದೆ
'ಮಾರಿಬಿಡಿ'.. ಯಾರೋ ಟಿವಿಯಲ್ಲಿ ಅರಚುತ್ತಿದ್ದಾರೆ!

ಮಾರಬಹುದೇ ಅವಳ ಬಳೆ ತೊಟ್ಟ ಸಂಭ್ರಮವನ್ನು
ಕಾಸಿಗೆ ಕಾಸು ಕೂಡಿಟ್ಟುಕೊಂಡ ಚಿನ್ನಗನಸನ್ನು
ಗಾಜು ಬಳೆಗಳ ನಡುವೆ ಫಳಪಳಿಸಿದ ಆಸೆಯನ್ನು
ಹಬ್ಬವೋ, ತಿಥಿಯೋ, ಸೌಟು ಹಿಡಿದಾಗೆಲ್ಲ ಮಿರುಗಿದ್ದನ್ನು
ಒನಕೆಯಲ್ಲಿ ಕುಣಿದು, ಬೀಸುವ ಕಲ್ಲಿನೊಂದಿಗೆ ಸುತ್ತಿ,
ನೀರೆಳೆವಾಗ ಕೊಡದಂತೆ ಜಾರಿ ಮೇಲೆ ಬಂದಿದ್ದನ್ನು
ನೋವು– ನಲಿವು, ಮದುವೆ– ಮಸಣಕ್ಕೆ ಸಾಕ್ಷಿಯಾಗಿದ್ದನ್ನು
ಮಕ್ಕಳಿಗೆ ಬಳೆಯ ಜೊತೆ ರವಾನಿಸಿದ ಕೆಲಸದ ಹುಚ್ಚನ್ನು?

ಹಳೆಮನೆ ಸೋರುತ್ತಿದೆ, ಹೆಂಚು ಹಾರಿಹೋಗಿದೆ
ನೆಲ ಕರೆಗಟ್ಟಿದೆ, ಗೋಡೆ ಬಿರುಕು ಬಿಡುತ್ತಿದೆ
ಅಂಗಳದ ವೃಂದಾವನ ಮುರಿದೇ ಬಿದ್ದಿದೆ
'ಮಾರಿಬಿಡಿ' ಯಾರೋ 'ಟಿವಿ'ಯಲ್ಲಿ ಅರಚುತಿದ್ದಾರೆ!

ಮಾರಬಹುದೇ ಪುಟ್ಟ ಹೆಜ್ಜೆಗಳಿಟ್ಟಿದ್ದ ಖುಷಿಯನ್ನು
ತೊದಲಿನ ಮೊದಲನ್ನು, ಎಡವಿ ಬಿದ್ದು ಎದ್ದಿದ್ದನ್ನು
ಹಿತ್ತಲಿನ ನಿಂಬೆ, ದಾಳಿಂಬೆ, ಕರಿಬೇವಿನ ಘಮವನ್ನು
ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಕರುವಿನ ಕರೆಯನ್ನು
ಬೇರು ಬಿಟ್ಟು ಬೇರಾದರೂ ಬೇರಾಗದ ಕಳ್ಳುಬಳ್ಳಿಗಳನ್ನು
ಅಂಗಳದಲ್ಲಿ ಹರಿದ ಬೆಳುದಿಂಗಳ ಹೊಳೆಯನ್ನು
ಜಗಲಿಕಟ್ಟೆಯ ಮಾತಲ್ಲಿ ಹುಟ್ಟಿ ಕಟ್ಟಿದ ಜಗತ್ತನ್ನು?

ಅತ್ಯಾಚಾರ, ದುರಾಚಾರ, ಮಾನಭಂಗ, ಶೀಲಭಂಗ…
ಬರಿಸಬಹುದೇ ಹೆಂಗೂಸುಗಳು ಇಂಥ ಪದಭಾರವನ್ನು?
'ದೇಹ ಮಾರುವುದ ಕಾನೂನುಬದ್ಧಗೊಳಿಸಿ'- ಕಿರುಚುತ್ತಾರೆ
ಮಾರುವ ಮಾರಿ ಹೊಕ್ಕಿದ್ದು ನಿನ್ನೆ ಮೊನ್ನೆಯೇನಲ್ಲ

‘ಪತಿಗಳೆನ್ನನು  ಮಾರಿ ಧರ್ಮಸ್ಥಿತಿಯ ಕೈಗೊಂಡರು’

ಎಂದು ಪಾಂಚಾಲಿಯ ಕೊರಳು ಒರಲಿದಷ್ಟೇ

ಚಂದ್ರಮತಿ ಹರಾಜು ಕಟ್ಟೆಯಲಿ ನಿಂತಷ್ಟೇ ಹಳೆಯದು !

ಆದರೂ ಮಾರಬಹುದೇ ನೀವು ಅವಳ ಘನತೆಯನ್ನು

ಕಟ್ಟುಪಾಡಿಲ್ಲದೇ ಕಟ್ಟಿಹಿಡಿದ ತಾಯ್ತನದ ಮಮತೆಯನ್ನು?

# 4 ಸಂಕೀರ್ಣ


1 ರೆಸಿಪಿ ಟಿ.ಪಿ. ಕೈಲಾಸಂ

2 ಧಾರವಾಡದ ಪಡ್ಡೆ ದಿನಗಳು ರಾಜೇಂದ್ರ ಚೆನ್ನಿ

3ಯಾರು ಅರಿಯದ ವೀರ -ಕುವೆಂಪು

4 (ಒದುಪಠ್ಯ) ಸಂಕ್ರಾಂತಿ

(ಉಷಾ ಮತ್ತು ರುದ್ರರ ಪ್ರೇಮ ಪ್ರಕರಣ) - ಪಿ. ಲಂಕೇಶ್

# 4 ಸಂಕೀರ್ಣ

## ಆಶಯ:

.

ಧಾರವಾಡ ಅಂದ ತಕ್ಷಣ ನಿಮಗೆ ಏನು ಜ್ಞಾಪಕ ಬರುವುದು? ಧಾರವಾಡ ಅಂದರೆ ಪೇಡ, ಖಾನಾವಳಿಗಳು, ಬೇಂದ್ರೆಯವರ ಸಾಧನ ಕೇರಿ, ಕರ್ನಾಟಕ ವಿಶ್ವವಿದ್ಯಾನಿಲಯ, ಹಿಂದುಸ್ತಾನಿ ಸಂಗೀತದ ಅತಿರಥ ಮಹಾರಥರಾದ ಪಂಡಿತ್ ಭೀಮಸೇನ್ ಜೋಷಿ, ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್, ಕೆಲವು ಸ್ಮಾರಕಗಳು, ತಿಂಡಿಗಳು ಜ್ಞಾಪಕಕ್ಕೆ ಬರಬಹುದು.

ಇಲ್ಲಿ ಬರುವ ಧಾರವಾಡದ ಪಡ್ಡೆಹುಡುಗರು ಮೇಲ್ನೋಟಕ್ಕೆ ಚೆನ್ನಿಯವರ ಆ ಕಾಲದ ಗೆಳೆಯರಾಗಿದ್ದರೂ ಕೂಡ ಇದು ಇಂದಿನ ಪಡ್ಡೆಹುಡುಗರು ಓದಿದರೂ ಸ್ವತಃ ತಾವೇ ಆ ರೀತಿಯೆಲ್ಲಾ ಮಾಡುತ್ತಿದ್ದೆವಲ್ಲವೇ ಎಂದು ತಮ್ಮನ್ನು ತಾವೇ ಪ್ರಶ್ನೆ ಮಾಡಿಕೊಳ್ಳುವಂತಾಗುತ್ತದೆ. ಪ್ರತಿಯೊಬ್ಬ ವಿದ್ಯಾವಂತನೂ ತನ್ನ ಪ್ರೌಢಶಾಲಾ ಅಥವಾ ಕಾಲೇಜು ದಿನಗಳಲ್ಲಿ ಹಲವಾರು ಪೋಲಿ ಆಟಗಳನ್ನಾಡಿರುತ್ತಾರೆ. ಕದ್ದು ಬೀಡಿ ಅಥವಾ ಸಿಗರೇಟು ಸೇದಿರುತ್ತಾರೆ. ಆಲ್ಕೋಹಾಲ್ ಸೇವಿಸಿರಲೂಬಹುದು. ಹುಡುಗಿಯರಿಗೆ ರಹಸ್ಯ ಪ್ರೇಮ ಪತ್ರ ಕೊಟ್ಟಿರುತ್ತಾರೆ. ಕೆಲವೊಮ್ಮೆ ಪ್ರೇಮಪತ್ರ ಯಾರಿಗೂ ಕೊಡಲು ಹೋಗಿ ಮತ್ಯಾರಿಗೋ ತಲುಪಿರಬಹುದು. ತಲುಪಿ ಏಟನ್ನು ತಿಂದಿರಬಹುದು. ಕೆಲವೊಮ್ಮೆ ಅಧ್ಯಾಪಕರಿಗೋ ಅಥವಾ ಹುಡುಗಿಯರಿಗೋ ಕಾಗದದ ರಾಕೇಟ್ ಮಾಡಿ ಉಡಾವಣೆ ಮಾಡಿರುತ್ತಾರೆ. ಆ ಕಾರಣದಿಂದ ಇದು ನಮ್ಮೆಲ್ಲರ ಅನುಭವವೂ ಆಗಿರಬಹುದು.

ರೆಸಿಪಿ ಗಾಂಧೀಜಿಯವರ ಸರಳ ಬದುಕಿಗಿಡಿದ ಕನ್ನಡಿಯಾದರೆ ತನ್ನ ಯಜಮಾನ ಅಥವಾ ಬೇರೆಯವರ ಹಿತಕ್ಕೋಸ್ಕರ ತನ್ನ ಬದುಕನ್ನೇ ಸಮರ್ಪಿಸಿಕೊಳ್ಳುವ ವ್ಯಕ್ತಿಗಳು ಈ ಭೂಮಿಯ ಮೇಲೆ ಇನ್ನೂ ಇದ್ದಾರೆ ಎಂಬುದನ್ನು ತಿಳಿಸುವ ಕಥೆ ‘ಯಾರೂ ಅರಿಯದ ವೀರ.’

# 4.1 ರೆಸಿಪಿ (ನಮ್ಮ ಬಾಪೂ)

- ಟಿ.ಪಿ ಕೈಲಾಸಂ. (ಅನುವಾದ : ಜಿ. ಪಿ. ರಾಜರತ್ನಂ)

ಒಂದೆ ಹಿಡಿಮೂಳೆ ಚಕ್ಕಳ ಅಷ್ಟೆ; ಅದಕೆ ಸುರಿ

ಮೂರುನಾಲ್ಕೋ ಚಮಚ ರಕ್ತ, ಮಾಂಸ ಜೊತೆಗಿರಿಸು

ಪಾಪವಂ ನೆರೆತೊರೆದ ಕಡಲಿನಾಳದ ಮನಸ,

ನೆರೆಬಂದ ಕಡಲಿನೊಲ್ ಪ್ರೇಮಮಂ ತುಂಬಿದೆದೆಯ;

ಹಚ್ಚು–ಮೊರಕಿವಿಯೆರಡ, ಎರಡು ಪಿಳಿಪಿಳಿ ಕಣ್ಣ;

ಹಾಲುಹಸುಳೆಯ ಮಂದಹಾಸವನು ಲೇಪಿಸದಕೆ,

ಒಳಗಿರಿಸು, ಜೇನು ನಗುವವೊಲಿನಿಯ ನಾಲಿಗೆಯ

ಮೇಣ್ ಹಿಮಗಿರಿಯ ಮೀರಿಸಿ ನಿಮಿರ್ದ ಹಿರಿಯಾತ್ಮವ.

ಪೂರಣವೊ? ಸೋಯಾಬೀನ್ಸ್, ಖರ್ಜೂರ , ಮೇಕೆ ಹಾಲು!

ಮೇಲಿನಂಚಿನವರೆಗು ದುಃಖಗಳ ಕಣ್ಣೀರು ತುಂಬಿ

ಪಕ್ವಮಾಡೀ ಇದನು ಸೆರೆಮನೆಯೊಳೊಂದಿನಿತು ವರುಷ

ಹೊರಗೆ ತಗೆ ಪರಯ ಪರಿವಾರದಿಂ ಗಮಗಮಿಸಗೊಳಿಸಿ,

ಚಿಂದಿಯಂ ಸುತ್ತಿ, ಸೆಳಬೊಂಬಿನಾಲಂಬವನ್ನಿತ್ತು

ಬಡಿಸುತಾ ! ಅವನೆ ಕಾಣ್! ಲೋಕತಾರಕ ! ನಮ್ಮ ಬಾಪೂ!

## 4.2 ಧಾರವಾಡದ ಪಡ್ಡೆ ದಿನಗಳು

**– ಡಾ.ರಾಜೇಂದ್ರ ಚೆನ್ನಿ**

**ನಾರಿ ಬಂದಳು ನೀರಿಗೆ ಬೆಂಕಿ ಹತ್ತಿತು ದಾರಿಗೆ..**

ಧಾರವಾಡದಲ್ಲಿ ನಮ್ಮ ಮನೆ ಇದ್ದದ್ದು ಗೌಳಿದೊಡ್ಡಿಯಲ್ಲಿ. ಗೌಳಿ ಗುಡಿಸಲುಗಳ ತುದಿಗೆ ರೇಲ್ವೆ ಹಳಿಗಳ ಪಕ್ಕದ ದಿನ್ನೆಯ ಮೇಲೆ. ಹಳಿ ದಾಟಿ ಆಚೆಗೆ ಹೋದರೆ ಅತ್ತಿಕೊಳ್ಳ. ಬೇಂದ್ರೆ 'ಬೆಳಗು' ಪದ್ಯ ಬರೆದದ್ದು ಅತ್ತಿಕೊಳ್ಳದ ಸುಂದರ ಮುಂಜಾವಿನ ಬಗ್ಗೆ. ರೇಲ್ವೆ ಗೇಟು ದಾಟಿಕೊಂಡು ಗುಡ್ಡ ಇಳಿದು ಕಾಲುದಾರಿಯಲ್ಲಿ ಹೋದರೆ ಅವರ 'ಸಣ್ಣ ಸೋಮವಾರ' ದ ಸೋಮೇಶ್ವರ ಗುಡಿ. ನಮ್ಮ ಪಡ್ಡೆ ದಿನಗಳಲ್ಲಿ ಅಂದರೆ ಸುಮಾರು ಮೂವತ್ತೈದು ವರ್ಷದ ಹಿಂದೆ ಸೋಮೇಶ್ವರ ಗುಡಿಯ ಪರಿಸರ 'ಸಣ್ಣ ಸೋಮವಾರ' ದಲ್ಲಿಯ ವರ್ಣನೆಯ ಹಾಗೆಯೇ ಇತ್ತು.

ಆ ದಿನಗಳಲ್ಲಿ ನಮಗೆ ಬೇಂದ್ರೆಯವರ ಬಗ್ಗೆ ತಿಳುವಳಿಕೆಗಿಂತ ಅಸಡ್ಡೆಯೆ ಜಾಸ್ತಿ. ಏಕೆಂದರೆ ಅರವಿಂದರು, ಸಾಯಿಬಾಬಾ ಇವರ ಭಜನೆ ಮಾಡುತ್ತಾ ಹುಸಿ ಅಧ್ಯಾತ್ಮದ ಪೋಜು ಕೊಡುತ್ತಿದ್ದ ಶಿಷ್ಯರ ಗುಂಪು ಬೇಂದ್ರೆಯವರನ್ನು ಕಬಳಿಸಿಕೊಂಡು ಬಿಟ್ಟಿತ್ತು. ನಿಜ ಹೇಳಬೇಕೆಂದರೆ ಆ ದಿನಗಳಲ್ಲಿ ನಮಗೆ ಬೇಂದ್ರೆ ಶೇಕ್ಸಪಿಯರ್ ಯಾರೂ ಬೇಕಿರಲಿಲ್ಲ. ಧಾರವಾಡದ ಎಲ್ಲಾ ಗಲ್ಲಿಗಳಲ್ಲಿ ಪೋಲಿ ಅಲೆಯುವುದು ಮತ್ತು ನಾವು ಪ್ರೀತಿಸುತ್ತಿದ್ದ ಹುಡುಗಿಯರಿಗೆ ಹಾಗೆಂದು ಹೇಳಲಾಗದೆ ಮುಕೇಶನ 'ದರ್ದಭರೀ' ಹಾಡುಗಳನ್ನು ಕರ್ಕಶವಾಗಿ ಗುಣಗುಣಿಸುವುದನ್ನು ಬಿಟ್ಟರೆ ಯಾವುದೂ ಬೇಕಿರಲಿಲ್ಲ. ಮನೆಯ ಹತ್ತಿರದಲ್ಲಿದ್ದ ಹುಡುಗಿಯರು ಅಪ್ಪಟ ಕೃಷ್ಣನ ರಾಧೆಯರು. ನಮ್ಮ ಪಡ್ಡೆ ಕನಸುಗಳನ್ನು ಬೆಚ್ಚಗಿರಿಸುತ್ತಿದ್ದರು.

ಒಂದು ದಿನ ಬೆಳಿಗ್ಗೆ ನಾವು ಗೌಳಿದೊಡ್ಡಿಯ ಕಾಲುದಾರಿ ಹಿಡಿದು ಆಮೇಲೆ ದೇಸಾಯಿ ಕಾಂಪೌಂಡ್ ಏರಿ ಹತ್ತಿ ಬಲಕ್ಕೆ ಹೊರಳಿ ಸಾರಸ್ವತಪುರದ ದಿನ್ನೆಗಳನ್ನು ಏರಿ 'ವಾಕ್ ಮಾಡುತ್ತಿದ್ದೆವು', 'ವಾಕ್' ಎಂದು ಮನೆಯಲ್ಲಿ ಹೇಳಿದ್ದರೂ ಮುಖ್ಯ ಉದ್ದೇಶವೆಂದರೆ ತೀಸ್ ನಂಬರ್ ಬೀಡಿ ಸೇದುವುದೇ ಆಗಿತ್ತು. ಮತ್ತು ಬೀಡಿ ಸೇದುತ್ತ ಪಂಟು ಹೊಡೆಯುವುದಾಗಿತ್ತು.

ಅಷ್ಟರಲ್ಲಿ ನಮ್ಮ ಟೋಳಿ ಗಿರೀಶ ಕಾರ್ನಾಡರ ಮನೆಯ ಹತ್ತಿರ ಬಂದಿತ್ತು. ಗಕ್ಕನೆ ನಿಂತವನೆ ಅಪ್ಪಿ ಶುರುಮಾಡಿದ: 'ಇನ್ ಮ್ಯಾಲಿಂದ್ ದಿನಾ ಇಲ್ಲೇ ವಾಕ್ ಮಾಡೊಣ ಪಾ' 'ಅದ್ಯಾಕ? ಈ ಸಾರಸ್ವತಪುರದ ದಿನ್ನಿ ಹತ್ತೂದರಾಗ ದಮ್ಮ ಹತ್ತತೈತಿ. ಆಮ್ಯಾಲೆ ಬೀಡಿ ಎಳಿಯಾಕ ದಮ್ಮ ಇರೂದಿಲ್ಲ' ಜಾಡರ ಗೊಣಗಿದ. 'ಮಗನ, ಪೇಪರ್ನ್ಯಾಗ ಓದಿಲ್ಲೇನು? ಅಕಿ ಕನಸಿನ ಕನ್ಯಾ ಅದಾಳಲ್ಲಾ ಹೇಮಾಮಾಲಿನಿ ಅಕಿ ಧಾರ್ವಾಡದ ಸೊಸಿ ಆಕ್ತಾಳಂತ. ಈ ಮನೀ ಸೊಸಿ ಆಗಿ ಬರ್ತಾಳಂತ. ಇದೆಲ್ಲಾ ಓದೂದು ಬಿಟ್ಟು ನೀ ಇಂದ್ರಾ ಗಾಂಧಿ ಬಗೇಗ ಓದತೀ ಏನೋ ಮುಲ್ಲಾ' ಎಂದು ಅಪ್ಪಿ, ಛೇಡಿಸಿದ.'ಇವನಾಪನ, ಹೌದಲ್ಲೋ ಗಿರೀಶ ಕಾರ್ನಾಡರು ಹೇಮಾ ಮಾಲಿನೀನ ಲಗ್ನಾ ಆಗ್ತಾರಂತ ಪೇಪರನಾಗ ಭಾಳ ಸುದ್ದೀ ಬರಾಕತ್ತಾವು. ಲಗ್ನ ಆತೂ ಅನಕೋ. ಅಕೀ ಸಿನೀಮಾ ಮಾಡೋದು ಬಿಟ್ಟು ಇಲ್ಯಾಕ ಬರತಾಳಲೇ. ಇನ್ನೂ ಇವರ ಬಾಂಬೆಗೆ ಹೋಗ್ತಾರೇನೋ!''ಹಂಗಲ್ಲ, ಈ ಮನೀ ಸೊಸಿ ಆದಮ್ಯಾಲ ಯಾವಾಗಲೂ ಇಲ್ಲದಿದ್ದರೂ ದೀಪಾವಳಿ ಗಣೇಶ ಚವತಿ ಹಬ್ಬಕ್ಕರ ಬರಬೋದು.''ಬಂದಳು ಅನಕೋ. ನಾವು ರಾತ್ರಿ ಪಾಳೇ ಪೋಲೀಸ್ರಂಗ ಈ ಮನೀ ಮುಂದ ವಾಕ್ ಮಾಡ್ತೀವಿ ಅನಕೋ.ಆದರ ಕನಸಿನ ಕನ್ಯಾ ನಮಗ ಕಾಣತಾಳ ಅಂತ ಏನ ಗ್ಯಾರಂಟೀ?' ಎಂದು ಜಾಡರ ಹತಾಶೆಯಲ್ಲಿ ನಿಟ್ಟುಸಿರಿಟ್ಟ.

'ಮಗನ, ಸ್ವಲ್ಪ ತಲೀ ಓಡಿಸಲೇ. ಅಕೀ ಹೇಳಿ ಕೇಳಿ ಬ್ರಾಂಬ್ರ ಹೆಣಮಗಳು. ಹಿಂದೀ ಸಿನೇಮಾದಾಗ ಮಾಡಿದರೇನಂತ, ಹುಟ್ಟಿನಿಂದ ಪಕ್ಕಾ ತಮಿಳು ಬ್ರಾಂಬ್ರ ಹುಡುಗಿ. ಅವರ ಮನ್ಯಾಗ ಪದ್ಧತೀ ಹೇಳಿಕೊಟ್ಟಿರತಾರ. ಬೆಳಿಗ್ಗೆದ್ದು ಅಂಗಳಾ ಗುಡಿಸಿ ನೀರ್ ಹಾಕಿ ರಂಗೋಲಿ ಇಡೋದನ್ ಹೇಳಿಕೊಟ್ಟಿರತಾರ. ನಾವಿಲ್ಲಿ ವಾಕ್ ಮಾಡಕೊಂಡು ಬರ್ತೀವಿ ಅನಕೋ. ನಮ್ ನಸೀಬು ಖೊಟ್ಟಿ ಇಲ್ದಿದ್ದರ ಯಾವತ್ತಾರ ಒಂದಿನಾ ಕನಸಿನ ಕನ್ಯಾ ಕೈಯಾಗ ಕಸಬರಗಿ ಹಿಡಕೊಂಡು ಅಂಗಳಾ ಗುಡಿಸೋವಾಗ ನಮ್ಮ ಕಣ್ಣಿಗ ಬೀಳೂದಿಲ್ಲ ಅಂತೀಯನ?'ಕನಸಿನ ಕನ್ಯೆ ಅಂಗಳ ಗುಡಿಸುವಾಗ ದೊಡ್ಡ ಕಂಪೌಡಿನ ಆ ಮನೆಯ ಗೇಟುಗಳ ಕಂಬಿಗಳ ಮಧ್ಯದಿಂದ ನಮ್ಮ ಕಣ್ಣಿಗೆ ಬೀಳಬಹುದೆಂಬ ಆಸೆಯಿಂದ ನಮ್ಮ ಪಡ್ಡೆ ಹೃದಯಗಳು ಬಡಿದುಕೊಂಡವು. 'ನಾರಿ ಬಂದಳು ನೀರಿಗೆ ಬೆಂಕಿ ಹತ್ತಿತು ದಾರಿಗೆ' ಎಂದು ಕನಸು ಕಾಣುತ್ತಾ ಎಲ್ಲಾ ಚಲನಚಿತ್ರ ಪತ್ರಿಕೆಗಳನ್ನು ಶ್ರದ್ಧೆಯಿಂದ ಓದುತ್ತಾ, ವಾಕ್ ಮಾಡುತ್ತಲೇ ಇದ್ದೆವು. ಕೆಲವು ದಿನಗಳ ನಂತರ ಕನಸಿನ ಕನ್ಯೆ ಹೇಮಾಮಾಲಿನಿ ಧಾರ್ವಾಡದ ಸೊಸೆಯಾಗುವುದಿಲ್ಲ ಎಂದು ಖಾತ್ರಿಯಾಯಿತು. ನಮ್ಮ ಪಡ್ಡೆ ಹೃದಯಗಳು ಒಡೆದು ಚೂರಾಗಿ ಅತ್ತಿಕೊಳ್ಳ, ಗೌಳಿದೊಡ್ಡಿ ಮತ್ತು ಸಾರಸ್ವತಿ ಮರದ ದಿನ್ನೆಯ ಮೇಲೆ ಬಿದ್ದವು.

**ಹೋಳಿಯ ಬಣ್ಣಗಳ ಹುಚ್ಚುಹೊಳೆ**

`ಏಳರಿ ಸರ$…ಹೋಳಿ ಹಬ್ಬದ ದಿನ ಇನ್ನೂ ಮಲಕೊಂಡಿದ್ದರ ಹ್ಯಾಂಗ` ಎಂದು ಅಪ್ಪಿ ನನ್ನನ್ನು ಎಬ್ಬಿಸಿದ. ಸೆಖೆಯ ದಿನಗಳಾದ್ದರಿಂದ ಮನೆಯ ಮುಂದೆ ಹೊರಗೆ ಇಟ್ಟಿದ್ದ ಹೊರಸಿನ ಮೇಲೆ ಮಲಗಿದ್ದೆ. ಬೆಳಗಿನ ಜಾವ ಇಬ್ಬನಿ ಬೀಳತೊಡಗಿದಾಗ ಯಾವಾಗಲೋ ಅವ್ವ ಕೌದಿ ಹೊದಿಸಿ ಹೋಗಿದ್ದಳು. ಅದರೊಳಗೆ ಬೆಚ್ಚಗೆ ಮಲಗಿದ್ದವನು ಕಷ್ಟಪಟ್ಟು ಕಣ್ಣುಬಿಟ್ಟು ನೋಡಿದರೆ ಆಗಲೇ ಅಪ್ಪಿಯ ಮುಖದ ಮೇಲೆ ಅಂಡಬಂಡ ಬಣ್ಣಗಳ ಸಂತೆಯೇ ನೆರೆದಿತ್ತು. ಹೋಳಿ ಶುರುವಾಗಿಬಿಟ್ಟಿದೆ ಎಂದು ಖುಷಿಯಿಂದ ಎದ್ದೆ.

ತಡವಾಗಿ ಎದ್ದಿದ್ದು ಯಾಕೆ ಅಂದ್ರೆ ಹಿಂದಿನ ಎರಡು–ಮೂರು ರಾತ್ರಿಗಳು ಕುಳ್ಳು ಕದಿಯುವುದರಲ್ಲಿ ಕಳೆದಿದ್ದೆವು. ಹೋಳಿ ಹುಣ್ಣಿಮೆಯಂದು ಸುಡಲು ಕಾಮನನ್ನು ನಿಲ್ಲಿಸಲು ಹತ್ತಿರದ ಎಲ್ಲಾ ಮನೆಗಳಿಂದ `ಕುಳ್ಳು` (ಸೆಗಣಿಯಿಂದ ತಟ್ಟಿದ ಬೆರಣಿ) ಕದಿಯುವುದು ಸಂಪ್ರದಾಯ. ರಾತ್ರಿಯಾದ ಮೇಲೆ ಹಲವಾರು ಟೋಳಿಗಳು ಹೊಂಚು ಹಾಕುತ್ತಾ ಮನೆಗಳ ಕಾಂಪೌಂಡ್ ಮತ್ತು ಹಿತ್ತಲುಗಳ ಸುತ್ತ ಗಸ್ತು ಹೊಡೆಯುತ್ತಿದ್ದೆವು. ಟೋಳಿಗಳನ್ನು ಓಡಿಸಲೆಂದು ದೊಡ್ಡ ಕೋಲುಗಳನ್ನು ಇಟ್ಟುಕೊಂಡು ಕಾವಲು ಕಾಯುತ್ತಿದ್ದವರನ್ನು, ಅವರ ನಾಯಿಗಳನ್ನು ಎದುರಿಸಿ ಕುಳ್ಳು ಕದಿಯುವುದು ನಮಗೆ ರೋಮಾಂಚಕ ಸಾಹಸವಾಗಿತ್ತು.

ಕುಳ್ಳು ಎಂದರೆ ಸೆಗಣಿಯಿಂದ ತಟ್ಟಿದ ಕುಳ್ಳು ಮಾತ್ರವಲ್ಲ. ಶೇಖರಿಸಿಟ್ಟಿದ್ದ ಸೌದೆ, ಕಾಂಪೌಂಡ್‌ಗಳಿಗೆ ಬಳಸಿದ್ದ ಕಟ್ಟಿಗೆ ಕೋಲುಗಳು, ಹಳೆಯ ಬಾಗಿಲುಗಳು ಎಂದು ಭಾಷಾಂತರಿಸಿಕೊಂಡಿದ್ದ ನಾವು ನಮ್ಮ ಓಣಿಯ ಕಾಮಣ್ಣನಿಗಾಗಿ ಎಲ್ಲ ಮನೆಗಳಿಂದ ನಿರ್ದಯವಾಗಿ ಲೂಟಿ ಮಾಡುತ್ತಿದ್ದೆವು. ಮನೆಯವರು ಅಟ್ಟಿಸಿಕೊಂಡು ಬರುತ್ತಿದ್ದಾಗ ಒಂದಿಬ್ಬರು ಕಾಂಪೌಂಡ್ ಹಾರಿ ಕೈಗೆ ಸಿಕ್ಕಿದ್ದನ್ನೆಲ್ಲಾ ಸೆಳೆದುಕೊಂಡು ಓಡುತ್ತಿದ್ದರು. ಕದ್ದಿದ್ದನ್ನು ರಿಲೇ ರೇಸ್‌ನಂತೆ ಕೈಯಿಂದ ಕೈಗೆ ದಾಟಿಸಿಕೊಂಡು ಕಾಮಣ್ಣನಿಗೆ ಜೋಡಿಸುತ್ತಿದ್ದೆವು. ಅದರಲ್ಲೂ ಮಾಳಮಟ್ಟಿಯ ತಗ್ಗುದಿನ್ನೆಗಳ, ಹಳೆಯ ಕಾಲದ ದೊಡ್ಡ ಕಾಂಪೌಂಡ್‌ಗಳಿದ್ದ ಮನೆಗಳ ಪ್ರದೇಶ ನಮಗೆ ಹೇಳಿ ಮಾಡಿಸಿದಂತಿತ್ತು. ಅಲ್ಲದೇ ಅಲ್ಲಿಯ ಮನೆಗಳಲ್ಲಿಯ ಕುಟುಂಬಗಳ ಸಮಸ್ತ ವ್ಯವಹಾರಗಳು, ಹಗರಣಗಳು ನಮಗೆ ಗೊತ್ತಿದ್ದರಿಂದ ಅದನ್ನುಆಧರಿಸಿದ ಟಿಪ್ಪಣಿಗಳನ್ನು ರಾತ್ರಿಯ ನಿಶ್ಯಬ್ದದಲ್ಲಿ ಎಲ್ಲರೂ ಕೇಳುವಂತೆ ಗಟ್ಟಿಯಾದ ದನಿಯಲ್ಲಿ ಕೂಗಿ ಹೇಳುತ್ತಿದ್ದೆವು.

ರಾಯರ ಮಠದ ಮೂಲಕ ಅರ್ಚಕರೊಬ್ಬರಿಗೆ ಆಗ ತಾನೆ ಮದುವೆಯಾಗಿತ್ತು. ಆದ್ದರಿಂದ ಅಂದು ಸರೋರಾತ್ರಿಯ ಹೊತ್ತು ಅವರ ಮನೆಯ ಹಿತ್ತಲಿನ ಕಡೆಯಿಂದ ಗಿಡಗಳ ಸಂದಿಯಿಂದ ನಮ್ಮ `ಅಶರೀರವಾಣಿಗಳು` ರಾತ್ರಿಯ ಮೌನದಲ್ಲಿ ಮೊಳಗಿದ್ದವು. ``ಭಟ್ಟರ$..ಹಗುರ, ಸಾವಕಾಶ, ಅಗದೀ ಸಾವಕಾಶ

ಆಗಲಿ" " ಭಟ್ಟರ$..ಏನ್ ಬೇಕಾದ್ದು ಆಗಲಿ, ಚೊಂಡಕಿ ಮಾತ್ರ ನೆಟ್ಟಗಿರಲಿ" ಎಂದು ಕೂಗಿ ಬಾಗಿಲು ತೆರೆಯುವುದರೊಳಗೆ ಪರಾರಿಯಾಗಿದ್ದೆವು.

ಹಲವಾರು ಮನೆಗಳಲ್ಲಿ ನಮ್ಮಂಥ ಕಳ್ಳಕ್ಯಾತರ ಸಹವಾಸವೇ ಬೇಡವೆಂದು ಅವರೇ ಕಾದಿದ್ದು ಐದು ಕುಳ್ಳುಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ಆದ್ದರಿಂದ ಕದಿಯುವ ರೋಮಾಂಚನ ಇಲ್ಲವಾಗಿ ಬಹಳ ಬೇಸರದಿಂದ ಕುಳ್ಳುಗಳನ್ನು ಸ್ವೀಕರಿಸುತ್ತಿದ್ದೆವು. ಈ ಪ್ರಕಾರವಾಗಿ ರಾತ್ರಿಗಳೆಲ್ಲಾ ಕುಳ್ಳು ಕದ್ದು ದೊಡ್ಡ ಕಾಮಣ್ಣನನ್ನು ನಿಲ್ಲಿಸಿದ್ದೆವು. ನಿರಂತರವಾಗಿ ಲಬೋ ಲಬೋ ಎಂದು `ಹೊಯ್ಕೊಂಡಿದ್ದ' ನಮ್ಮ ಬಾಯಿಗಳು ಸುಸ್ತಾಗಿದ್ದವು. ಆದರೆ, ಹೋಳಿ ಹಬ್ಬದ ಬೆಳಗೆಂದು ಹೊಳೆದ ಕೂಡಲೇ ನಿದ್ದೆ, ಸುಸ್ತು ಎಲ್ಲವೂ ಹೊರಟುಹೋದವು. ಬೇಗಬೇಗನೇ ಸಿದ್ಧರಾದೆವು. ಸಿದ್ಧವಾಗುವುದೆಂದರೆ ಅವ್ವ ಗಂಟು ಕಟ್ಟಿ ಇಟ್ಟಿದ್ದ ಹಳೆಯ ಬಟ್ಟೆಗಳಲ್ಲಿ ಬಣ್ಣ ಆಡಲು ಸೂಕ್ತವಾದ ಬಟ್ಟೆ ಆಯ್ದುಕೊಳ್ಳುವುದು ನಾನು ಹಳೆಯ `ಮಾಲಂಗಿ' ಪ್ಯಾಂಟ್ ಹಾಗೂ ದೇವಾನಂದ ಕಾಲರ್ ಅಂದರೆ ಅಗಲವಾದ, ವಿಶಾಲವಾದ ಕಾಲರ್ ಇದ್ದ ಹಳೆಯ ಶರ್ಟನ್ನು ಹಾಕಿಕೊಂಡೆ. ಹೆಗಲಿನವರೆಗೆ ಬೆಳೆಸಿದ್ದ `ಹಿಪ್ಪಿ' ಸ್ಟೈಲ್‌ನ ಕೂದಲನ್ನು ಬಾಚಿಕೊಂಡು ವಿಕಾರವಾಗಿದ್ದ ಕಪ್ಪು ಕೂಲಿಂಗ್ ಗ್ಲಾಸ್ ಹಾಕಿಕೊಂಡೆ. ಏಕೆಂದರೆ, ಧಾರವಾಡದ ಹೋಳೀ ಹಬ್ಬದ ವಿಶೇಷವೆಂದರೆ ಆದಷ್ಟು ವಿಚಿತ್ರವಾಗಿ ಸಾಧ್ಯವಿದ್ದರೆ ವಿಕಾರವಾಗಿ ಕಾಣುವುದು ಮುಖ್ಯವಾಗಿತ್ತು. ಇಷ್ಟು ರಂಗಸಿದ್ಧತೆ ಮಾಡಿಕೊಂಡು ಹೊರಬಂದರೆ ಶುರುವಾಯಿತು ಬಣ್ಣ. ನಿಮಿಷಗಳಲ್ಲಿ ಟೋಳಿಯವರೆಲ್ಲಾ ಸೇರಿಕೊಂಡೆವು.

ಥರಥರಾವರಿ ಬಣ್ಣಗಳನ್ನು ಕೆನ್ನೆ, ಹಣೆ, ಮೂಗು ಒಟ್ಟಾರೆ ಕೈಗೆ ಸಿಕ್ಕುವ ದೇಹದ ಎಲ್ಲಾ ಭಾಗಗಳಿಗೆ ಹಚ್ಚುವುದು. ನೀರಿನಲ್ಲಿ ಬೆರೆಸಿದ ಬಣ್ಣಗಳನ್ನು ಓಕುಳಿ ಆಡುವುದು. ಪ್ಲಾಸ್ಟಿಕ್ ಪಿಚಕಾರಿಗಳಿಂದ ಜೊಯ್ಯೆಂದು ಎರಚುವುದು. ಅಟ್ಟಿಸಿಕೊಂಡು ಹೋಗಿ ಬಣ್ಣ ಹಚ್ಚುವುದು. ಜೊತೆಗೆ ಲಬೋಲಬೋ ಎಂದು ಹೊಯ್ಕೊಳ್ಳುವುದು. ಹೋಳಿ ಎಂದರೆ ಅವ್ವನಿಗೂ ಹುರುಪು. ಮನೆ ಹೊರಗೆ ಬಕೆಟ್‌ಗಳಲ್ಲಿ ನೀರು ತುಂಬಿಸಿ ಇಡುತ್ತಿದ್ದರು. ಅದಕ್ಕೆ ಬಣ್ಣ ಬೆರೆಸಿ ನೆರೆಹೊರೆಯವರನ್ನೆಲ್ಲಾ ಕರೆದು ಬಕೆಟ್‌ಗಳಿಂದ ತಲೆ ಮೇಲಿಂದಲೇ ಸುರಿಯುತ್ತಿದ್ದೆವು. ನಮ್ಮ ಚಾಳಿನಲ್ಲಿ ಒಂದು ಬ್ರಾಹ್ಮಣ ಕುಟುಂಬ, ಒಂದು ಪಂಜಾಬಿಗಳದು, ಇನ್ನೊಂದು ಸಿಂಧಿಗಳದು. ಹೋಳಿ ಹಬ್ಬದ ದಿನ ಅಪ್ಪಿಯ ಕುಟುಂಬದವರನ್ನು, ಗಂಡಸರು ಮತ್ತು ಹೆಂಗಸರನ್ನು ಕರೆತಂದು ಬಣ್ಣದ ಸ್ನಾನ ಮಾಡಿಸುವುದರಲ್ಲಿ ಅವ್ವನದೂ ಮುಖ್ಯ ಪಾತ್ರ.

ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಮುಸ್ಲಿಂ ಕುಟುಂಬದಲ್ಲಿ ಏಳು ಜನ ಹುಡುಗಿಯರು. ಅವರು ಮಾತ್ರ ತಂದೆಯ ಹೆದರಿಕೆಯಿಂದ, ದೂರದಿಂದ ಆಸೆಯಿಂದ ನೋಡುತ್ತಾ ನಿಲ್ಲುತ್ತಿದ್ದರು. ಕೊನೆಗೆ ತಾಳಲಿಕ್ಕಾಗದೇ ನಮ್ಮ ಮನೆ ಒಳಗೆ ಬಂದು ಅವ್ವನ ಕೈಯಲ್ಲಿ ಕೆನ್ನೆಗೆ ಬಣ್ಣ ಹಚ್ಚಿಸಿಕೊಂಡು ಸ್ವಲ್ಪ ಹೊತ್ತಿನ ಮೇಲೆ ತೊಳೆದುಕೊಂಡು ಹೋಗುತ್ತಿದ್ದರು.

ಹೀಗೆ ಮನೆಯಲ್ಲಿ ಬಣ್ಣ ಒರೆಸಿಕೊಂಡು, ಗಬಗಬನೆ ತಿಂದು ತಿಂಡಿ ಮುಕ್ಕಿ ಊರಿನ ಕಡೆಗೆ ಹೊರಟೆವು. ಅಂದು ಎಲ್ಲಾ ಕಡೆ ಪಡ್ಡೆ ಟೋಳಿಗಳದ್ದೇ ಕಾರುಬಾರು. ಓಣಿಗಳಲ್ಲಿ ಯಾರು ಕಂಡರೂ ಅಟ್ಟಿಸಿಕೊಂಡು ಬಣ್ಣ ಹಚ್ಚುವುದು, ಇನ್ನೊಂದು ಟೋಳಿ ಬಂದರೆ ಜಿದ್ದಾಜಿದ್ದಿಯಲ್ಲಿ ಬಣ್ಣ ಹಾಕುವುದು ಮತ್ತು ಎದುರು–ಬದುರಾಗಿ ನಿಂತು ಪಂದ್ಯ ಕಟ್ಟಿದಂತೆ `ಕೀ ಹೋ' ಎಂದು ಕೂಗಿ ಹೊಯ್ಕೊಳ್ಳುವುದು ನಿರಂತರವಾಗಿ ನಡೆದಿದ್ದವು.

ಆ ಹೊತ್ತಿಗಾಗಲೇ ಧಾರವಾಡದಲ್ಲಿ ನಾಗರಿಕ ಬಣ್ಣಗಳ ಜಮಾನಾ ಮುಗಿಯುತ್ತಾ ಬಂದಿತ್ತು. ಬದಲಾಗಿ ಬಿಳಿ `ಸುನೇರಿ' ಬಂಗಾರ ಬಣ್ಣದ ಸುನೇರಿ ಮಾತ್ರವಲ್ಲ ಎತ್ತಿನ ಚಕ್ಕಡಿಗಳ ಗಾಲಿಗೆ ಹಾಕುತ್ತಿದ್ದ ಎರಿ ಇವುಗಳ ಬಳಕೆ ಶುರುವಾಗಿತ್ತು. ಹುಟ್ಟಿಸಿದ ತಂದೆ–ತಾಯಿಗಳೂ ಗುರುತು ಹಿಡಿಯದಂತೆ ವಿಕಾರವಾಗಿ ಮುಖಗಳಿಗೆ ಬಣ್ಣ ಹಚ್ಚುತ್ತಿದ್ದೆವು. ಮುಖ್ಯವಾಗಿ ಅತ್ಯಂತ ನಾಟಕೀಯವಾಗಿ ವಿಕ್ಷಿಪ್ತವಾಗಿ ನಡೆದುಕೊಳ್ಳುತ್ತಿದ್ದರೆ ಹೋಳಿ ಹಬ್ಬಕ್ಕೆ ಖದರು ಬರುತ್ತಿರಲಿಲ್ಲ.

ಮಾಳಮಡ್ಡಿಯಿಂದ ಇಳಿದು ಸ್ಟೇಷನ್ ರೋಡಿಗೆ ಬರುವಷ್ಟರಲ್ಲಿ ರಸ್ತೆಗಳೆಲ್ಲಾ ಕಾಮನಬಿಲ್ಲಿನ ಬಣ್ಣಗಳಲ್ಲಿ ತೊಯ್ದು ಹೋಗಿದ್ದವು. ನನ್ನ ಹಿಪ್ಪಿ ಗೆಟಪ್ಪಿನಿಂದಾಗಿ ಹಲವಾರು ಟೋಳಿಗಳು ಎದುರಾದಾಗ ನನ್ನ ಜೊತೆ ಡೈಲಾಗ್‌ನಲ್ಲಿ ತೊಡಗುತ್ತಿದ್ದವು. ಒಂದು ಟೋಳಿಯವನು "ಹೆಂಗಿದೀರಿ ಬ್ರದರ್" ಎಂದು ತಬ್ಬಿಕೊಂಡನು. ನಾನು " ಬ್ರದರ್, ನನ್ನ ಎದುರುಗೊಳ್ಳಾಕ ಒಬ್ಬನ$ ಯಾಕ ಬಂದಿ? ವೈನಿ ಬಂದಿಲ್ಲ ಏನು?" ಎಂದೆ. ಅವನು ಅಳುಮುಖ ಮಾಡಿಕೊಂಡು, ಮತ್ತೆ ತಬ್ಬಿಕೊಂಡು " ಏನ$ ಹೇಳಲಿ ಬ್ರದರ್, ನಿನ್ನಿ ರಾತ್ರಿ ಪಕ್ಕದ ಮನೀಯವನ ಜೊತಿಗಿ ಓಡಿಹೋದಳು" ಎಂದನು. " ಹೋಗಲಿ ಬ್ರದರ್, ಎದೀ ಒಡದುಕೋಬ್ಯಾಡ. ಓಡಿ ಹೋದರ ಹೋಗಲಿ, ನೀನು ಆಜೂಬಾಜೂದಾಗ ಇನ್ನಾರಾದರೂ ವೈನೀನ್ನ ಹುಡುಕ್ಕೋ" ಎಂದು ಸಂತೈಸಿದೆ.

ಹೀಗೆ ನಿಂತಲ್ಲಿ ಆಶು ನಾಟಕಗಳು ಅಸಂಗತ ಶೈಲಿಯಲ್ಲಿ ನಡೆದವು. ಇನ್ನೊಂದು ಟೋಳಿಯ ಲೀಡರ್ ನನ್ನನ್ನು ನೋಡಿ ಗರ ಹೊಡೆದವನಂತೆ ನಟಿಸಿ "ಅಲೇಲಲೇಲಲೇ, ಮೊನ್ನಿ ನೋಡಿದ್ದ ಫಿಲ್ಮನ್ಯಾಗ ಹೀರೋ ನೀವೇ ಅಲ್ಲೇನ್ರಿ

?" ಎಂದ. ನಾನು "ಹೌದು ಮತ್ತ$, ಇವತ್ತು ಹೋಳಿ ಹಬ್ಬದ ಪ್ರಯುಕ್ತ ಪ್ರತ್ಯಕ್ಷ ಬಂದೀನಿ ತಮ್ಮಾ, ದುಡ್ಡು ಕೊಟ್ಟು ಲಗೂನ ಟಿಕೆಟ್ ತಗೊಂಡು ನೋಡು" ಎಂದೆ. ಹೀಗೆ ಸವಾಲ್–ಜವಾಬ್ ಮುಗಿದ ಕೂಡಲೇ ಎರಡೂ ಟೋಳಿಯವರು "ಕೀ ಹೋ' ಎಂದು ಕುಣಿಯುತ್ತಿದ್ದರು.

ಹೀಗೆ ಸ್ಟೇಷನ್ ರೋಡಿನಿಂದ ಕೋರ್ಟ್ ಸರ್ಕಲ್‌ಗೆ ಬಂದು ಅಲ್ಲಿಂದ ಲೈನ್ ಬಜಾರಿಗೆ ತಿರುಗಿ, ಅಲ್ಲಿಂದ ಸುಭಾಷ್ ರಸ್ತೆಗೆ ಬಂದೆವು. ಅಲ್ಲಿ ಮನೋಹರ ಗ್ರಂಥಮಾಲದ ಎದುರಿಗೆ ರಸ್ತೆಯಲ್ಲಿ ಬಣ್ಣದ ನೀರಿನ ದೊಡ್ಡ ಡ್ರಮ್‌ಗಳನ್ನು ಜೋಡಿಸಿಟ್ಟಿದ್ದರು. ಬಂದವರನ್ನು ಅನಾಮತ್ತಾಗಿ ಎತ್ತಿ ಅವುಗಳಲ್ಲಿ ಅದ್ದಿ ತೆಗೆಯುತ್ತಿದ್ದರು. ನಾನು ಮತ್ತು ಅಪ್ಪಿ ಆ ಡ್ರಮ್‌ಗಳಲ್ಲಿ ಮುಳಗಿ ಎದ್ದೆವು. ಅಷ್ಟರಲ್ಲಿ ಡಿಸಿಸಿ ಬ್ಯಾಂಕ್ ಕಟ್ಟಡದ ಕಡೆಗಿನ ಮ್ಯಾದಾರ ಓಣಿ ಕಡೆಯಿಂದ ಹಲವು ಹಿರಿಯರು ಬಂದರು. ಅದರಲ್ಲಿ ಪಾಯಿಜಾಮಾ ಜುಬ್ಬಾ ಹಾಕಿದ ಒಬ್ಬರು, ಧೋತರ ಹಾಕಿದ ಇನ್ನೊಬ್ಬರು ಆಗಲೇ ತಲೆಯಿಂದ ಕಾಲಿನವರೆಗೆ ಬಣ್ಣ ಹಚ್ಚಿಸಿಕೊಂಡಿದ್ದ ೬೦–೬೫ರ ಆಸುಪಾಸಿನವರು ರಸ್ತೆ ಮಧ್ಯಕ್ಕೆ ಬಂದು ನಿಂತರು. ಎದುರುಬದುರಾಗಿ ನಿಂತು, ಮುಖದ ಮೇಲೆ ಯಾವ ಭಾವನೆಯನ್ನು ತೋರದೇ ಗಟ್ಟಿದನಿಯಲ್ಲಿ ಹೋಳಿ ಪದಗಳನ್ನು ಹೇಳತೊಡಗಿದರು. ಒಬ್ಬರಿಗೊಬ್ಬರು ಸೆಡ್ಡು ಹೊಡೆದು ಹಾಡುತ್ತ ಹೋದರು. ಅವನ್ನು ಕೇಳಿದ ನಾನು, ಅಪ್ಪಿ ತೆರೆದ ಬಾಯಿ ತೆರೆದಂತೆ ಗರಬಡೆದು ನಿಂತುಕೊಂಡೆವು. ೬೫ ವಯಸ್ಸಿನ ಇಬ್ಬರು ಹಿರಿಯರು ಸುಭಾಷ್ ರಸ್ತೆಯ ಮಧ್ಯದಲ್ಲಿ ಹಾಡುತ್ತಿದ್ದ ಹೋಳೀ ಪದಗಳು ಹೇಗಿದ್ದವೆಂದರೆ ನಮ್ಮಂಥ ನಿರ್ಲಜ್ಜ ಪಡ್ಡೆಗಳು ನಾಚಿಕೆಯಿಂದ ಮುದುಡಿಕೊಂಡೆವು. ಅಷ್ಟರಲ್ಲಿ ಸುತ್ತಲೂ ಸೇರಿದ ಒಂದೊಂದು ಸಾಲಿಗೆ `ಕೀ ಹೋ' ಎಂದು ಕುಣಿಯುತ್ತಿದ್ದು, ನನಗಂತೂ ಕನ್ನಡ ಭಾಷೆಯಲ್ಲಿ ಇಷ್ಟೊಂದು ಅಶ್ಲೀಲ ಪದಗಳಿವೆಯೆಂದು ಆಶ್ಚರ್ಯವಾಯಿತು. ಹಾಡು ಮುಗಿದ ಕೂಡಲೇ ಅಪ್ಪಿ "ಸರ$..ಇನ್ನೊಂದು ವಾರ ಕಿವೀ ತೊಳಕೊಂಡರೂ ಸ್ವಚ್ಛ ಆಗುದಿಲ್ಲರೀ" ಎಂದ. ಅಪ್ಪಿ ಹೇಳಿದ್ದೇ ಸರಿ ಗುಂಪಿನವರು ನಮ್ಮಿಬ್ಬರನ್ನು ಮತ್ತೆ ಡ್ರಮ್ಮಿನಲ್ಲಿ ಅದ್ದಿ ಬಣ್ಣದ ನೀರಿನಲ್ಲಿ ಕಿವಿ ತೊಳೆದರು.

ಸುಭಾಷ್ ರೋಡಿನ ಕೊನೆ ತಲುಪಿ ಅಲ್ಲಿ ಅಂಬಾಭವಾನಿ ಗುಡಿಯಿಂದ ಎಡಗಡೆಗೆ ಹೋದ ಎಲ್ಲಾಪುರ ರಸ್ತೆಯ ಮೂಲಕ ನಮ್ಮ ಚಿಗವ್ವನ ಕಾಮನಕಟ್ಟಿಯ ಮನೆಗೆ ಬಂದವು. ಚಿಗವ್ವನಿಗೆ ಹೋಳೀ ಹಬ್ಬವೆಂದರೆ ಬಹಳ ಹುರುಪು. ಪ್ರತಿ ವರ್ಷ ನಾವು ಬರುವವರೆಗೆ ಕಾದು ನಮ್ಮಿಂದ ಬಣ್ಣ ಹಚ್ಚಿಸಿಕೊಂಡು, ಅರ್ಧ ಗಂಟೆ ನಾವು `ಹೊಯ್ಕೊಳ್ಳುವಂತೆ' ಮಾಡಿ ಆಮೇಲೆ ` ಹೊಯ್ಕೊಂಡ ಬಾಯಿಗೆ ಹೋಳಿಗಿ' ಎಂದು ತಿಂಡಿ ಕೊಡುತ್ತಿದ್ದರು. ಕಡಲಿ ಬ್ಯಾಳಿ ಹೂರಣದ ಹೋಳಿಗಿ, ಜೋಳದ ವಡಿ ಇತ್ಯಾದಿಗಳನ್ನು ತಿಂದು ಪೂರೈಸಿದೆವು.

ಕಾಮನಕಟ್ಟಿಯಿಂದ ಮತ್ತೆ ಸುಭಾಷ್ ರಸ್ತೆಗೆ ಬಂದು ಅಲ್ಲಿಂದ ಗವಳಿದೊಡ್ಡಿಗೆ ಹೇಗೆ ನಡೆಯುವುದು ಎಂದುಕೊಳ್ಳುತ್ತಿದ್ದಾಗ ಎಮ್ಮೆಕೇರಿ ಕಡೆಗೆ ಹೋಗುವ ಮತ್ತೊಂದು ಬಸ್ಸು ಬರುತ್ತಿತ್ತು. ಹಳ್ಳಿಗನ ಧನಿಯಲ್ಲಿ, 'ಹೋss, ಗಾಡಿ ತರಬೋ ನಮ್ಮಪ್ಪ. ನಿನ್ನ ಮಗಳು ಗಂಡ ನಡೀಲಿ, ಅಮೇಲೆ ಬೇಕಾದ್ರೆ ಲಗ್ನನೂ ಆಗ್ಲೀ' ಎಂದು ಕೂಗಿ ಬಸ್ಸು ನಿಲ್ಲಿಸಿದ. ಅಂತೂ ಎಮ್ಮೆಕೇರಿ ಸ್ಟಾಪ್ ಇಳಿದು ತಲುಪಿದವು.

ಅಲ್ಲಿ ನಮ್ಮ ಅವತಾರ, ನಮಗೆ ಅಂಟಿದ್ದ ಬಣ್ಣಗಳನ್ನು ನೋಡಿದ ಅವ್ವ, 'ಮನೀ ಒಳಗ ಬರಬೇಡ್ರಿ ಬುತ್ತಿ ಕಟ್ಟಿಕೊಡ್ತೇನಿ, ನುಗ್ಗಿಕೇರಿಗೆ ಹೋಗಿ ಜಳಕ ಮಾಡಿ ಬರ್ರೀ' ಎಂದಳು. ರೊಟ್ಟಿ, ಚಪಾತಿ, ಚೋಳಕದ ವಡಿ ಎಲ್ಲಾ ಕಟ್ಟಿಕೊಂಡು ಸಾರಸ್ವತಪುರದ ದಿಣ್ಣೆ ಏರಿ, ಅಲ್ಲಿ ಗಿರೀಶ್‌ಕಾರ್ನಾಡ್‌ರ ಮನೆ ದಾಟಿಕೊಂಡು, ಆ ಮನೆಗೆ ಬಂದ ಕನಸಿನ ಕನ್ಯೆ ಹೇಮಮಾಲಿನಿಯ ನೆನಪಿನಲ್ಲಿ ದುಃಖ ಉಮ್ಮಳಿಸಿ ಗವಳಿದೊಡ್ಡಿಯ ತುದಿಗೆ ಬಂದಾಗ ಅಲ್ಲಿ ಒಂದು ಕಂಟ್ರಿ ಸಾರಾಯಿ ಅಂಗಡಿ ಇತ್ತು. ಅಂಗಡಿ ಎಂದರೆ ಒಂದು ಗುಡಿಸಲು. ಅದಕ್ಕೆ ಸಿನಿಮಾ ಟಿಕೇಟ್ ಕೌಂಟರ್‌ನಂಥ ಒಂದೇ ಕಿಟಕಿ. ಅದರ ಹಿಂದೆ ಮೆಕ್ಸಿಕೊ ದೇಶದವರಂಥ ಕಟೆದು ಮಾಡಿದಂತಹ ಮುಖದ ಗಿರಿಜಾ ಮೀಸೆಯ ಒಬ್ಬನು ಕುಳಿತಿದ್ದ. ಅವನು ಮಾತೇ ಆಡುತ್ತಿರಲಿಲ್ಲ. ಮುಖದ ಮೇಲೆ ಯಾವ ಭಾವವೂ ಇರಲಿಲ್ಲ. ಬೆರಳಿನಲ್ಲೇ ಇಷ್ಟು ರೂಪಾಯಿ ಎಂದು ತೋರಿಸುತ್ತಿದ್ದ. ಅಷ್ಟು ರೂಪಾಯಿ ಕಿಟಕಿಯಲ್ಲಿ ತೂರಿದರೆ ಆ ಕಡೆಯಿಂದ ಒಂದು ಗ್ಲಾಸ್ ನಲ್ಲಿ ಬಿಳಿ ಬಣ್ಣದ ದ್ರವವನ್ನು ಸುರಿದುಕೊಡುತ್ತಿದ್ದ. ಷೇಕ್ಸಪೀಯರ್ ಹೆಸರಿನಲ್ಲಿ ಅದನ್ನು ಗುಟುಕರಿಸಿದೆವು. ಹೀಗಾಗಿ ಹುಬ್ಬಳ್ಳಿ ರಸ್ತೆ ಗುಡ್ಡ ನಡೆದು ನುಗ್ಗಿಕೇರಿ ತಲುಪುವುದರೊಳಗೆ ಆಕಾಶದ ಮೇಲೆ ಹೆಜ್ಜೆ ಇಟ್ಟು ಭೂಮಿಯ ಮೇಲೆ ನಡೆದಂತೆ ಅನ್ನಿಸುತಿತ್ತು. ನುಗ್ಗಿಕೇರಿ ಕಂಡಕೂಡಲೆ ನೀರಿಗೆ ಇಳಿದು ಎಮ್ಮೆಕೇರಿಯ ಎಮ್ಮೆಗಳಂತೆ ಬಿದ್ದುಕೊಂಡವು.

**ಎ ನೋಡು ಮಂಗ್ಯಾ... ಮತ್ತೊಂದು ಹೆಣ ಬಿತ್ತು!**

ನಾ ಇಲೆಕ್ಸನ್ನಿಗೆ ನಿಲ್ತೀನಿ ಎಂದು ಯಾವುದೇ ಮುನ್ಸೂಡಿ ಇಲ್ಲದೇ ಜಾಡರ ಘೋಷಣೆ ಮಾಡಿದಾಗ ನಾವು ಹೆಮ್ಮಾಡಿ ಕ್ಯಾಂಟೀನಲ್ಲಿ ಮಧ್ಯಾಹ್ನದ ಹೊತ್ತು ಕುಳಿತು ಭರ್ಜರಿ ಟಿಫಿನ್ ಮಾಡುತ್ತಿದ್ದೆವು. ವಾರದ ಕಾರ್ಯಕ್ರಮದಲ್ಲಿ ಇದು ನಮಗೆ ಬಹು ಮುಖ್ಯವಾಗಿತ್ತು. ಎನ್‌ಸಿಸಿಯಲ್ಲಿ ಸೀನಿಯರ್ ಆಂಡರ್ ಅಫೀಸರ್ ಆಗಿದ್ದ ಜಾಡರ ಎನ್‌ಸಿಸಿ ತರಗತಿ ಪರೇಡ್‌ಗಳು ಮುಗಿದ ಕೂಡಲೇ ಕೆಡೆಟ್‌ಗಳಿಗೆ 'ಹೂಂ ನೋಡ್ರಲೇ, ಎಲ್ಲಾರಿಗೂ ಆಟೆಂಡೆಸ್ ಕೊಟ್ಟೇನಿ. ಕಮ್ ಕಿಮ್ ಅನ್ನದ ಮನೀಗಿ ಹೋಗರಿ. ಇರ್ದಿದ್ದರ ಕ್ರಾಲಿಂಗ್ ಪನಿಶ್‌ಮೆಂಟ್ ಕೊಟ್ಟು ಪೀಕಸ್ತೀನಿ' ಎಂದು ಖಡಕ್ ಆಫೀಸರನ ಗತ್ತಿನಲ್ಲಿ ಗುಡುಗುತ್ತಿದ್ದ. ಬಹಳ ಜನ ಅಳ್ಳೆದೆಯ ಕೆಡೆಟ್‌ಗಳು ತಮ್ಮ ಟಿಫನ್ ಕೂಪನ್ನುಗಳನ್ನು ಆವನಿಗೆ ವಾಪಸ್ಸು ಕೊಟ್ಟು ಹೋಗುತ್ತಿದ್ದರು. ನಮಗೆ ಎಷ್ಟು ಪಣೂತಿ ಕಾಲ ಬಂದರೂ

ಎರಡು ದಿನಗಳ ಮೇಜವಾನಿ ತಪ್ಪುತ್ತಿರಲಿಲ್ಲ. ಅದೂ ಅಗದೀ ಪುಷ್ಕಳ ಉಪಹಾರ ಮಾಡುತ್ತಿದ್ದೆವು. ಈ ಮಧ್ಯೆ ಯಾವಾಗಲಾದರೂ ಕೆಡೆಟ್‌ಗಳಿಗೆ ಕೇಕುಗಳನ್ನು ತರಿಸಿದ್ದಾಗ ನಾನು ಮತಾಂತರ ಮಾಡಲು ಬಂದ ಪಾದ್ರಿಗಳಿಗಿಂತ ಬಿರುಸಾಗಿ ಆ ಕೇಕುಗಳಲ್ಲಿ ಹಂದಿ ಮಾಂಸ, ಮೊಟ್ಟೆಗಳು ಧಾರಾಳವಾಗಿ ಇರುತ್ತವೆಂದು, ಆ ಹಂದಿಯನ್ನು ಇತ್ತೀಚೆಗೆ ಗವಳೀದೊಡ್ಡಿಯಲ್ಲಿ ನೋಡಿದ್ದೇನೆಂದು ಪ್ರಚಾರ ಮಾಡುತ್ತಿದ್ದೆ. ಬ್ರಾಹ್ಮಣ ಹುಡುಗರೆಲ್ಲ ಕೇಕ್‌ಗಳನ್ನು ನನಗೆ ಕೊಟ್ಟು ನಮ್ಮ ಮೇಜವಾನಿಯ ಖದರ್ ಅನ್ನು ಹೆಚ್ಚಿಸುತ್ತಿದ್ದರು.

ಅವತ್ತು ಮಧ್ಯಾಹ್ನ ನಾವು ಆಗಲೇ ಹೊಟ್ಟೆಗೆ ಇಳಿಸಿದ್ದ ಶಿರಾ–ಉಪ್ಪಿಟ್ಟು, ಮಿರ್ಚಿ–ಭಜಿ ಹಾಗೂ ದೋಸೆಗಳು ವಿಷವಾಗಿ ಹೊಟ್ಟೆ ತೊಳೆಸುವಂಥ ಭೀಕರ ಘೋಷಣೆಯನ್ನು ಜಾಡರ ಮಾಡಿಬಿಟ್ಟ. 'ಲೇ ನಿನಾಪ್ನ, ಬರೂವಾಗ ತಲೀ ಅಡಾ ಇಟ್ಟು ಬಂದೀ ಏನಲೇ' ಎಂದು ಬಾಯಿಗೆ ಬಂದ ಉದ್ಗಾರವನ್ನು ನುಂಗಿಕೊಂಡೆವು. ಏಕೆಂದರೆ, ಕೂಪನ್ನುಗಳು ಎನ್‌ಸಿಸಿಯವಾದರೂ ಅನ್ನದಾತ ಜಾಡರನೇ ಆಗಿದ್ದರಿಂದ ನಮಕ್ ಹರಾಮಿ ಮಾಡಲು ಮನಸ್ಸಾಗಲಿಲ್ಲ. ಆದರೆ, ರಾತ್ರಿ ಕಂಡ ಬಾವಿಗೆ ಹಗಲ ಬಿದ್ದಂತ ಕೆಲಸ ಅವನು ಮಾಡುತ್ತಿದ್ದಾನೆಂದು, ಹಾದ್ಯಾಗ ಹೋಗೂ ದೆವ್ವಾ ಮನೀಗಿ ಕರೀತಿದ್ದಾನೆಂದು ನಮಗೆ ಗ್ಯಾರಂಟಿ ಆಗಿತ್ತು.

ಕಾರಣ ಇಷ್ಟೆ. ಕರ್ನಾಟಕ ಕಾಲೇಜಿನ ಇಲೆಕ್ಷನ್ ಆಂದರೆ ಇಂಡಿಯಾದ ಯಾವುದೇ ಇಲೆಕ್ಷನ್ ಅಪ್ಪನ ಹಾಗೆ ಜಾತಿ, ಹಣ, ಪ್ರಭಾವ ಇವೆಲ್ಲವುಗಳ ಚಕ್ರವ್ಯೂಹವಾಗಿತ್ತು. ಅವೆಲ್ಲ ಇರುವ ಆಸಾಮಿಗಳೇ ಇಲೆಕ್ಷನ್‌ನಲ್ಲಿ ಚಿತ್ ಆಗುತ್ತಿದ್ದರು. ಅಂಥವರಲ್ಲಿ ಜಾಡರ ಗೆಲ್ಲುವುದು ಸಾಧ್ಯವಿರಲಿಲ್ಲ. ಹಾಗಂತ ಹೇಳದಿದ್ದರೂ ಇಲೆಕ್ಷನ್ ಉಸಾಬರಿ ಬೇಡ ಎನ್ನುವುದನ್ನು ಹೇಳಿದೆವು. ಆದರೆ, ಜಾಡರನ ತಲ್ಯಾಗ ಗುಂಗೀ ಹುಳ ಹೊಕ್ಕದ್ದರಿಂದ ಆವನು ನಮ್ಮ ಮಾತು ಕೇಳಲೇ ಇಲ್ಲ. ಇಲೆಕ್ಷನ್‌ಗೆ ನಿಂತೇ ಬಿಟ್ಟ.

ಕರ್ನಾಟಕ ಕಾಲೇಜಿನ ಸಮಸ್ತ ಚಟುವಟಿಕೆಗಳಂತೆ ಇಲೆಕ್ಷನ್ ಕೂಡ ಅದರ ಖರೇ ಖರೇ ಅಂದವಾದ ಸೈಕಲ್ ಸ್ಟ್ಯಾಂಡಿನ ಮೇಲೆ ಕೇಂದ್ರೀಕೃತವಾಗಿತ್ತು. ಸೈಕಲ್ ಸ್ಟ್ಯಾಂಡ್ ಆಂದರೆ ಸೈಕಲ್ ನಿಲ್ಲಿಸುವುದನ್ನು ಬಿಟ್ಟು ಇನ್ನೆಲ್ಲಾ ಕೆಲಸಗಳ ತಾಣವಾಗಿತ್ತು. ಆದು ಹೇಗೆಂದರೆ, ಮುಖ್ಯ ಕಟ್ಟಡದ ಹಿಂಭಾಗದಲ್ಲಿ ಉದ್ದನಾಗಿ ಕಟ್ಟಿಗೆಯಿಂದ ಮಾಡಿದ ಸೈಕಲ್ ಸ್ಟ್ಯಾಂಡ್ ಒಂದು ಕಟಾಂಜನದಂತೆ ನಿಂತಿತ್ತು. ಕೈಗೆಟುಕುವಷ್ಟು ಎತ್ತರದ ಅದರ ಛಾವಣಿಯ ಮೇಲೆ ಕಾಲೇಜಿನ ಮಂಗ್ಯಾ, ಮುತ್ಯಾ ಮತ್ತು ಇತರ ಎಲ್ಲಾ ಗಂಡು ಪ್ರಾಣಿಗಳು ಟೋಳಿ ಕಟ್ಟಿಕೊಂಡು ಈ ಸ್ಟ್ಯಾಂಡಿನಲ್ಲಿ ನಿಂತುಕೊಳ್ಳುತ್ತಿದ್ದರು. ಯಾಕೆಂದರೆ, ಸರಿಯಾಗಿ ಅದರ ಎದುರಿಗೆ ಕಟ್ಟಡದ ಮೊದಲ ಮಹಡಿಯಲ್ಲಿ ಲೇಡಿಸ್ ರೂಂ ಇದ್ದು, ಆದು ವಿಶಾಲವಾದ ಬಾಲ್ಕನಿಗೆ, ಅಂದರೆ ಸೈಕಲ್ ಸ್ಟ್ಯಾಂಡಿಗೆ ಎದುರು ತೆರೆದುಕೊಳ್ಳುತ್ತದೆ. ಹೀಗಾಗಿ

ಎಲ್ಲಾ ಪಡ್ಡೆ ರೋಮಿಯೋಗಳು ಸೈಕಲ್ ಸ್ಟ್ಯಾಂಡಿನಲ್ಲಿ ಕೆಳಗೆ ಮತ್ತು ಜ್ಯೂಲಿಯಟ್‌ಗಳು ಬಾಲ್ಕನಿಯ ಮೇಲೆ ನಿಂತು ಶೇಕ್ಸಪಿಯರನೂ ಅಸೂಯೆ ಪಡುವಂತಾಗುತ್ತಿತ್ತು. ಇಲೆಕ್ಷನ್ ಪ್ರಚಾರ ಕಾಲೇಜಿನ ಈ ಭೌಗೋಳಿಕ ಅನುಕೂಲವನ್ನು ಸಂಪೂರ್ಣ ಬಳಸಿಕೊಳ್ಳುತ್ತಿತ್ತು. ಮುಖ್ಯ ಕಟ್ಟಡದ ಸುತ್ತ ಒಂದು ದಾರಿ ಸೈಕಲ್ ಸ್ಟ್ಯಾಂಡ್ ಪಕ್ಕದಿಂದ ಹೆಮ್ಮಾಡಿ ಕ್ಯಾಂಟೀನ್‌ಗೆ ಹೋಗಿ ಆಲ್ಲಿಯ ಕಟ್ಟಡದ ಮುಂಭಾಗಕ್ಕೆ ಬಂದು ಒಂದು ಸುತ್ತು ಹೊಡೆದು ಮತ್ತೆ ಸೈಕಲ್ ಸ್ಟ್ಯಾಂಡಿಗೆ ಬಂದು ಸೇರುತ್ತಿತ್ತು.

ಇಲೆಕ್ಷನ್ ಪ್ರಚಾರವೆಂದರೆ ಆಭ್ಯರ್ಥಿ ಹಾಗೂ ಅವನ ಪಡೆಯವರು ಕೈಯಲ್ಲಿ ರಟ್ಟಿನ ಅಥವಾ ಬಟ್ಟೆಯ ಪೋಸ್ಟರ್‌ಗಳನ್ನು ಹಿಡಿದುಕೊಂಡು ಥರಾವರಿ ದನಿಗಳಲ್ಲಿ ವೋಟ್ ಫಾರ್ ಎಂದು ಕೂಗುತ್ತ ಪ್ರದಕ್ಷಿಣೆ ಹಾಕುತ್ತಿದ್ದರು. ನಾನಾ ವೇಷಗಳಲ್ಲಿ ನಾನಾ ಬಗೆಯ ವಾಹನಗಳಲ್ಲಿ ಪ್ರಚಾರದ ಟೋಳಿಗಳು ಫೇರಿ ಹೊಡೆಯುತ್ತಿದ್ದವು. ಕಾಲ್ದಳಗಳಲ್ಲದೆ, ಎತ್ತಿನ ಗಾಡಿಯ ಮೇಲೆ, ಟ್ರಾಕ್ಟರ್ ಗಳ ಮೇಲೆ, ಜೀಪ್‌ಗಳ ಮೇಲೆ ಪ್ರಚಾರ ತಂಡಗಳು ಬರುತ್ತಿದ್ದವು. ರಂಗುರಂಗಾದ ಡೊಳ್ಳಿನ ಕುಣಿತ, ಇತರ ಜಾನಪದ ಕುಣಿತ ವೇಷಧಾರಿಗಳು ತಂಡಗಳಲ್ಲಿ ಇರುತ್ತಿದ್ದರು. ಈ ಎಲ್ಲಾ ತಂಡಗಳು ಬಾಲ್ಕನಿಯ ಕೆಳಗೆ ಬಂದ ಕೂಡಲೇ ಮೈಯ್ಯಾಗ ದೆವ್ವ ಹೊಕ್ಕಂಗ ಅಥವಾ ಮೈಮ್ಯಾಲೆ ದೇವರ ಬಂದ್ಹಂಗ ಎರ್ರಾಬಿರ್ರಿಯಾಗಿ ಕುಣಿಯುತ್ತಿದ್ದವು. ಟೋಳಿಗಳು ಎದುರು–ಬದುರು ನಿಂತು ವೋಟ್ ಫಾರ್ ಬಾಣಗಳನ್ನು ಎಸೆಯುತ್ತಿದ್ದವು. ಅಭ್ಯರ್ಥಿಗಳು ಸ್ಟ್ಯಾಂಡಿನ ಮೇಲೆ ನಿಂತಿದ್ದವರ ಕಾಲುಗಳನ್ನು ಸಾಮೂಹಿಕ ನಮಸ್ಕರಿಸುತ್ತ ಮತ ಕೇಳುತ್ತಿದ್ದರು. ಕುಣಿದು ಸುಸ್ತಾದ ಟೋಳಿಗಳು ಹೆಮ್ಮಾಡಿ ಕ್ಯಾಂಟೀನ್ ಕಡೆಗೆ ಹೋಗಿ ಸುಧಾರಿಸಿಕೊಂಡು ಮರಳಿ ಬರುತ್ತಿದ್ದವು. ಹಲವಾರು ಅಭ್ಯರ್ಥಿಗಳು ದಣಿವು, ಒತ್ತಡದಿಂದಾಗಿ ಪ್ರಚಾರ ಮಾಡುತ್ತಲೇ ತಲೆ ಸುತ್ತಿ ಬೀಳುತ್ತಿದ್ದರು. ಆಗ ಅವರ ನಾಲ್ಕು ಜನ ಅನುಯಾಯಿಗಳು ಆವರನ್ನು ಅನಾಮತ್ತಾಗಿ ಎತ್ತಿಕೊಂಡು ಬಾಲ್ಕನಿಯವರಿಗೆ ಕಾಣುವ ಹಾಗೆ ಎರಡು ಮೂರು ಸಾರಿ ಸುತ್ತಿ ಅಭ್ಯರ್ಥಿಗಳ ಬಗ್ಗೆ ಕರುಣಾರಸ ಉಕ್ಕಿದೆಯೆನ್ನುವುದನ್ನು ಖಾತ್ರಿ ಮಾಡಿಕೊಂಡು ಹೋಗುತ್ತಿದ್ದರು. ಆದರೆ, ಬಾಲ್ಕನಿಯ ಮೇಲಿಂದ ಹುಡುಗಿಯರ ದನಿಗಳು 'ಏ ನೋಡು ಮಂಗ್ಯಾ! ಮತ್ತೊಂದು ಹೆಣ ಬಿತ್ತು ಎಂದು' ಕಿಲಕಿಲ ನಗುತ್ತಾ ತಮ್ಮ ಸಹಜ ಕ್ರೌರ್ಯವನ್ನು ತೋರುತ್ತಿದ್ದರು. ಕೆಲವು ಅಭ್ಯರ್ಥಿಗಳು ಹೀಗೆ ಎರಡು ಮೂರು ಸಾರಿ ಬಿದ್ದಾಗ ವಿರೋಧ ಪಕ್ಷದವರು 'ಇಂವಗ ಯಾರೂ ವೋಟು ಹಾಕಬ್ಯಾಡರಿ, ಅಂವಗ ಮೂರ್ಛಾ ರೋಗ ಐತಿ' ಎಂದು ಕೂಗುತ್ತಿದ್ದರು. ಬಾಲ್ಕನಿಯ ಲಲನೆಯರು 'ಭಾಳ ಓವರ್ ಆತು, ಇಂವಗ ಯಾರರ ಒನ್ಸ್ ಮೋರ್ ಅಂದಾರೇನು' ಅಂತ ಬಾಣ ಬಿಡುತ್ತಿದ್ದರು. ಮುಖ್ಯವಾಗಿ ನಮ್ಮಂಥ ಪಡ್ಡೆಗಳಿಗೆ ಹುಡುಗಿಯರನ್ನು ಮಾತನಾಡಿಸಲು ಇದೊಂದು ಸಾರ್ವಜನಿಕ ಅವಕಾಶವಾಗಿತ್ತು.

ಆ ವರ್ಷ ಅಭ್ಯರ್ಥಿಗಳು ಹೊಸ ಪ್ರಚಾರ ತಂತ್ರವನ್ನು ಕಂಡುಹಿಡಿದರು. ಮುಖ್ಯ ಕಟ್ಟಡದ ಮುಂದಿನಿಂದ ಮೊದಲ ಮಹಡಿಗೆ ಹೋಗಲು ಕಬ್ಬಿಣದಿಂದ ಮಾಡಿದ ವಿಶಾಲವಾದ ಮೆಟ್ಟಿಲುಗಳಿದ್ದವು. ಇವು ಕರ್ನಾಟಕ ಕಾಲೇಜು ಬ್ರಿಟಿಷರ ಕಾಲದ ರೇಲ್ವೆ ಆಫೀಸ್ ಆಗಿದ್ದಾಗಿನ ಕುರುಹುಗಳು ಕೂಡ. ಆ ವರ್ಷ ಅಭ್ಯರ್ಥಿಗಳು ಈ ಪಾವಟಿಗೆಗಳ ಮಧ್ಯ ಒಬ್ಬರ ಹಿಂದೆ ಒಬ್ಬರು ಕುಳಿತು ಎರಡು ಕಡೆಗೆ ಮೆಟ್ಟಿಲು ಹತ್ತುವ ಹುಡುಗಿಯರಿಗೆ ಕಾಲು ಮುಟ್ಟಿ ಮತ ಕೇಳತೊಡಗಿದರು. ಹುಡುಗಿಯರು ಗುಂಪಾಗಿ ಬಂದು ಧಡಧಡನೆ ಮೆಟ್ಟಿಲು ಓಡಿಕೊಂಡೇ ಹತ್ತುತ್ತಿದ್ದರು. ಆದರೂ ಅಷ್ಟರಲ್ಲಿಯೇ ಅಭ್ಯರ್ಥಿಗಳು ಕಾಲು ಮುಟ್ಟುತ್ತಿದ್ದರು. ಇದರಿಂದ ರೋಮಾಂಚನಗೊಂಡ ಅಪ್ಪಿ ಸೈಕಲ್ ಸ್ಟ್ಯಾಂಡಿನಲ್ಲಿ ಕುಳಿತಿದ್ದ ನನಗೆ ಬಂದು ಹೇಳಿದ. 'ಅಲ್ಲರೀ ಸರ, ಈ ಜಲ್ಮದಾಗ ನಾಗುತ್ತೋ, ನಮ್ಮ ಹಣ್ಯಾಗ ಏನ್ ಬರದದೋ ಯಾಂಬಲ್ಲ? ಕಾಲ ಆದರೂ ಮುಟ್ಟೋಣ ಬರ್ರಿ' ಅಂದ. ನಾನು ಆಗಲಿ ಎಂದು ಟಣ್ಣನೆ ಸ್ಟ್ಯಾಂಡಿನಿಂದ ಹಾರಿದೆ. ನಮ್ಮ ಮಾತು ಕೇಳುತ್ತಿದ್ದ ಅನು ತನ್ನ ಕೆಂಡಸಂಪಿಗೆಯಂಥ ಮೂಗನ್ನು ಕೆಂಪಗೆ ಮಾಡಿಕೊಂಡು ವಾಟ್ ಡು ಯು ಥಿಂಕ್ ಯು ಆರ್ ಪ್ಲ್ಯಾನಿಂಗ್ ಟು ಡು ಜಂಟಲ್ಮೆನ್?' ಎಂದು ಸುಂದರವಾದ ಇಂಗ್ಲಿಷಿನಲ್ಲಿ ನಮ್ಮಿಬ್ಬರನ್ನು ಹೀನಾಮಾನವಾಗಿ ಬೈದ. ನಾವು ವಿಲೇಜ್ ಈಡಿಯಟ್ಸ ಎಂದು ಹೇಳಿದ. ಹೀಗಾಗಿ ನಮ್ಮ ಪಡ್ಡೆ ಕೈಗಳು ಪವಿತ್ರವಾಗಿಯೇ ಉಳಿದವು.

ಅಷ್ಟರಲ್ಲಿ ಆ ಕಡೆಯಿಂದ ಹೋ ಎಂದು ಕೂಗೆದ್ದಿತು. ಏನು ಎಂದು ನೋಡಿದರೆ ಇಲೆಕ್ಷನ್ನಿನ ಹಳಕಟ್ಟಿ ಎನ್ನುವ ಅಭ್ಯರ್ಥಿಯೊಬ್ಬ ಪ್ರಚಾರಕ್ಕಾಗಿ ಮುರುಘಾಮಠದ ಆನೆಯನ್ನೇ ತಂದಿದ್ದಾನೆ. ಕುಳ್ಳಗೆ ಮಟ್ಟಸವಾಗಿದ್ದು ಅಗಲವಾದ ಕಿವಿಗಳಿದ್ದ ಅವನು ಆನೆಯ ಮೇಲೆ ಕುಳಿತು ಎಲ್ಲರಿಗೂ ಕೈ ಮುಗಿಯುತ್ತಾ ಬರುತ್ತಿದ್ದ. ಥೇಟು ಆನೆಯ ಮೇಲೆ ಒಂದು ಮರಿ ಆನೆ ಕುಳಿತಂತೆ ನಿಧಾನವಾಗಿ ದಾಪುಗಾಲಿಡುತ್ತಾ ಬರುತ್ತಿದ್ದ ಆನೆ ಹುಡುಗಿಯರ ಬಾಲ್ಕನಿಯ ಕೆಳಗೆ ಬಂದ ಕೂಡಲೇ ಮಾವುತನ ಸೂಚನೆಯಂತೆ ಸೊಂಡಿಲು ಮೇಲಕ್ಕೆತ್ತಿ ಸಲಾಮು ಹೊಡೆಯಿತು. 'ಕೀ ಹೋ' ಎಂದು ಹಳಕಡ್ಡಿಯ ಹಿಂಬಾಲಕರು ಮೈಯಲ್ಲಿ ಗಾಳಿ ಹೊಕ್ಕಂತೆ ಕುಣಿಯತೊಡಗಿದರು. ಇತರ ಅಭ್ಯರ್ಥಿಗಳು ತಂದ ಲೇಜೀಮ್ ತಂಡಗಳು, ಹಲಗೆ ತಂಡಗಳು, ಟ್ರಾಕ್ಟರ್ ತಂಡಗಳು ಹೊಸ ಆವೇಶದಿಂದ ಕೀಸರು–ಬಾಸರು ಹಿಡಿಸಿದವು.

ಇವೆಲ್ಲವುಗಳ ಮಧ್ಯೆ ಜಾಡರ ಕೆಲವು ಪಿಯುಸಿ ವಿದ್ಯಾರ್ಥಿಗಳನ್ನು ಕಾಡಿ ಬೇಡಿ ಕರೆದುಕೊಂಡು ಬಂದು ಪ್ರಚಾರದಲ್ಲಿ ತೊಡಗಿದ ಅಪ್ಪಿ ನಿಷ್ಠೆಯಿಂದ 'ವೋಟ್ ಫಾರ್' ಎಂದು ಕೂಗುತ್ತಾ ಅವನ ಜೊತೆಗೆ ಸೇರಿಕೊಂಡ. ನಾನು ಮತ್ತು ಅಪ್ಪಿ ನೆಪಕ್ಕೆ ಮಾತ್ರ ಸ್ವಲ್ಪ ಹೊತ್ತು ಜೊತೆಗಿದ್ದು ನಮ್ಮ ತರಗತಿಯ ಹುಡುಗಿಯರು ಇಲ್ಲವೆಂದು ಖಾತ್ರಿ ಮಾಡಿಕೊಂಡು ಒಂದಿಷ್ಟು 'ವೋಟ್ ಫಾರ್' ಗಳನ್ನು ಕೂಗಿ ಮೆಲ್ಲಗೆ ಜಾರಿಕೊಂಡು ಬಿಟ್ಟೆವು. ಇಡೀ

ಕಾಲೇಜು ರಂಗು ರಂಗಿನ ಇಲೆಕ್ಷನ್ ಪ್ಯಾಂಫ್ಲೆಟ್‌ಗಳಿಂದ ತುಂಬಿ ಹೋಗಿತ್ತು. ಕವಿ ಮತ್ತು ಡಿಬೇಟರ್ ಎಂದು ಪರಿಚಿತವಾಗಿದ್ದ ನಾನು ಕೇಳಿದ ಎಲ್ಲಾ ಅಭ್ಯರ್ಥಿಗಳಿಗೂ ಪ್ರತಿಸ್ಪರ್ಧಿಯಾಗಿದ್ದ ಅಭ್ಯರ್ಥಿಗಳಿಗೂ – ಕನ್ನಡ, ಇಂಗ್ಲಿಷ್, ಹಿಂದಿಯಲ್ಲಿ ಪ್ಯಾಂಫ್ಲೆಟ್‌ಗಳನ್ನು, ಅದಕ್ಕಾಗಿ ಚಿಕ್ಕ ಪದ್ಯಗಳನ್ನು ಬರೆದುಕೊಟ್ಟಿದ್ದೆ.

ಸಾಯಂಕಾಲವಾದ ಕೂಡಲೇ ಮನೆಗಳಿಗೆ, ಹಾಸ್ಟೇಲುಗಳಿಗೆ ಹೋಗಿ ಪ್ರಚಾರ ಮಾಡುವ ಭರಾಟೆ ಶುರು ಆಯಿತು. ನನ್ನ ಅಣ್ಣನ ಮುಸ್ಲಿಂ ಗೆಳೆಯನೊಬ್ಬ ಕೂಡ ಸ್ಪರ್ಧಿಯಾಗಿದ್ದ. ನಮ್ಮ ಲೆಕ್ಕಾಚಾರದ ಪ್ರಕಾರ ಅವನಿಗೆ ಒಂದಿಷ್ಟು ಲಿಂಗಾಯತರ ವೋಟುಗಳು ಬಂದರೆ ಗೆಲ್ಲಬಹುದಾಗಿತ್ತು. ಅವನ ಅಡ್ಡ ಹೆಸರು (ಸರ್‌ನೇಮ್) ಜವಳಿಯಾಗಿತ್ತು. ಧಾರವಾಡ ಪ್ರಾಂತ್ಯದ ಅನುಕೂಲವೆಂದರೆ ಅನೇಕ ಅಡ್ಡಹೆಸರುಗಳಂತೆ ಇದು ಲಿಂಗಾಯತರಲ್ಲಿ ಸಾಮಾನ್ಯವಾದ ಅಡ್ಡ ಹೆಸರಾಗಿತ್ತು. ಆದ್ದರಿಂದ ಲಿಂಗಾಯತ ಮಠದ ಹಾಸ್ಟೇಲುಗಳಲ್ಲಿ ಅವನು ಲಿಂಗಾಯತ ಎಂದು ಪ್ರಚಾರ ಮಾಡುವುದಾಗಿ ನಿರ್ಧರಿಸಿದ್ದೆವು. ಸಾಯಂಕಾಲ ಮಠದ ಹಾಸ್ಟೆಲ್ ಹುಡುಗಿಯರು ಪ್ರಾರ್ಥನೆಗಾಗಿ ಸೇರುವ ಹೊತ್ತಿಗೆ ಅಲ್ಲಿಗೆ ಹೋದೆವು. ಮನೆಯಿಂದ ತಂದಿದ್ದ, 'ಈಬತ್ತಿ ಉಂಡಿಯಿಂದ' ಹಣೆಗೆ ಎಲ್ಲರೂ ನಾಮ ಬಳಿದುಕೊಂಡು ಪ್ರಾರ್ಥನೆಗೆ ಸೇರಿಕೊಂಡೆವು. ಹುಟ್ಟಾ ನಾಸ್ತಿಕರಾದ ನಮಗೆ ದೈವ ಭಕ್ತಿಯ ಭಾವನೆ ಹೇಗೆ ತೋರಿಸುವುದು ಎಂದು ಸರಿಯಾಗಿ ಹೊಳೆಯಲಿಲ್ಲ. ಆದಷ್ಟು ಪೆದ್ದು ಪೆದ್ದಾದ ಕಳೆಯನ್ನು ಮುಖದ ಮೇಲೆ ತಂದುಕೊಂಡು ಮಣಮಣವೆಂದು ಪ್ರಾರ್ಥನೆಯಲ್ಲಿ ಸೇರಿಕೊಂಡೆವು. ಆನಂತರ ಐದು ನಿಮಿಷದ ಪ್ರಚಾರ ಭಾಷಣದಲ್ಲಿ ಜವಳಿ 'ನಮ್ಮವರು' ಎನ್ನುವ ಮೆಸೇಜ್ ಕೊಟ್ಟೆವು.

ಇಂಥಾ ನೂರು ಭಾನಗಡಿಗಳನ್ನು ಮಾಡಿ ಅಭ್ಯರ್ಥಿಗಳು ಪ್ರಚಾರದಲ್ಲಿ ತೊಡಗಿದರು. ಇಡೀ ಕಾಲೇಜು ಇಲೆಕ್ಷನ್ ಎನ್ನುವ ಸಮೂಹ ಸನ್ನಿಯಲ್ಲಿ ಮತ್ತು ಏರಿದಂತೆ ವಾಲಾಡುತ್ತಿತ್ತು. ತಾನು ಗೆಲ್ಲುವುದಿಲ್ಲವೆಂದು ಅರ್ಥ ಮಾಡಿಕೊಂಡ ಜಾಡರ ಅದಕ್ಕೆ ನಮ್ಮ ಟೋಳಿ ಮಾಡಿದ ವಿಶ್ವಾಸಘಾತ ಕಾರಣವೆಂದು ಹೇಳತೊಡಗಿದ. ಹೀಗಾಗಿ ಪ್ರಚಾರದ ಕೊನೆಯ ದಿನಗಳಂದು ನಾನು ಮತ್ತು ಅ– ಭರದಿಂದ ಪ್ರಾಮಾಣಿಕವಾಗಿ ಪ್ರಚಾರದಲ್ಲಿ ಧುಮುಕಿದೆವು. ಮುಖ್ಯವಾಗಿ ಎಲ್ಲಾ 'ಸಿಸ್ಟರ್'ಗಳಲ್ಲಿ ಅವನ ಪರವಾಗಿ ಮತ ಯಾಚಿಸಿದೆವು. ಮತದಾನದ ದಿನವಂತೂ ನಮ್ಮ ಪರವಾಗಿದ್ದ ಗ್ಯಾರಂಟೀ ಮತದಾರರು ಒಬ್ಬೊಬ್ಬರು ಬಂದರೂ ಖುಷಿಪಡುತ್ತ, ಉಳಿದವರನ್ನು ಕಾರುಗಳಲ್ಲಿ ಮನೆಗಳಿಂದ ಕರೆತರುತ್ತ ದಿನ ಕಳೆದೇ ಹೋಯಿತು. ಮತಗಳ ಎಣಿಕೆ ಮುಗಿದಾಗ ರಾತ್ರಿಯಾಗುತ್ತ ಬಂದಿತ್ತು. ಜಾಡರನನ್ನು ಸಂತೈಸಲು ಬಾರಿನ ಕಡೆಗೆ ನಡೆದವು.

**ಮನ ಸೂರೆ ಹೋಯಿತೋ ಪೋಲಿಮನ**

`ಮರೀಬ್ಯಾಡರಿ ಮತ್ತ, ಇವತ್ತ ರಾತ್ರಿ ಮನಸೂರ ಅವರ ಹಾಡಿನ ಪ್ರೋಗ್ರಾಮ್ ಐತಿ. ಹಿಂಗಾಗಿ ಶೆರೆ–ಗಿರೆ ಕುಡಿಯೋ ಐಡಿಯಾನೂ ತಲ್ಯಾಗ ಹಾಕ್ಕೋಬ್ಯಾಡರಿ` ಎಂದು ಜಾಡರ ತಾಕೀತು ಮಾಡಿದ. ನಾನು ಮತ್ತು ಅಪ್ಪಿ 'ಛೆ ಛೆ' ಎಂದು ತಲೆ ಅಲ್ಲಾಡಿಸಿದೆವು. ಹಾಗೆಯೇ ಇವನೆಂಥ ಡಫರ್ ನನ್ ಮಗ ಎಂದು ಮೂಕ ವಿಷಾದದಿಂದ ಅವನ ಕಡೆಗೆ ನೋಡಿದೆವು. ನಮ್ಮ ಉಸ್ತಾದ ಮಲ್ಲಿಕಾರ್ಜುನ ಮನಸೂರರು ಹಾಡುವುದೆಂದರೇನು? ನಾವು ಹಾಡು ಕೇಳಲು ಶೆರೆ ಕುಡಿದುಕೊಂಡು ಹೋಗುವುದೆಂದರೇನು?

ಮನಸೂರರ ಖಾಯಂ ಭಕ್ತರಾದ ನಾವು ಅವರ ಸಂಗೀತವನ್ನು ಎಂದೂ ತಪ್ಪಿಸಿಕೊಳ್ಳುತ್ತಿದ್ದಿಲ್ಲ. ಅದರಲ್ಲೂ ಅವರ ಗುರುಗಳ ಹೆಸರಿನಲ್ಲಿ ಅವರು ಇಡೀ ರಾತ್ರಿ ನಡೆಸುತ್ತಿದ್ದ ಸಂಗೀತ ಗೋಷ್ಠಿಯನ್ನು ತಪ್ಪಿಸಿಕೊಂಡಿದ್ದೇ ಇಲ್ಲ. ಅಲ್ಲಿಯವರೆಗೂ ಆಕಾಶವಾಣಿ ಕಚೇರಿಯಿಂದ ಆಚೆಗಿದ್ದ ಅವರ ಮನೆಯಲ್ಲಿ ಸಣ್ಣ ಪ್ರಮಾಣದಲ್ಲಿ ಆ ಕಾರ್ಯಕ್ರಮ ನಡೆಯುತ್ತಿತ್ತು. ಅಷ್ಟೇನೂ ದೊಡ್ಡಮನೆ ಅಲ್ಲದ್ದರಿಂದ ನಾವು ಕಿಟಕಿಯ ಹೊರಗೆ ನಿಂತು ಕೇಳುತ್ತಿದ್ದೆವು. ಸಭ್ಯತನದ ಕಿಂಚಿತ್ತೂ ಲಕ್ಷಣಗಳು ನಮ್ಮಲ್ಲಿ ಕಾಣುತ್ತಿರಲಿಲ್ಲವಾದ್ದರಿಂದ ನಾವು ಸಂಗೀತ ಕೇಳಲು ಬಂದಿದ್ದೇವೆಂದು ಅವರ ಮಗ ರಾಜಶೇಖರ ಮನಸೂರರು ನಂಬುತ್ತಿರಲಿಲ್ಲ. ಆದರೂ ಅವರಿಂದ ಬೈಸಿಕೊಂಡರೂ ನಮ್ಮ ಉಸ್ತಾದರ ಹಾಡಿಗಾಗಿ ನಿಂತೇ ಕೇಳುತ್ತಿದ್ದೆವು. ಕ್ರಮೇಣ ಆ ಕಾರ್ಯಕ್ರಮ ದೊಡ್ಡದಾಗುತ್ತ ಬಂದಿದ್ದರಿಂದ ಆ ವರ್ಷ ನಮ್ಮ ಕಾಲೇಜಿನ ದಿನ್ನೆಯ ಕೆಳಗಿನ ಪುರುಷೋತ್ತಮ ಭವನಕ್ಕೆ ವರ್ಗಾವಣೆ ಆಗಿತ್ತು. ಮನಸೂರರು, ಬೇಂದ್ರೆಯವರು ಎಲ್ಲಿದ್ದರೂ ಅವರ ಸುತ್ತ ಒಂದು ಪುಟ್ಟ ಧಾರವಾಡ ಹುಟ್ಟಿಕೊಳ್ಳುತ್ತಿತ್ತು. ಅವರ ಗೆಳೆಯರು, ಶಿಷ್ಯರು ಹಾಗೂ ಅಭಿಮಾನಿಗಳು ಮತ್ತು ಕೊನೆಯದಾಗಿ ನಮ್ಮಂಥ ಏಕಲವ್ಯರು ಇದ್ದೇ ಇರುತ್ತಿದ್ದೆವು. ಆ ಕಾರ್ಯಕ್ರಮದಲ್ಲಿ ಮನಸೂರರು ಹಾಡುತ್ತಿದ್ದುದು ಕೊನೆಗೆ. ಅಲ್ಲಿಯವರೆಗೆ ಬೇರೆಯವರು ಕೆಲವೊಮ್ಮೆ ನಾವು ಪತ್ರಿಕೆಗಳಲ್ಲಿ ಮಾತ್ರ ಕೇಳಿದ್ದ ಖ್ಯಾತನಾಮರು ಬಂದು ಮನಸೂರರ ಗುರುಗಳಿಗೆ ತಮ್ಮ ಕಾಣಿಕೆಯೆನ್ನುವ ಭಾವನೆಯಲ್ಲಿ ಹಾಡುತ್ತಿದ್ದರು.

`ಸರ, ನೋಡರಿ, ಇವತ್ತ ಕಾನನ್ ದಂಪತಿಗಳು ಬಂದಾರ` ಎಂದು ಮೆಲ್ಲಗೆ ಉಸುರಿದ. ಮಾಲವಿಕಾ ಕಾನನ್ ಮತ್ತು ಎ.ಕೆ.ಕಾನನ್ ವೇದಿಕೆಯ ಹತ್ತಿರ ಬಂದು ಮನಸೂರರ ಕಾಲಿಗೆರಗಿ ನಮಸ್ಕಾರ ಮಾಡಿ ಆಮೇಲೆ ಸಂಗೀತ ಶುರು ಮಾಡಿದರು. ಧಾರವಾಡದ ಆಚೆಗೆ ಜಗತ್ತೇ ಇಲ್ಲವೆಂದುಕೊಂಡಿದ್ದ ನಮಗೆ ಈ ಖ್ಯಾತ ದಂಪತಿಗಳು ನಮ್ಮ ಉಸ್ತಾದರ ಕಾಲಿಗೆರಗಿದ್ದು ನಮ್ಮೂರಿನ ದಿಗ್ವಿಜಯವಾಗಿ ಕಂಡಿತ್ತು.

ಪುರುಷೋತ್ತಮ ಭವನದಲ್ಲಿಯಾದರೂ ಕಾರ್ಯಕ್ರಮ 'ಸಾರ್ವಜನಿಕ'ವಾಗಿರಲಿಲ್ಲ. ಹಾಲ್‌ನ ಒಂದು ಕಡೆ ಮಧ್ಯದಲ್ಲಿ ಸಂಗೀತಗಾರರಿಗೆ ಅಷ್ಟೇನೂ ಎತ್ತರವಲ್ಲದ ವೇದಿಕೆಯಿತ್ತು. ಅದರ ಸುತ್ತಲೂ ಮೊದಲ ಸಾಲುಗಳಲ್ಲಿ ಸಂಗೀತವನ್ನು ಆತ್ಮೀಯವಾಗಿ ಬಲ್ಲವರ ಒಂದು ಗುಂಪಿರುತ್ತಿತ್ತು. ಮನಸೂರರು ಸೇರಿದಂತೆ ಎಲ್ಲರೂ ಅವರಿಗಾಗಿ ಹಾಡಿದಂತೆ ಅನ್ನಿಸುತ್ತಿತ್ತು. ಕೇಳುತ್ತಿರುವವರ ಶರೀರಗಳು ಸಂಗೀತದ ಲಯದ ಏರಿಳಿತದಂತೆ ಓಲಾಡುತ್ತ, ತೂಗುತ್ತ, ನಿರೀಕ್ಷಿಸುತ್ತ, ಒಪ್ಪುತ್ತ, ಮೆಚ್ಚುತ್ತ ಮೆಲ್ಲನೆ 'ವಾಹ್' ಎನ್ನುತ್ತ ಮಿಡಿಯುತ್ತಿದ್ದವು. ಹಾಡುವವರ ಮತ್ತು ಹತ್ತಿರದ ಆ ಕೇಳುಗರ ಮಾತಿಲ್ಲದ ಬಾಂಧವ್ಯದಲ್ಲಿ ರಾಗಗಳು ಹುಟ್ಟಿ, ತೇಲಿ, ವಿಸ್ತಾರಗೊಂಡು ಹಬ್ಬುತ್ತಿದ್ದವು. ಒಂದೇ ಒಂದು ರಾಗದ ಹೆಸರೂ ಗೊತ್ತಿರದ ನಮ್ಮನ್ನು ಕೂಡ ತನ್ನ ದೊಡ್ಡ ಅಂತಃಕರಣದಿಂದ ತೆಕ್ಕೆಯಲ್ಲಿ ತೆಗೆದುಕೊಂಡು ಸಂಗೀತ ಆವರಿಸಿಕೊಳ್ಳುತ್ತಿತ್ತು. ಅಂಚಿನಲ್ಲಿ ಕುಳಿತ ನಮಗೆ ಸಂಗೀತ ಒಬ್ಬ ವ್ಯಕ್ತಿಯಿಂದ ಎನ್ನುವ ಹುಚ್ಚು ಕಲ್ಪನೆಗಳು ಕರಗಿ ಹೋಗುತ್ತಿದ್ದವು.

ಧಾರವಾಡದ ಹಿರಿತಲೆಗಳು ಅಲ್ಲಿ ನೆರೆದಿದ್ದವು. ನಾವು ಕುಳಿತಲ್ಲಿಯೇ ನಮಗೆ ಗೊತ್ತಿದ್ದ ಪುರಾಣಗಳನ್ನು ಹಂಚಿಕೊಳ್ಳುತ್ತಿದ್ದೆವು. ಇವತ್ತು ಉಸ್ತಾದರಿಗೆ ಸಾಥಿ ಯಾರು ಕೊಡ್ತಾರ ನೋಡಬೇಕು. ತಬಲಾ ಮ್ಯಾಲಂತೂ ಬಾಬುರಾವ್ ಬೆಂಡಿಗೇರಿನ ಕಾಯಂ ಅಂತ ಕಾಣ್ತೈತಿ ಎಂದು ಜಾಡರ ಹೇಳಿದ. ನಮ್ಮ ಕಲ್ಪನೆಯಲ್ಲಿ ಮನಸೂರರಿಗೆ ಸಾಥ್ ಕೊಡುವ ಛಾತಿ ಬಹಳ ಜನರಿಗೆ ಇರಲಿಲ್ಲ. ಅತ್ಯಂತ ಪ್ರಯೋಗಶೀಲರೂ ಮತ್ತು ಅಷ್ಟೇ ಮುಂಗೋಪಿಗಳೂ ಆಗಿದ್ದ ಮನಸೂರರಿಗೆ ಅವರಷ್ಟೇ ಆಗಿರದ 'ಸಾಥ್' ಸಿಗದಿದ್ದರೆ ತಾಳ್ಮೆ ಹೋದಂತೆ ಕಾಣುತ್ತಿತ್ತು. ಒಂದು ಸಾರಿ ತಾಳ್ಮೆಗೆಟ್ಟು 'ಸಾಥ್' ಕೊಡುತ್ತಿದ್ದವರ ಕೆನ್ನೆಗೆ ಹೊಡೆದಿದ್ದರೆಂಬ ದಂತಕತೆ ಬೇರೆ ಪ್ರಚಲಿತವಿತ್ತು. ಕೆಲವೊಮ್ಮೆ 'ಪೇಟಿ' ಹಿಡಿದುಕೊಂಡು ಬಸವರಾಜ ಮನಸೂರರು ಜೊತೆಗೊಡುತ್ತಿದ್ದರು. ಮನಸೂರರ ಹಠಯೋಗಿಯ ಚರ್ಯೆಗಳಿಗೆ ವಿರುದ್ಧವಾದ ಸುಂದರ ಮಂದವಾದ ನಗು ಬಸವರಾಜರ ಮುಖದಲ್ಲಿ. ಹೆಚ್ಚಾಗಿ ಶಿಷ್ಯರಾದ ಪಂಚಾಕ್ಷರಿ ಮತ್ತೀಘಟ್ಟಿಯವರೇ ಮನಸೂರರ 'ಸಾಥ್' ಕೊಡುತ್ತಿದ್ದರು.

ಹೊರಗೆ ಹೊರಟಾಗ ಹಾಕುತ್ತಿದ್ದ ಕಪ್ಪು ಕೋಟನ್ನು ತೆಗೆದಿಟ್ಟು ಮನಸೂರರು ಬಿಳಿ ಜುಬ್ಬವನ್ನು ಹಾಕಿದ್ದರು. ಕರಿ ಟೊಪ್ಪಿಗೆ ತೆಗೆದಿಟ್ಟಿದ್ದರಿಂದ ಮಧ್ಯ ಬೊಕ್ಕವಾದ ಉದ್ದವಾದ ಅವರ ತಲೆ ಹಾಲ್‌ನ ದೀಪಗಳ ಬೆಳಕಲ್ಲಿ ಹೊಳೆಯುತ್ತಿತ್ತು. ಹಾಡಲು ತೊಡಗಿದರೆಂದರೆ ಅವರ ಅಗಲವಾದ ದವಡೆಗಳು ಚಲಿಸುತ್ತಿದ್ದವು; ಮುಖ ಎತ್ತಿ ಹಾಡುತ್ತಿದ್ದರಿಂದ ಮೂಗಿನ ಹೊರಳೆಗಳು ಅಗಲವಾಗಿ ಬಿರಿದುಕೊಂಡಂತೆ ಅನ್ನಿಸುತ್ತಿತ್ತು. ಆದರೆ ಅವರ ನೂಲಿನಂತಹ ತೆಳುವಾದ ದನಿ ಸ್ವರಗಳನ್ನು ಹುಟ್ಟಿಸಿ, ಹಿಂಬಾಲಿಸಿ ಹಿಂಜಿ ಬಂಗಾರದ ಸೂಕ್ಷ್ಮ ಎಳೆಗಳಂತೆ ಎಳೆದು ಬಗ್ಗಿಸುವಾಗ ಇದೆಲ್ಲಾ ಮರೆತು ಹೋಗುತ್ತಿತ್ತು. ಅವರಿಗೇ ವಿಶಿಷ್ಟವಾದ ಆಲಾಪದಲ್ಲಿ ಸ್ವರಗಳು ಹತ್ತಾರು

ಅವತಾರಗಳನ್ನು ತೋರಿಸುತ್ತಾ, ತುಂಬಾ ತೆಳುವಾಗಿ ಗಾಳಿಯಲ್ಲಿ ಲಯವಾದವೆಂದು ಆಶ್ಚರ್ಯದಿಂದ ನಾವು ಕಾಯುತ್ತಿದ್ದಾಗ ಈ ಗಾರುಡಿಗ ಅವುಗಳ ಇನ್ನೊಂದು ಅನೂಹ್ಯವಾದ ಎಳೆಯನ್ನು ಹಿಡಿದು ಮತ್ತೆ ಈ ಲೋಕಕ್ಕೆ ಕರೆತರುತ್ತಿದ್ದರು. ಆಗ ನಮಗೆ ಗೊತ್ತಿಲ್ಲದೇ ನಮ್ಮ ಶರೀರಗಳು ಲಯವಾಗಿ ಮತ್ತೆ ಶರೀರ ಪಡೆದ ಸ್ವರಗಳೊಂದಿಗೆ ಮಿಡಿಯುತ್ತಿದ್ದವು. ನಮ್ಮ ಪಡ್ಡೆ ಅನುಭವಗಳ ಮಿತಿಗಳೊಳಗೆ ಬರಲು ಸಾಧ್ಯವೇ ಇಲ್ಲದ ಭಾವಲೋಕಗಳು ಯಾವುದೋ ಜನ್ಮದ ಸಂಸ್ಕಾರಗಳಂತೆ ನಮ್ಮಲ್ಲಿ ಎಚ್ಚರಗೊಳ್ಳುತ್ತಿದ್ದವು.

ಹುಟ್ಟಿನಿಂದ ಲಿಂಗಾಯತನಾಗಿದ್ದರಿಂದ ವಚನಗಳೆಂದರೆ ನನಗೆ ನಿಷಿದ್ಧವೆಂದು ಅವುಗಳನ್ನು ಓದಿದರೆ, ಕೇಳಿದರೆ ನನ್ನ bohemian ವ್ಯಕ್ತಿತ್ವ ನಾಶವಾಗುವುದು ಎಂದು ನಾನು ನಂಬಿದ್ದೆ. ಆದರೆ ಅಂದು ಕುಳಿತವರಲ್ಲಿ ಒಬ್ಬರು ಹೇಳಿದ್ದರಿಂದ ಮನಸೂರರು ಅಕ್ಕನ ವಚನ 'ಅಕ್ಕಾ ಕೇಳವ್ವ ನಾನೊಂದು ಕನಸ ಕಂಡೆ' ಹೇಳತೊಡಗಿದರು. 'ಅಕ್ಕಿ, ಅಡಿಕೆ ತೆಂಗಿನಕಾಯಿ' 'ಸುಲಿಪಲ್ಲ ಗೊರವ' ಎಲ್ಲವೂ ಮನಸೂರರ ದನಿಯಲ್ಲಿ ಮೂರ್ತಗೊಂಡು ಅಕ್ಕನ ಜೊತೆಗೆ ನಾನೂ ಪ್ರೀತಿಯೆಂಬ ಕದಳಿವನವನ್ನು ಹೊಕ್ಕುಬಿಟ್ಟೆ. ಅಕ್ಕ ಕಂಡ ಕನಸು ನಮ್ಮ ಎಚ್ಚರ, ಮರೆವಿನ ಎಲ್ಲಾ ಸ್ತರಗಳನ್ನು ಆವರಿಸಿಕೊಂಡಿತ್ತು. ತಮ್ಮ ಹಾಡುಗಾರಿಕೆಯನ್ನು ಮುಗಿಸುವ ಮೊದಲು ಉತ್ತರ ಭಾರತದಿಂದ ಬಂದ ಅತಿಥಿಗಳ 'ಫರ್ಮಾಯಿಶ್'ಗೆ ಒಪ್ಪಿ ಮನಸೂರರು ನಮ್ಮೆಲ್ಲರ ಇನ್ನೊಬ್ಬ ಅಕ್ಕ ಮೀರಾಬಾಯಿಯ 'ಮತ್ ಜಾ ಜೋಗಿ ಮತ್ ಜಾ' ಹೇಳತೊಡಗಿದರು. ಆ ಮಾಂತ್ರಿಕ ಜೋಗಿಯನ್ನು ಆವಾಹಿಸುತ್ತ, ಕಾಡುತ್ತ, ಬೇಡುತ್ತ, ಲಲ್ಲೆಗರೆಯುತ್ತ ಬೊಕ್ಕತಲೆಯ ನಮ್ಮ ಉಸ್ತಾದರು ದಿವ್ಯಪ್ರೀತಿಯ ಅಭಿಸಾರಿಕೆಯಾಗಿಬಿಟ್ಟರು. ಜಗದ ಹಂಗು ತೊರೆದ 'ದಿವಾನಿ'ಯಾಗಿಬಿಟ್ಟರು. ನಾವು ಎಲ್ಲಿದ್ದೆವು ಏಕೆ ಎನ್ನುವುದರ ಪರಿವೆ ಯಾವಾಗಲೋ ಹೊರಟೇ ಹೋಗಿತ್ತು. ಸದ್ಯ ನಮ್ಮ ಹಾಗೆಯೇ ಹಾಲ್‌ನಲ್ಲಿದ್ದ ಮೊಕಾಶಿ ಪುಣೇಕರ್, ಗಿರೀಶ ಕಾರ್ನಾಡರೂ ಅಭಿಸಾರಿಕೆಯಂತೆ ಕುಳಿತದ್ದನ್ನು ನೋಡಿ ನಮಗೆ ಮುಜುಗರವಾಗಲಿಲ್ಲ. ಅಷ್ಟರಲ್ಲಿ ಮನಸೂರರು 'ಪಂಪಾನಗರಿ ನಿವಾಸಿ' ಹೇಳುತ್ತ ಕಾರ್ಯಕ್ರಮಕ್ಕೆ ಮಂಗಳ ಹಾಡಿದ್ದರು.

# 4.3 ಯಾರು ಅರಿಯದ ವೀರ

ಕುವೆಂಪು.

ಆಷಾಢಮಾಸ, ಸುಮಾರು ರಾತ್ರಿ ಎಂಟು ಗಂಟೆ ಸಮಯ. ಕಗ್ಗತ್ತಲು ಕಣ್ಣು ತಿವಿಯುವಂತಿತ್ತು. ಜಡಿಮಳೆ ಜರ್‍ರೆಂದು ಕರೆಕರೆ ಹುಟ್ಟಿಸುತ್ತಿತ್ತು . ಸುಬ್ಬಣ್ಣಗೌಡರು ಜಗಲಿಯಲ್ಲಿ ಒಂದು ಜಮಖಾನದ ಮೇಲೆ ಕುಳಿತು ಲ್ಯಾಂಪಿನ ಬೆಳಕಿನಲ್ಲಿ ಲೆಕ್ಕಪತ್ರ ನೋಡುತ್ತಿದ್ದರು.

ಲಿಂಗ ಹೊರಗಿನಿಂದ ಕೈಲೊಂದು ಲಾಟೀನು ಹಿಡಿದುಕೊಂಡು ಬಂದು "ಅಯ್ಯಾ ಹೊಳೆ ನೀರು ಏಳನೇ ಮೆಟ್ಟಲಿಗೇರಿದೆ "ಎಂದ.

ಸುಬ್ಬಣ್ಣ ಗೌಡರು ಗಾಬರಿಯಿಂದ ತಟಕ್ಕನೆ ಎದ್ದು "ಎಲ್ಲಿ ನೋಡೋಣ ಬಾ" ಎಂದು ಕಂಬಳಿಕೊಪ್ಪೆ ಹಾಕಿಕೊಂಡು ಹೊರಟರು.

ಇಬ್ಬರು ಒಳಗೆ ಹೋಗಿ ಐದಾರು ಮೆಟ್ಟಲು ಇಳಿದು ನಿಂತರು. ನೊರೆಯೆದ್ದ ಕೆಂಬಣ್ಣದ ತೆರೆಗಳು ಅವರ ಕಾಲಿಗೆ ಬಂದು ಬಡಿಯುತ್ತಿದ್ದವು. ತುಂಗಾನದಿಯ ಪ್ರವಾಹ ಉಕ್ಕಿ ಉಕ್ಕಿ ನೊರೆನೊರೆಯಾಗಿ ಭೋರೆಂದು ಹರಿಯುತ್ತಿತ್ತು. ಲಾಟೀನಿನ ಬೆಳಕಿನಲ್ಲಿ ಅಲೆಗಳು ಪಳಪಳ ಮಿಂಚುತ್ತಿದ್ದವು. ಮಳೆ ನಿರಂತರವಾಗಿ ಸುರಿಯುತ್ತಲೇ ಇತ್ತು. ಅವರು ಅಲ್ಲಿ ನಿಂತ ಹಾಗೆಯೇ ಆರನೆಯ ಮೆಟ್ಟಲಿಗೆ ನೀರೇರಿ ಮುಚ್ಚಿತು. ಐದನೆಯ ಮೆಟ್ಟಲಿಗೆ ಹತ್ತಿ ನಿಂತರು.

ಸುಬ್ಬಣ್ಣಗೌಡರು ಲಿಂಗನ ಕಡೆ ತಿರುಗಿ "ನಿನ್ನೆ ಎಲ್ಲಿಯವರೆಗೆ ಏರಿತ್ತೋ ನೀರು?" ಎಂದರು. "ನಿನ್ನೆ ಇಷ್ಟು ನೀರು ಬಂದಿರಲಿಲ್ಲ. ಎಂಟನೆಯ ಮೆಟ್ಟಲಲ್ಲಿಯೇ ಇತ್ತು. ಆದರೂ ನಿನ್ನೆ ಕೆರೆ ಹಳ್ಳಿಯೆಲ್ಲಾ ಕೊಚ್ಚಿಕೊಂಡು ಹೋಯಿತಂತೆ. ಕೆಳಮನೆ ರಂಗಪ್ಪ ಗೌಡರು ಮಗ ರಾಮು ಸಿಕ್ಕಲೇ ಇಲ್ಲವಂತೆ. ಬಹಳ ಅನಾಹುತ ಆಯಿತಂತೆ" ಎಂದ. ಲಿಂಗ. ಗೌಡರ ಮುಖವು ಭಯದ ಚಿಹ್ನೆ ತೋರಿ ಗಂಭೀರವಾಯಿತು. "ಇಂದು ಮೇಲ್ಮಳೆ ಹೇಗಿದೆಯಂತೆ? ನಿನಗೇನಾದರೂ ಗೊತ್ತೆ?" ಎಂದು ಕೇಳಿ ಕಗ್ಗತ್ತಲಿನ ಕಡೆ ಕುರುಡಾಗಿ ನಿಟ್ಟಿಸುತ್ತಾ ನಿಂತರು.

"ಮೇಲ್ಮಳೆ ಬಹಳ ಜೋರಾಗಿದೆಯಂತೆ. ಶೃಂಗೇರಿ ಆ ಕಡೆಯಂತೂ ಒಂದು ನಿಮಿಷ ಬಿಡದೆ ಹೊಡೆಯುತ್ತಿದೆಯಂತೆ " ಎಂದು ಹೇಳಿ, ಲಿಂಗನು ಲಾಟೀನಿನ ಬೆಳಕಿನಲ್ಲಿ ಕೆಳಗೆ ನೋಡಿ "ಅಯ್ಯಾ, ಇಲ್ಲಿ ನೋಡಿ! ನೀರು ಐದನೇ ಮೆಟ್ಟಲಿಗೇರುತ್ತಾ ಇದೆ" ಎಂದ. ಗೌಡರು ಕೆಳಗೆ ನೋಡಿ, ಎದೆ ನಡುಗಿ, ಮುಖ ಕಪ್ಪಾಗಿ, ಸ್ವಲ್ಪ

ಪೆಚ್ಚಾದರು.

ಇಬ್ಬರೂ ಹಿಂತಿರುಗಿ ಮನೆಯೊಳಗೆ ಹೋದರು. ಗೌಡರು ಕಂಬಳಿ ತೆಗೆದುಹಾಕಿ, ಬಿಸಿ ನೀರಿನಲ್ಲಿ ಕಾಲು ತೊಳೆದುಕೊಂಡು, ಜಮಖಾನದ ಮೇಲೆ ಕುಳಿತು ಕೈಗಳನ್ನು ಹಿಂದಕ್ಕೆ ಹಾಕಿ, ಅವುಗಳ ಮೇಲೆ ಒರಗಿಕೊಂಡು ಆಲೋಚನಾ ಪರರಾದರು. ಲಿಂಗನು ಲಾಟೀನಿನ ದೀಪವನ್ನು ಸಣ್ಣಗೆ ಮಾಡಿ, ಕಂಬಳಿ ಕೊಡವಿ, ಗಳುವಿನ ಮೇಲೆ ಹರಡಿ, ಅಡುಗೆ ಮನೆಯೊಳಗೆ ಹೋದನು.

ಸುಬ್ಬಣ್ಣ ಗೌಡರ ಹೆಂಡತಿ ನಾಗಮ್ಮ "ಅದೇನು ಲಿಂಗ ಲಾಟೀನನ್ನು ತೆಗೆದುಕೊಂಡು ಹೊರಗೆ ಹೋಗಿದ್ದರಲ್ಲ ಹೊಳೆ ಬಹಳ ಬಂದಿದೆಯೇನು?" ಎಂದರು. ಸುಬ್ಬಣ್ಣಗೌಡರ ೧೨ ವರ್ಷದ ಮಗ ತಿಮ್ಮು, ೮ ವರ್ಷದ ಮಗಳು ಸೀತೆ, ಇಬ್ಬರೂ ಊಟಕ್ಕೆ ಕುಳಿತಿದ್ದರು. ಹೊಳೆ ಏರುವ ಮಾತು ಕೇಳಿ, ಉಣ್ಣುವುದನ್ನು ಬಿಟ್ಟು, ಕಳೆದ ಬಾಯಿ ಮುಚ್ಚದೆ, ತೆರೆದ ರೆಪ್ಪೆ ಹಾಕದೆ, ಇಟ್ಟ ಕೈ ತೆಗೆಯದೆ ನಾಗಮ್ಮ – ಲಿಂಗ ಇವರ ಸಂಭಾಷಣೆ ಕೇಳುತ್ತಾ ಕುಳಿತರು. "ಹೌದಮ್ಮ ಹೊಳೆ ಯದ್ವತದ್ವ ಏರುತ್ತಾ ಇದೆ. ಅದರಲ್ಲಿಯೂ ಮೇಲ್ಮಳೆ ಇಪರೀತವಂತೆ.... ನಿನ್ನೆಯೇ ಕೆರೆಹಳ್ಳಿಯೆಲ್ಲಾ ತೇಲಿಹೋಯಿತಂತೆ. ಪಾಪ! ಆ ಕೆಳಮನೆ ರಂಗಪ್ಪ ಗೌಡರ ರಾಮು ಇನ್ನೂ ಸಿಕ್ಕಿಲ್ಲವಂತೆ!"

ನಾಗಮ್ಮ ಊಟಕ್ಕೆ ಕುಳಿತ ಮಕ್ಕಳ ಕಡೆ ನೋಡಿದರು. ಏಕೆ ನೋಡಿದರೋ ಯಾರಿಗೆ ಗೊತ್ತು? ಅವರು ಉಣ್ಣದೇ ಕುಳಿತಿದ್ದುದನ್ನು ನೋಡಿ ತಾವೇ ಹೋಗಿ ಅವರ ಹತ್ತಿರ ಕುಳಿತುಕೊಂಡು ಉಣ್ಣಿಸತೊಡಗಿದರು. ಸೀತೆ ತುತ್ತು ತಿನ್ನುತ್ತಾ "ಅಮ್ಮಾ, ರಾಮು ಏನಾದ?" ಎಂದಳು.ನಾಗಮ್ಮ "ಏನೂ ಆಗಲಿಲ್ಲ. ನೀ ಉಣ್ಣು ಸುಮ್ಮನೆ" ಎಂದರು.

"ತಿಮ್ಮು" ಏನಮ್ಮಾ ಅದು ಲಿಂಗ ಹೇಳಿದ್ದು?" ಎಂದ. ನಾಗಮ್ಮ "ಏನಿಲ್ಲ ಮಗು, ಹೊಳೆಯಲ್ಲಿ ನೀರು ಏರುತ್ತಿದೆಯಂತೆ, ಅಷ್ಟೇ. ನೀನು ಊಟಮಾಡು" ಎಂದರು.

ಲಿಂಗನ ಕಡೆ ನೋಡಿ "ಅಷ್ಟೇ! ಅಲ್ಲವೇನೋ ಲಿಂಗ ?" ಎಂದರು. ಲಿಂಗ ತಲೆದೂಗಿ ಸುಮ್ಮತಿಸಿ "ಅಷ್ಟೇ, ಇನ್ನೇನು! ನೀವು ಉಣ್ಣಿ ತಿಮ್ಮಯ್ಯ" ಎಂದ. ಸುಬ್ಬಣ್ಣ ಗೌಡರು ಜಗಲಿಯಿಂದ "ಲಿಂಗ!"ಎಂದು ಕರೆದರು. ಲಿಂಗನಿಗೆ ಕಿವಿ ಕೊಂಚ ಮಂದ; ಕೇಳಿಸಲಿಲ್ಲ. ಮತ್ತೆ ಕರೆದರು. ಆಗ ನಾಗಮ್ಮ "ಏ ಲಿಂಗ, ಹೊರಗೆ ಕರೆಯುತ್ತಾರೋ! ಹೋಗೋ!" ಎಂದರು.

ಲಿಂಗನು ತಟಕ್ಕನೆ ಎದ್ದು ತನ್ನ ಚೊಟ್ಟು ಕಾಲು ಓರೆಯಾಗಿ ಹಾಕುತ್ತಾ ಹೋದ. ಪಾಪ! ಅವನ ಬಲಗಾಲು ಎಡಗಾಲಿಗಿಂತ ತುಸು ಮೋಟ ಮತ್ತು ಸಣ್ಣ. ಲಿಂಗನು ಜಗಲಿಗೆ ಹೋಗಿ ಕೇಳಿದನು. "ಯಾಕಯ್ಯ ಕರೆದದ್ದು?" ಗೌಡರು ಎಂದರು "ಹೋಗಿ ನೋಡಿಕೊಂಡು ಬಾ. ನೀರು ಹೀಗೆಷ್ಟು ಏರಿದೆ."

ಲಿಂಗನು ಲಾಟೀನಿನ ಬತ್ತಿ ಏರಿಸಿ, ದೀಪ ದೊಡ್ಡದು ಮಾಡಿ, ಕಂಬಳಿ ಕೊಪ್ಪೆ ಹಾಕಿಕೊಂಡು ಹೊಳೆಯ ಕಡೆ ಹೋದನು. ಅವನು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಗೌಡರು "ನಾಗ !" ಎಂದು ಕೂಗಿದರು. ಎಂಟು ವರ್ಷದ ಹುಡುಗನೊಬ್ಬನು ಮುರಬೇಯಿಸುವ ಒಲೆಯ ಕಡೆಯಿಂದ ಓಡಿಬಂದು, ಮುಂಡಿಗೆಯ ಮರೆಯಲ್ಲಿ ನಿಂತು "ಏನ್ರಯ್ಯ ?" ಎಂದ.

ಗೌಡರು "ದನ ಎಲ್ಲಾ ಕಟ್ಟಿದ್ದೀರೇನೋ ?" ಎಂದರು. "ಹೌದ್ರಯ್ಯಾ, ಎಲ್ಲಾ ಕಟ್ಟಿದ್ದೇನೆ. ತುಂಗೆದನ ಪುಟ್ಟಗುಡ್ಡ ಯಲ್ಡು ಮಾತ್ರ ಕೊಟ್ಟಿಗೆಗೆ ಬರಲೇ ಇಲ್ಲ."

"ಹೋಗಲಿ ಬಿಡು!" ಎಂದು ಗೌಡರು ದಿಂಬಿನ ಮೇಲೆ ಒರಗಿಕೊಂಡರು. ನಾಗ ಮೆಲ್ಲಗೆ ಚಳಿಕಾಯಿಸಲು ಮುರುವಿನ ಒಲೆಗೆ ಜಾರಿದ. ಅಷ್ಟು ಹೊತ್ತಿಗೆ ಹೊಳೆಗೆ ಹೋಗಿದ್ದ ಲಿಂಗ ಬಂದ. ಗೌಡರು "ನೀರೇರಿದೆಯೇನೋ?" ಎಂದು ಕೇಳಿದರು. ಲಿಂಗ ಲಾಟೀನು ಕೆಳಗಿರಿಸಿ, ಕಂಬಳಿ ಕೊಡಗುತ್ತಾ "ನಾಲ್ಕನೇ ಮೆಟ್ಟಲಿಗೆ ಮುಟ್ಟ ಮುಟ್ಟ ಬಂದದೆ" ಎಂದನು.

"ಹಾಗಾದರೆ ಕೊಟ್ಟಿಗೆಗೆ ಹೋಗಿ ದನಗಳ ಕೊರಳಕಣ್ಣಿ ಎಲ್ಲಾ ಬಿಚ್ಚಿ ಬಾ " ಎಂದು ಗೌಡರು ಚಿಂತಿಸುತ್ತಾ ಕೂತರು.

ಲಿಂಗ ತನ್ನ ಮಗ ನಾಗನನ್ನು ಕರೆದುಕೊಂಡು ಕೊಟ್ಟಿಗೆಗೆ ಹೋದ. ಅಷ್ಟು ಹೊತ್ತಿಗೆ ನಾಗಮ್ಮ ನೀರು ತಂದಿಟ್ಟು "ಬಳ್ಳೆಹಾಕಿದೆ" ಎಂದರು. ಸುಬ್ಬಣ್ಣ ಗೌಡರು ಎದ್ದು ತಂಬಿಗೆ ತೆಗೆದುಕೊಂಡು ಬಾಯಿ ಮುಕ್ಕಳಿಸಿ ಊಟಕ್ಕೆ ಹೋದರು. ತಿಮ್ಮು ಸೀತೆ ಇಬ್ಬರೂ ಹೊರಗೆ ಬಂದು ಜಗಲಿಯ ಮೇಲಿನ ಲ್ಯಾಂಪಿನ ಬೆಳಕಿನಲ್ಲಿ ಮಕ್ಕಳು ಹರಟೆ ಹೊಡೆಯುತ್ತಿದ್ದರು. ತುಸು ಹೊತ್ತಿನಲ್ಲಿ ಲಿಂಗನು ಅವನ ಮಗ ನಾಗನು ಕೊಟ್ಟಿಗೆಯಿಂದ ಬಂದು, ಕಾಲು ತೊಳೆದುಕೊಂಡು ಜಗಲಿಯ ಕೆಸರಲಿಗೆಯ ಮೇಲೆ ಕೂತರು. ಲಿಂಗ ನಾಗ ಇವರೊಡನೆ ತಿಮ್ಮು, ಸೀತೆ ಇಬ್ಬರಿಗೂ ತುಂಬಾ ಸಲಿಗೆ. ತಿಮ್ಮು "ಲಿಂಗ ಹೊಳೆ ಪೂರಾ ಏರಿದೆಯೇನೋ?" ಎಂದು ಕೇಳಿದ. ಲಿಂಗ "ಇಲ್ಲಯ್ಯ, ಯಾವಾಗಲೂ ಏರುವಂತೆ" ಎಂದ.

ಲಿಂಗನ ಹತ್ತಿರ ಕುಳಿತಿದ್ದ ಸೀತೆ ಇವರ ಸಂಭಾಷಣೆಗೆ ಗಮನ ಕೊಡಲೇ ಇಲ್ಲ. ಅವಳ ಮನಸ್ಸು ಇನ್ನೇತರ ಮೇಲೋ ಹೋಗಿತ್ತು. ಒಂದು ಸಲ ಲಿಂಗನ ಕಾಲುಗಂಟುಗಳ ಕಡೆ ನೋಡುತ್ತಿದ್ದಳು. ಒಂದು ಸಲ ಕೈಗಂಟುಗಳ ಕಡೆ ನೋಡುತ್ತಿದ್ದಳು.. ಆಕೆಗೆ ಬಹಳ ಸೋಜಿಗವಾಯಿತು. ಕಡೆಗೆ ನಾಚಿಕೆಗಿಂತ ಕುತೂಹಲ ಹೆಚ್ಚಾಗಲು "ಲಿಂಗ, ಇದೇನು ಕಲೆಗಳೋ ನಿನ್ನ ಕಾಲ್ಗಂಟಿನಲ್ಲಿ ಕೈ ಗಂಟಿನಲ್ಲಿ" ಎಂದು ಕೇಳಿದಳು.

ಲಿಂಗನ ಮುಖ ಇದ್ದಕ್ಕಿದ್ದ ಹಾಗೆ ಬಾಡಿತು. ಬಾಯಿಯಿಂದ ಮಾತೇ ಹೊರಡಲಿಲ್ಲ. ಕಣ್ಣಿನಲ್ಲಿ ನೀರು ತುಂಬಿತು. ಮರುಕೊಳಿಸಿದ ಹಿಂದಿನ ದುಃಖ ತಡೆದುಕೊಂಡು ದೈನ್ಯದಿಂದ " ಅದೆಲ್ಲಾ ಕಟ್ಕೊಂಡು ನಿಮಗೇಕೆ ಸೀತಮ್ಮ?" ಎಂದ.

ತಿಮ್ಮುಗೆ ಲಿಂಗನ ಆ ಸ್ಥಿತಿ ನೋಡಿ ಕನಿಕರದೊಂದಿಗೆ ಅಚ್ಚರಿಯೂ ಆಯಿತು. ಸೀತೆಗೆ ಬದಲಾಗಿ ಅವನೇ, "ಲಿಂಗ, ಸಂಕೋಚವೇಕೊ, ನಮ್ಮೊಡನೆ ಹೇಳಬಾರದೇ?" ಎಂದ.

"ಹೇಳದೆ ಏನು ತಿಮ್ಮಯ್ಯ ನಿಮ್ಮೊಡನೆ? ಇವು ಜೈಲಿನಲ್ಲಿ ಕೋಳ ಹಾಕಿದ್ದ ಗುರುತು". ಲಿಂಗನಂಥ ಮುಗ್ದನಿಗೆ ಜೈಲಾದುದನ್ನು ಕೇಳಿ ತಿಮ್ಮುವಿನ ಹೂವಿನಂಥ ಎದೆಗೆ ಸಿಡಿಲು ಬಡಿದಂತಾಗಿ "ಏನು? ನಿನಗೂ ಜೈಲೆ? ಯಾವ ಪುಣ್ಯಾತ್ಮನಪ್ಪ ನಿನಗೂ ಜೈಲು ಮಾಡಿದವನು "ಎಂದು ಕೇಳಿದ.

"ನಾನು ಮೊದಲು ಮಾವಿನಹಳ್ಳಿ ರಂಗೇನಾಯ್ಕರ ಮನೇಲಿದ್ದೆ ಕೆಲಸಕ್ಕೆ. ಅಲ್ಲೇ ಐದಾರು ವರ್ಷ ಜೀತ ಮಾಡಿದೆ. ತಿಮ್ಮಯ್ಯ, ಏನು ಮಾಡೋದು. ಯಾರ್ಯಾರ ಜೊತೆಯಲ್ಲೋ ಸೇರಿಕೊಂಡು ಕಳ್ಳು ಕುಡಿಯೋದು ಕಲಿತೆ. ಒಂದು ದಿನ ಬೈಗಿನ ಹೊತ್ತು; ಕಳ್ಳು ಕುಡಿದೆ, ತಲೆಗೇರಿತು. ಕಳ್ಳಿನವನು ಏನು ಸೇರಿಸಿದ್ದನೋ ಅದಕ್ಕೆ, ಅಮಲು ಬರಲಿ ಅಂತ. ದಾರೀಲಿ ಬರ್ತಾ ಇದ್ದೆ. ರಂಗೇನಾಯ್ಕರ ಮಗ ಶೇಷನಾಯ್ಕ ಅಂತ ಇದ್ದಾರೆ. ಅವರಿಗೂ ಕುಡಿದು ತಲೆಗೆ ಅಮಲೇರಿತ್ತು. ಎಲ್ಲಿಂದಲೋ ಹಿಂದಿನಿಂದ ಬಂದು ಬಾಯಿಗೆ ಬಂದಂತೆ ಬೈದರು. ನನಗೂ ಕುಡಿದು ಮತ್ತಿನಲ್ಲಿ ಒಡೇರ ಮಕ್ಕಳು ಅಂತ ಗೊತ್ತಾಗಲಿಲ್ಲ. ಬಾಯಿಗೆ ಬಂದಂತೆ ಬೈದೆ. ಆಮೇಲೆ ಇಬ್ಬರಿಗೂ ಮಾರಾಮಾರಿಯಾಗಿ ಅವರಿಗೆ ಪೂರಾ ಪೆಟ್ಟಾಯಿತು. ನನ್ನ ಮೇಲೆ ಫಿರ್ಯಾದು ಕೊಟ್ಟರು. ನಾನು ಬಡವ, ಅದರಿಂದ ಜೈಲಾಯಿತು.

ಕಡೆಯ ಎರಡು ಮಾತು ಹೇಳುವಾಗ ಅವನ ಕಂಠ ಗದ್ಗದವಾಯಿತು. ಕಣ್ಣಿನಲ್ಲಿ ನೀರುಕ್ಕಿ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅತ್ತ. ಅದನ್ನು ನೋಡಿ ಅವನ ಮಗ ನಾಗನೂ ಅಳುತ್ತಿದ್ದ. ಸೀತೆಯ ಕಣ್ಣಿನಲ್ಲಿಯೂ ನೀರು ತುಂಬಿ ತುಳುಕಾಡುತ್ತಿತ್ತು. ತಿಮ್ಮು ಏನನ್ನೋ ಯೋಚಿಸುತ್ತಾ ಕುಳಿತಿದ್ದ. ಲಿಂಗನ ಎದೆಯಲ್ಲಿ ಸ್ವಲ್ಪ ತಣಿತ ಮೇಲೆ, ತಿಮ್ಮು ಮಕ್ಕಳಾಡುವ ಮುದ್ದು ಮಾತಿನಿಂದ "ಲಿಂಗಾ, ನಿನಗೆ ಜೈಲಿನಲ್ಲಿ ತುಂಬಾ ಕಷ್ಟ ಕೊಟ್ಟರೆ?" ಎಂದು ಕೇಳಿದ.

"ತಿಮ್ಮಯ್ಯಾ, ಈಗ ಅದನ್ನೆಲ್ಲ ಹೇಳಿ ನೆನೆದುಕೊಂಡು ಅತ್ತರೆ ಏನು ಬಂದ ಹಾಗಾಯಿತು? ನಾನು ಜೈಲಿನಿಂದ ಬರಬೇಕಾದರೆ ನನ್ನ ಹೆಂಡತಿ ತೀರಿಕೊಂಡಿದ್ದಳು. ನನ್ನ ಮಗ ಪರದೇಶಿಯಾಗಿ ಯಾರ್ಯಾರ ಕೈಗೆಲ್ಲಾ ಹಾರೈಸಿಕೊಂಡು ಅಲೆದುಕೊಂಡಿದ್ದ."

"ಹಾಗಾದರೆ ಎಷ್ಟು ವರ್ಷ ಜೈಲಿನಲ್ಲಿದ್ದೆಯೋ ಲಿಂಗ?"

"ಎರಡು ವರ್ಷ, ತಿಮ್ಮಯ್ಯ, ಎರಡು ವರ್ಷ! ಅದರ ಮೇಲಾದರೂ ಸುಖ ಅಂತೀರೋ! ಅದೂ ಇಲ್ಲ. ನೆಂಟರಿಷ್ಟರೆಲ್ಲ ನನ್ನ ದೂರ ಮಾಡಿದರು, ಜೈಲಿಗೆ ಹೋಗಿ ಬಂದವನೆಂದು. ಮಗನನ್ನು ಕಟ್ಟಿಕೊಂಡು ಅಲೆದು ಅಲೆದು ಸುಟ್ಟು ಸುಣ್ಣಾಗಿದ್ದೆ. ಕಡೆಗೆ ಯಾರೋ ಶಿವನೂರು ಸುಬ್ಬಣ್ಣ ಗೌಡರಲ್ಲಿಗೆ ಹೋಗು ಎಂದರು. ಇಲ್ಲಿಗೆ ಬಂದೆ. ಮಾರಾಯರು, ನಿಮ್ಮ ತಂದೆ ಅನ್ನ ಬಟ್ಟೆ ಕೊಟ್ಟು ಸತ್ತು ಹೋದವನ ಬದುಕಿಸಿದರು."

ಲಿಂಗ ತನ್ನ ಕಥೆ ಹೇಳಿ ಮುಗಿಸಲು, ತಿಮ್ಮು ನಿಟ್ಟುಸಿರು ಬಿಟ್ಟು, "ಲಿಂಗಾ, ನೀನಿನ್ನು ನಮ್ಮನೆ ಬಿಟ್ಟು ಹೋಗಲೇಬೇಡ.

ನಾಗನೂ ಹಾಗೇ" ಎಂದ. "ಆಗಲಿ ನನ್ನೊಡೆಯ, ಹಾಗೆ ಆಗಲಿ."

## 2

ಸಿಡಿಲು ಗುಡುಗು, ಮಿಂಚು, ಗಾಳಿ, ಮಳೆ– ಇವುಗಳಿಂದ ರಾತ್ರಿ ಹುಚ್ಚೆದ್ದ ಭೈರವಿಯಾಗಿತ್ತು. ಮನೆಯಲ್ಲಿ ಎಲ್ಲರೂ ಮಲಗಿದ್ದರು. ಲಿಂಗ, ಸುಬ್ಬಣ್ಣ ಗೌಡರು ಇಬ್ಬರೇ ಎಚ್ಚರವಾಗಿ ಜಗಲಿಯ ಮೇಲೆ ಕುಳಿತಿದ್ದರು. ಇಬ್ಬರೂ ಆಗಾಗ್ಗೆ ಹೋಗಿ ಹೊಳೆ ನೋಡಿಕೊಂಡು ಬರುತ್ತಿದ್ದರು. ಕರೆಯ ನೀರು ಬೇಗ ಬೇಗ ಏರುತ್ತಿತ್ತು.

"ಲಿಂಗ, ದೋಣಿ ಎಲ್ಲಿ ಕಟ್ಟಿದ್ದೀಯೆ? ಮನೆ ಬಿಡಬೇಕಾಗಿ ಬರಬಹುದು." ಲಿಂಗ ಸ್ವಲ್ಪ ಗಾಬರಿಯಾಗಿ "ಆ ಹುಳಿಮಾವಿನ ಮರದ ಬೇರಿಗೆ ಕಟ್ಟಿದ್ದೆ! ನೀರೇರಿತೋ ಏನೋ ? ಅಲ್ಲಿಗೆ ಹೋಗುವುದಕ್ಕೆ ಆಗುತ್ತೋ ಇಲ್ಲವೋ?" ಎಂದು ಹೇಳುತ್ತಾ ಲಾಟೀನು ತೆಗೆದುಕೊಂಡು ಹೊರಗೆ ಓಡಿದ. ಸುಬ್ಬಣ್ಣಗೌಡರೂ ಅವನ ಹಿಂದೆಯೇ ಓಡಿದರು. ಹೋಗಿ ನೋಡಲು ಲಿಂಗ ಊಹಿಸಿದಂತೆಯೇ ಆಗಿತ್ತು. ನೆರೆ ಮಾವಿನ ಮರದ ಬುಡವನ್ನು ಮುಚ್ಚಿಬಿಟ್ಟಿತ್ತು. ಇಬ್ಬರಿಗೂ ಸ್ವಲ್ಪ ಹೊತ್ತು ಏನೂ ತೋರಲಿಲ್ಲ. ಸುಮ್ಮನೆ ಹೊಳೆಯ ಕಡೆ ನೋಡುತ್ತಾ ನಿಂತರು. ಅಷ್ಟರಲ್ಲಿಯೇ ಮನೆಯ ಹಿಂದುಗಡೆ ಏನೋ ಬಿದ್ದ ಹಾಗೆ ದೊಡ್ಡ ಶಬ್ದವಾಯಿತು. ಇಬ್ಬರೂ ಅಲ್ಲಿಗೆ ಓಡಿದರು. ಹಿತ್ತಲಕಡೆ ಗೋಡೆ ಬಿದ್ದು ನೀರು ಅಂಗಳಕ್ಕೆ ನುಗ್ಗುತ್ತಿತ್ತು. ಇನ್ನು ಕಾಲಹರಣ ಮಾಡಿದರೆ ಸರ್ವನಾಶವೆಂದು ಗೌಡರಿಗೆ ತೋರಿತು.

ಕೋಣೆ ಕೋಣೆಗೆ ನುಗ್ಗಿ ಮನೆಯವರನ್ನೆಲ್ಲಾ ಎಬ್ಬಿಸಿದರು. ಅವರೆಲ್ಲ ಅರೆನಿದ್ದೆಯಲ್ಲಿ ಗಾಬರಿಯಿಂದ ಜಗಲಿಗೆ ನುಗ್ಗಿದರು. ಗೌಡರು ಅವರಿಗೆ ಗಾಬರಿಪಡಬೇಡಿ ಎಂದು ಸಮಾಧಾನ ಹೇಳಿ ಲಿಂಗನಿಗಾಗಿ ಸುತ್ತಲೂ ನೋಡಿದರು. ಲಿಂಗ ಅಲ್ಲಿರಲಿಲ್ಲ. "ಲಿಂಗಾ!, ಲಿಂಗಾ!" ಎಂದು ಕೂಗಿದರು. ಉತ್ತರ ಬರಲಿಲ್ಲ. ಅಷ್ಟು ಹೊತ್ತಿಗೆ ಪ್ರಚಂಡವಾಗಿ ಗಾಳಿ ಬೀಸತೊಡಗಿತು. ಹುಚ್ಚೆದ್ದು ಸರಿ ಸುರಿಯಿತು. ಹೊರ ಅಂಗಳದಲ್ಲಿದ್ದ ತೆಂಗಿನ ಮರ ಮುರಿದು ಮನೆಗೆ ಹೊದಿಸಿದ ಸತುವಿನ ತಗಡುಗಳ ಮೇಲೆ ಬಿದ್ದು, ಬಹುದೊಡ್ಡ ಶಬ್ದವಾಯಿತು. ತಿಮ್ಮು,

ಸೀತೆ, ನಾಗ ಮೂವರು ಕಿಟ್ಟನೆ ಕಿರಚಿಕೊಂಡರು. ನಾಗಮ್ಮನವರೂ "ದೇವರೇ "ಎನ್ನುತ್ತಿದ್ದರು. ಗೌಡರು ಅವರಿಗೆಲ್ಲಾ ಧೈರ್ಯ ಹೇಳಿ, ಲಿಂಗನನ್ನು ಹುಡುಕಿಕೊಂಡು ಕರೆಯುತ್ತಾ ಓಡಿದರು.

ಹೋಗಿ ನೋಡಲು ಲಿಂಗ ಮಾವಿನ ಬುಡ ಸೇರಿ ದೋಣಿ ಬಿಚ್ಚುತ್ತಿದ್ದ. ಮನೆಯ ಬೆಳಕಂಡಿಗೆ ಒಂದು ಕತ್ತದ ಮಿಣಿ ಕಟ್ಟಿ, ಅದನ್ನು ಹಿಡಿದು ಅದರ ಸಹಾಯದಿಂದ ಮಾವಿನ ಮರದ ಬುಡಕ್ಕೆ ಸೇರಿದ್ದ. ತುಸು ಹೊತ್ತಿನಲ್ಲಿಯೇ ದೋಣಿಬಿಚ್ಚಿ, ಅದರೊಳಗೆ ದಾಟಿದ. ಬೆಳಕಂಡಿಗೆ ಬಿಗಿದ ಉರಿಯನ್ನು ಮಾತ್ರ ಕೈಯಲ್ಲಿಯೇ ಹಿಡಿದುಕೊಂಡಿದ್ದ.

ಗಾಳಿಯ ಅಬ್ಬರದಲ್ಲಿ ಲಿಂಗ ಗೌಡರನ್ನು ಕುರಿತು "ಅಯ್ಯಾ ಹಗ್ಗ ಹಿಡಿದು ಎಳೆಯಿರಿ" ಎಂದು ಗಟ್ಟಿಯಾಗಿ ಕೂಗಿದ. ಗೌಡರು ಹಾಗೆಯೇ ಮಾಡಿದರು. ದೋಣಿ ದಡ ಸೇರಿತು. ಅಷ್ಟರಲ್ಲಿ ಒಳಂಗಳದಿಂದ ಏಳೆಂಟು ಜನ ಕಿಟ್ಟನೆ ಚೀತ್ಕರಿಸಿದಂತಾಯಿತು.

ಗೌಡರು "ಲಿಂಗ, ದೋಣಿ ಬಾಗಿಲಿಗೆ ತೆಗೆದುಕೊಂಡು ಬಾ! ಬೇಗ!" ಎಂದು ಹೇಳಿ ಒಳಗೆ ನುಗ್ಗಿದರು. ಹೆಬ್ಬಾಗಿಲು ದಾಟುವುದರೊಳಗಾಗಿಯೇ ಕೆಲಸದ ಹೆಂಗಸು ಸೋಮಕ್ಕ ಬಾಯಿ ಕಳೆದುಕೊಂಡು ಕಣ್ಣುಣ್ಣು ಬಿಟ್ಟುಕೊಂಡು ಏದುತ್ತಾ ಓಡಿಬಂದಳು.

ಗೌಡರನ್ನು ಕಂಡೊಡನೆ ಸೋಮಕ್ಕ ಕೂಗಿದಳು: "ಉಪ್ಪರಿಗೆ ಗೋಡೆ ಬಿದ್ದು ಹೋಯ್ತು! ಜಗಲಿಗೆ ನೀರೇರ್ತಾ ಇದೆ."

ಗೌಡರು ಜಗಲಿಗೆ ಬಂದು "ನೀವೆಲ್ಲಾ ಹೆಬ್ಬಾಗಿಲಿಗೆ ಓಡಿ! ಬೇಗ! ಲಿಂಗ ದೋಣಿ ತರ್ತಾನೆ! ಏ, ನಾಗಾ, ನೀನಿಲ್ಲಿ ಬಾರೋ" ಎಂದರು. ನಾಗ ಗೌಡರ ಸಂಗಡ ಹೋದ.

ನಾಗಮ್ಮ, ತಿಮ್ಮು, ಸೀತೆ, ಲೋಕಮ್ಮ, ಸೋಮಕ್ಕನ ಮಗಳು ದಾಸಮ್ಮ ಎಲ್ಲರೂ ಹೆಬ್ಬಾಗಿಲಿಗೆ ಓಡಿದರು. ಸೋಮಕ್ಕ ಮಾತ್ರ ಮಾಣಿಗೆ ಕೋಣೆಯಲ್ಲಿ ತಾನು ಇಟ್ಟಿದ್ದ ‘ಪುಟ್ಟ ಗಂಟು’ತರಲು ಓಡಿದವಳು ಹಿಂದಕ್ಕೆ ಬರಲೇ ಇಲ್ಲ. ಗೌಡರು ಜಗಲಿಯ ಮೇಲಿದ್ದ ತಮ್ಮ ದೊಡ್ಡ ಬೀರಿನ ಬಾಗಿಲು ತೆಗೆದು, ಎರಡು ಪೆಟ್ಟಿಗೆಗಳನ್ನು ಈಚೆಗೆ ತೆಗೆದಿಟ್ಟು, ಬೀರಿನ ಬಾಗಿಲು ಹಾಕಿ ಬೀಗ ಹಾಕಿದರು. ಅಲ್ಲಿದ್ದ ಕಬ್ಬಿಣದ ಸಂದುಕದ ಬಾಗಿಲನ್ನೂ ತೆರೆದರು. ಆದರೆ ಮತ್ತೇನನ್ನೋ ಯೋಚಿಸಿ ಅದನ್ನು ಪುನಃ ಹಾಗೆಯೇ ಮುಚ್ಚಿ ಬೀಗ ಹಾಕಿದರು. "ನಾಗಾ, ಈ ಪೆಟ್ಟಿಗೆ ಹೊತ್ತುಕೊಳ್ಳೊ" ಎಂದರು. ನಾಗ ಬಂದು ಹೊತ್ತುಕೊಂಡ; ಗೌಡರು ಮತ್ತೊಂದು ಹೊತ್ತುಕೊಂಡರು. ಲಿಂಗ ಎಲ್ಲರನ್ನೂ ದೋಣಿಗೆ ಹತ್ತಿಸಿ ಅದರ ತುದಿ ಹಿಡಿದುಕೊಂಡು ನಿಂತಿದ್ದ. ಗೌಡರು ಓಡಿಬಂದು ಎರಡು ಪೆಟ್ಟಿಗೆಗಳನ್ನೂ ದೋಣಿಯೊಳಗಿಟ್ಟು, ನಾಗನನ್ನೂ ಎತ್ತಿ ದೋಣಿಗೆ ಹಾಕಿ, ತಾವೂ ಒಳಗೆ ದಾಟಿ, ಲಿಂಗನಿಗೆ ದೋಣಿ ಹತ್ತುವಂತೆ ಹೇಳಿ, ಒಂದು ಹುಟ್ಟು ತೆಗೆದುಕೊಂಡು ದೋಣಿಯ ತುದಿಯಲ್ಲಿ

ಕುಳಿತರು. ಅಷ್ಟು ಹೊತ್ತಿಗೆ ಸೀತೆ ನಾಗಮ್ಮನವರನ್ನು ಕುರಿತು "ಅವ್ವ ಸೋಮಕ್ಕೆಲ್ಲಿ?" ಎಂದು ಕೇಳಿದಳು. ಆಗಲೇ ಮನೆ ಮುರಿದು ಬಿದ್ದಂತಾಗಿ ಏನೋ ಒಂದು ಚಿತ್ಕಾರದ ಧ್ವನಿಯೂ ಕೇಳಿಬಂದಿತು. ಸೋಮಕ್ಕನ ಆಸೆಯನ್ನು ಅವಳ ಮಗಳು ದಾಸಮ್ಮ ಕೂಡ ಬಿಟ್ಟಳು.

ದೋಣಿ ಬಹಳ ಸಣ್ಣದು. ಐದಾರು ಜನರು ಕೂರುವಂತಾದ್ದು. ತುಂಬಿದ ನೆರೆಯಲ್ಲಂತೂ ಇಬ್ಬರೇ ಸರಿ. ಆಗಲೇ ಅದರೊಳಗೆ ಏಳು ಜನರಿದ್ದರು. ಸಾಲದಿದ್ದಕ್ಕೆ ಜೊತೆಗೆ ಎರಡು ಪೆಟ್ಟಿಗೆ ಬೇರೆ; ಲಿಂಗನಿಗೆ ಜಾಗವೇ ತೋರದೆ, ಬಗೆಯೇ ಹರಿಯದೆ, ಸುಮ್ಮನೆ ನಿಂತು ದೋಣಿ ಸುರಕ್ಷಿತವಾಗಿ ದಡ ಸೇರುವುದೇ ಎಂದು ಚಿಂತಿಸುತ್ತಿದ್ದ.

ಲಿಂಗ ತಡಮಾಡಿದ್ದನ್ನು ಕಂಡು ಗೌಡರು "ಲಿಂಗಾ ಹೊತ್ತೇಕೊ? ಹತ್ತೋ!" ಎಂದು ಕಳವಳದಿಂದ ಕೂಗಿ ಗದರಿಸಿದರು.

ಲಿಂಗ "ಅಯ್ಯಾ, ಜಾಗವೇ ಇಲ್ಲವಲ್ಲ. ಈಗಾಗಲೇ ದೋಣಿಗೆ ಭಾರ ಹೆಚ್ಚಾಗಿದೆ. ನಾನೂ ಕೂತರೆ ದೋಣಿ ದಡ ಕಾಣುವ ಬಗೆ?" ಎಂದ.

"ಹಾಗಾದರೆ ಈಗ ಮಾಡೋದೇನೋ? ಏನಾದರೂ ಆಗಲಿ ಹತ್ತು. ದೇವರು ಮಾಡಿಸಿದ್ದಾಯಿತು" ಎನ್ನುತ್ತಾ ಗೌಡರು ನದಿಯ ಕಡೆ ನೋಡಿದರು. ಅವರ ಮೈ ಸ್ವಲ್ಪ ನಡುಗಿತು.

ಲಿಂಗ "ಹಾಗಾದರೆ ಅಯ್ಯಾ, ಒಂದು ಕೆಲಸ ಮಾಡಿ, ನೀವೆಲ್ಲಾ ದಡ ಸೇರಿದ ಮೇಲೆ ದೋಣಿ ಕೊಟ್ಟು ಯಾರನ್ನಾದರೂ ಕಳಿಸಿ. ಅಲ್ಲಿ ತನಕ ನಾ ಇಲ್ಲೇ ಇರುತ್ತೇನೆ. ನಿಮಗೇನೂ ಭಯಬೇಡ" ಅಂದ.

ಗೌಡರಿಗೆ ಸಿಟ್ಟು ಬಂತು. ಲಿಂಗನಿಗೆ ದೋಣಿ ಹತ್ತುವಂತೆ ಗಟ್ಟಿಯಾಗಿ ಕೂಗಿ ಅಪ್ಪಣೆ ಮಾಡಿದರು. ಲಿಂಗ ಮರುಮಾತಾಡದೆ ದೋಣಿಯ ಮತ್ತೊಂದು ತುದಿಯಲ್ಲಿ ಹುಟ್ಟು ಹಿಡಿದು ಕುಳಿತ. ಗೌಡರು ತಮ್ಮ ತೋಟಾ ಕೋವಿಯಿಂದ ಹತ್ತು ಹನ್ನೆರಡು ಗುಂಡು ಹಾರಿಸಿದರು.

ದೋಣಿ ಹೊರಟಿತು. ಆ ಗಾಳಿ, ಆ ಮಳೆ, ಆ ಕತ್ತಲು ಇವುಗಳ ನಡುವೆ ಬಂದೂಕಿನ 'ಡಂ ಡಂ' ಶಬ್ದಗಳು ಗಂಭೀರವಾಗಿ ಹೊರಟು ಮಲೆನಾಡಿನ ಬೆಟ್ಟ ಗುಡ್ಡಗಳಿಂದ ಗಂಭೀರವಾಗಿ ಮರುದನಿಯಾದುವು. ದೂರದ ಹಳ್ಳಿಗಳಲ್ಲಿದ್ದ ಜನರು ಎಚ್ಚೆತ್ತು ಗುಂಡಿನ ಶಬ್ದಗಳನ್ನು ಕೇಳಿ ಬೆರಗಾದರು.

ಶಿವನೂರಿಗೆ ಎರಡು ಮೈಲಿ ದೂರದಲ್ಲಿದ್ದ ನುಗ್ಗೆಹಳ್ಳಿಯಲ್ಲಿ ಮನೆಯ ಜಗಲಿಯ ಮೇಲೆ ಮಲಗಿದ್ದ ರಾಮೇಗೌಡರಿಗೂ, ಅವರ ತಮ್ಮ ಸಿದ್ದೇಗೌಡರಿಗೂ ಈಡಿನ ಶಬ್ದ ಕೇಳಿ ಎಚ್ಚರವಾಗಿ ಬೆರಗಿನಿಂದ ಎದ್ದು ಕುಳಿತರು.

ಸಿದ್ದೇಗೌಡರು ರಾಮೇಗೌಡರನ್ನು ಕುರಿತು "ಅಣ್ಣ, ಅದೇನೋ ಈಡು ಕೇಳಿಸಿದುವಲ್ಲ!" ಎಂದರು.

ರಾಮೇಗೌಡರು "ಎತ್ತ ಮುಖದಿಂದ ಕೇಳಿಸಿದುವೋ" ಎಂದರು. "ಕೆಮ್ಮಣ್ಣುಬ್ಬಿನ ಕಡೆಯಿಂದ ಅಂತ ಕಾಣ್ತದಪ್ಪಾ." "ಅಲ್ಲಾ, ನೋಡು, ನಂಗೇಕೋ ಸ್ವಲ್ಪ ಸಂಶಯಾನೆ. ಶಿವನೂರಿನ ಕಡೆಯಿಂದ ಕೇಳಿಸಿದ ಹಾಂಗಾಯ್ತು."

"ಎಲ್ಲಾದರೂ ಹೊಳೇಗಿಳೇ ಏರ್ತೇನೋ? "ಏನೋ ಸಂಗತಿ ಇರಬೇಕಪ್ಪಾ. ಏನಾದ್ರಾಗಲಿ. ನಾಲ್ಕೈದು ಜನ ಕರಕೊಂಡು ಹೋಗೋಣ."

ಸಿದ್ದೇಗೌಡರು ಅವಸರದಿಂದ ಲಾಟೀನು ಹೊತ್ತಿಸಿದರು. ರಾಮೇಗೌಡರು ಮೂಲೆ ಹಿಡಿದು ಮಲಗಿ ಕೊರೆಯುತ್ತಿದ್ದ ರಂಗನನ್ನು ಎಬ್ಬಿಸಿ, ನಾಲ್ಕೈದು ಜನ ಗಟ್ಟದ ಕೆಳಗಿನವರನ್ನು ಕರೆತರುವಂತೆ ಹೇಳಿದರು.

## 3

"ರಾಮ! ರಾಮ! ಎಂದು ಹೆಂಗಸರು ಮಕ್ಕಳ ಗೋಳಾಟವು ಪ್ರವಾಹದ ಅಲೆಗಳ ಸೆಳೆವಿನ ನಡುವೆ ಸಿಕ್ಕಿ ಏಳುತ್ತ ಬೀಳುತ್ತ ತೇಲುತ್ತ ದೋಣಿಯಿಂದ ಹೊರಟು ಗಾಳಿಯ ಭೋರಾಟದಲ್ಲಿ ಸೇರುತ್ತಿತ್ತು. ಸುಬ್ಬಣ್ಣಗೌಡರು, ಲಿಂಗ ಇಬ್ಬರೂ ಎದೆಗೆಡದೆ ಹುಟ್ಟು ಹಾಕುತ್ತಿದ್ದರು. ದೋಣಿಯ ನಡುವೆ ಇದ್ದ ಲಾಟೀನಿನ ಬೆಳಕು, ಕಗ್ಗತ್ತಲೆಗೆ ಹೆದರಿ ಮೂಲೆ ಸೇರಿತೋ ಏನೋ ಎನ್ನುವ ಹಾಗೆ, ತನ್ನ ಸುತ್ತಲೂ ಒಂದಡಿಯ ಜಾಗವನ್ನು ಮಾತ್ರ ಬೆಳಗುತ್ತಿದ್ದಿತು. ಭಾರದಿಂದ ದೋಣಿ ಈಗಲೋ ಆಗಲೋ ಮುಳುಗುವಂತೆ ತೋರುತ್ತಿತ್ತು.

ಗೌಡರು ದೋಣಿಯಲ್ಲಿದ್ದ ಎರಡು ಬೆಲೆಯುಳ್ಳ ಪೆಟ್ಟಿಗೆಗಳನ್ನೂ ತೆಗೆದು ಹೊಳೆಗೆ ಎಸೆದರು. ಆದರೂ ಭಾರ ಕಡಿಮೆಯಾಗಲಿಲ್ಲ. ಎಷ್ಟು ಹೇಳಿದರೂ ಕೇಳದೆ ಹೆಂಗಸರು ಮಕ್ಕಳು "ರಾಮ, ರಾಮ " ಎಂದು ಕೂಗಿ ಗೋಳಾಡುವುದನ್ನು ಬಿಡಲೇ ಇಲ್ಲ. ದಿಕ್ಕು ಕೆಟ್ಟ ಹುಚ್ಚನಂತೆ ದೋಣಿ ಅಲೆಯತೊಡಗಿತು. ಒಂದು ಸಾರಿ ಅದು ಮುಳುಗುವಂತಾಗಿ ಸ್ವಲ್ಪ ನೀರೂ ಒಳಗೆ ನುಗ್ಗಿತು. ಮತ್ತೆ "ರಾಮ, ರಾಮ" ಎಂದು ಬೊಬ್ಬೆ ಹಾಕಿದರು.

ಹುಟ್ಟು ಹಾಕುತ್ತಲಿದ್ದ ಲಿಂಗನು ಹೆಂಗಸರು ಮಕ್ಕಳ ಗೋಳನ್ನು ಕಂಡು ಎದೆಮರುಗಿದನು. ದೋಣಿ ಭಾರದಿಂದ ಮುಳುಗುವುದು ಖಂಡಿತವೆಂದೇ ಅವನು ನಿಶ್ಚಯಿಸಿದನು. ಭಾರವನ್ನು ಕಡಿಮೆ ಮಾಡುವ ದಾರಿಯನ್ನು ಯೋಚಿಸಿದನು; ಬಗೆಯೇ ಹರಿಯಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಇದ್ದಕ್ಕಿದ್ದ ಹಾಗೆ ಅವನ ಮುಖ ಗಂಭೀರವಾಯಿತು. ಹುಟ್ಟು ಹಾಕುವುದನ್ನು ನಿಲ್ಲಿಸಿದ. ಸುತ್ತಲೂ ನೋಡಿದ. ಮಳೆಯ ಭರದಲ್ಲಿ ಒಬ್ಬರಿಗೊಬ್ಬರು ಕಾಣುತ್ತಲೇ ಇರಲಿಲ್ಲ. ಕಾಣುವ ಹಾಗಿದ್ದರೂ ಯಾರೂ ನೋಡುವ ಸ್ಥಿತಿಯಲ್ಲಿರಲಿಲ್ಲ. ತಾನು ಹೊಳೆಗೆ ಹಾರಿದರೆ

ಭಾರ ಕಡಿಮೆಯಾಗಿ, ದೋಣಿ ಸುರಕ್ಷಿತವಾಗಿ ದಡಕ್ಕೆ ಹೋಗುವುದೆಂದು ಹಾರೈಸಿದ. ತನ್ನನ್ನು ಲೋಕವೇ ಕಳ್ಳನೆಂದು ದೂರಮಾಡಿದಾಗ, ಅನ್ನ ಬಟ್ಟೆ ಕೊಟ್ಟು ಸಾಕಿದವರ ಬಳಗವನ್ನು ಹೇಗಾದರೂ ಉಳಿಸಬೇಕೆಂದು ಮಹಾಯೋಚನೆ ಮಾಡಿದ. ಹುಟ್ಟನ್ನು ದೋಣಿಯ ಒಳಗಿಟ್ಟು, ಹೊಳೆಗೆ ಹಾರಲು ಸಿದ್ದನಾದ. ಇನ್ನೇನು ಹಾರಬೇಕು! ಅಷ್ಟರಲ್ಲಿಯೇ ತನ್ನ ಮಗನ ನೆನಪಾಯಿತು. ಎದೆ ನಡುಗಿ ಹಿಂಜರಿಯಿತು. ಹಾಗೆಯೇ ನಿಂತ.

ಅಷ್ಟರಲ್ಲಿಯೇ ದೋಣಿ ಮುಳುಗುವಂತಾಗಿ "ರಾಮ! ರಾಮ!! ಅಯ್ಯೋ!" ಎಂದು ಕೂಗಿ ಕೊಂಡರು. ಲಿಂಗ ಬಿಸುಸುಯ್ದ. ಎಲ್ಲರೂ ಇದ್ದಂತೆಯೇ ದೋಣಿ ಸೇರಬಾರದೇಕೆ? ಎಂದು ಯೋಚಿಸಿದ. ಮತ್ತೆ ಅದು ಆತ್ಮವಂಚನೆಯ ಆಲೋಚನೆ ಎಂದು ತಿಳಿದ." ಅಯ್ಯೋ!"ಎಂದು ಮತ್ತೆ ರೋಧಿಸಿದರು.

ಲಿಂಗ ಹಿಂದು ಮುಂದು ನೋಡದೆ "ರಾಮ! ರಾಮ!!" ಎಂದು ಕೂಗಿ ಹೊಳೆಗೆ ಹಾರಿದ. ಅವನು ಹಾರಿದ್ದು ಆ ಕಗ್ಗತ್ತಲಲ್ಲಿ, ಆ ಗಾಳಿ ಮಳೆ ಹೊಳೆಗಳ ಭೋರಾಟದಲ್ಲಿ. ಯಾರಿಗೂ ತಿಳಿಯಲಿಲ್ಲ. ದೋಣಿಯ ಭಾರ ಕಡಿಮೆಯಾಗಿ ಮೊದಲಿಗಿಂತಲೂ ಸ್ವಲ್ಪ ಸರಾಗವಾಗಿ ಹೋಗತೊಡಗಿತು.

ಗೌಡರು, "ಲಿಂಗಾ, ದೋಣಿ ಸ್ವಲ್ಪ ಸರಾಗವಾಗಿ ಹೋಗುತ್ತಿದೆಯೋ, ಭಗವಂತನ ದಯೆಯಿಂದ" ಎಂದರು. ಲಿಂಗನ ದಯೆಯೂ ಜೊತೆಗೆ ಸೇರಿತ್ತೆಂದು ಅವರಿಗೆ ತಿಳಿದಿರಲಿಲ್ಲ.

ಅಷ್ಟರಲ್ಲಿಯೇ ಹೆಂಗಸರು ಮಕ್ಕಳೆಲ್ಲ "ದೀಪ! ದೀಪ!" ಎಂದು ಕೂಗಿದರು. ಸುಬ್ಬಣ್ಣ ಗೌಡರು ತಿರುಗಿ ನೋಡಲು, ಬಳಿಯಾದ ಹೊಳೆಯ ದಡದಲ್ಲಿ ಐದಾರು ದೀಪಗಳು ಕಂಡುಬಂದುವು. ದೀಪದ ಬೆಳಕಿನಲ್ಲಿ ಹತ್ತು ಹದಿನೈದು ಜನರು ಸುಳಿದಾಡುತ್ತಿದ್ದುದನ್ನೂ ಕಂಡರು. ಅಂಚಿನಿಂದ ನಾಲ್ಕೈದು ಬಂದೂಕಿನ ಶಬ್ದಗಳೂ ಕೇಳಿಸಿದುವು. ಮೆಲ್ಲಮೆಲ್ಲನೆ ತೇಲುತ್ತಾ ದೋಣಿ ದಡ ಮುಟ್ಟಿತು.

ನುಗ್ಗೆಹಳ್ಳಿಯ ರಾಮೇಗೌಡರೂ ಸಿದ್ದೇಗೌಡರೂ ಓಡಿಬಂದು ಹೆಂಗಸರು ಮಕ್ಕಳನ್ನೆಲ್ಲಾ ಎಚ್ಚರಿಕೆಯಿಂದ ದೋಣಿಯಿಂದ ಇಳಿಸಿದರು. ಸುಬ್ಬಣ್ಣಗೌಡರೂ ಉಸ್ಸೆಂದು ಇಳಿದರು. ಎಲ್ಲರಿಗೂ ದಡ ಸೇರಿದೆವಲ್ಲಾ ಬದುಕಿದೆವಲ್ಲಾ ಎಂಬುದೊಂದೇ ಯೋಚನೆ. ಆ ಆನಂದದ ಸಡಗರದಲ್ಲಿ ಲಿಂಗನ ನೆನಪು ಆಗದಿದ್ದುದು ಏನೂ ಅತಿಶಯವಲ್ಲ. ಆದರೆ ನಾಗ ಮಾತ್ರ ಅಳುತಿದ್ದ. ಅದನ್ನು ನೋಡಿ ನುಗ್ಗೇಹಳ್ಳಿಯ ಸಿದ್ದೇಗೌಡರು "ಯಾಕಪ್ಪಾ ಅಳ್ತೀಯೆ? ಏನಾಯ್ತೋ ?"ಎಂದು ಕೇಳಿದರು

ಅವನು ಬಿಕ್ಕಿಬಿಕ್ಕಿ ಅಳುತ್ತ "ಅಪ್ಪ !" ಎಂದ. ಸುಬ್ಬಣ್ಣ ಗೌಡರು "ಏನದು ಸಿದ್ದೇಗೌಡ್ರೆ? ಎಂದರು. "ಈಹುಡುಗ ಅಪ್ಪಾ ಎಂದು ಅಳ್ತಾನೆ" ಎಂದರು.

ಸುಬ್ಬಣ್ಣಗೌಡರ ಮುಖ ಬೆಳ್ಳಗಾಗಿ ತಟಕ್ಕನೆ ಎದ್ದು ನಿಂತು " ಲಿಂಗಾ! ಲಿಂಗಾ! ಎಂದು ಕರೆದರು. ಕಾಡಿನಿಂದ 'ಲಿಂಗಾ! ಲಿಂಗಾ!" ಎಂದು ಮರುದನಿಯಾಯಿತು. ಲಿಂಗ ಎಲ್ಲಿಯೂ ಕಾಣಲಿಲ್ಲ. ದೋಣಿಗೆ ಓಡಿದರು;

ಅಲ್ಲಿಯೂ ಇರಲಿಲ್ಲ. ಘೋರವಾದ ಕಗ್ಗತ್ತಲನ್ನು ಹೊದೆದುಕೊಂಡು ಗಂಭೀರವಾಗಿಯೂ ಭೀಕರವಾಗಿಯೂ ವಿಶಾಲವಾಗಿಯೂ ಹರಿಯುವ ಕ್ರೂರನದಿಯನ್ನು ದಿಟ್ಟಿಸಿ ನೋಡಿದರು. ಅವರ ಎದೆ ನಡುಗಿತು. ಕಣ್ಣೀರು ಸುರಿಯಿತು, "ಲಿಂಗಾ! ಲಿಂಗಾ!!" ಎಂದು ರೋದಿಸಿದರು. ನಾಗನೂ ಬಿದ್ದು ಬಿದ್ದು ಅಳುತ್ತಿದ್ದನು. ತಿಮ್ಮು, ಸೀತೆ ಇಬ್ಬರೂ ಅಳಲಾರಂಭಿಸಿದರು

.

"ನಮ್ಮ ಮನೆಯ ಒಂದು ಬೆಳಕೇ ಹೋಯಿತು" ಎಂದು ಸುಬ್ಬಣ್ಣಗೌಡರು ಅಲ್ಲಿದ್ದವರೊಡನೆ ಹೇಳಿಕೊಂಡು ಗೋಳಿಟ್ಟರು. ಲಿಂಗನ ಆಕಸ್ಮಿಕವಾದ ಅನಿರೀಕ್ಷಿತ ಮರಣಕ್ಕಾಗಿ ಎಲ್ಲರೂ ಶೋಕಿಸಿದರು. ಗೌಡರು ನಾಗನನ್ನು ಬಹಳವಾಗಿ ಸಂತೈಸಿದರೂ ಅವನು ಅಳುವುದನ್ನೂ "ಅಪ್ಪಾ! ಅಪ್ಪಾ!" ಎಂದು ಕರೆಯುವುದನ್ನೂ ಬಿಡಲೇ ಇಲ್ಲ.

ಲಿಂಗ ಹೊಳೆಯ ಪಾಲಾದುದು ಹೇಗೆ ಎಂಬುದು ಮಾತ್ರ ಒಬ್ಬರಿಗೂ ಬಗೆಹರಿಯಲಿಲ್ಲ. ಸುಬ್ಬಣ್ಣಗೌಡರೂ ಲಿಂಗನ ಸುಳಿವು ಎಲ್ಲಾದರೂ ಕಾಣಬಹುದೋ ಎಂಬ ಆಸೆಯಿಂದ ದಡವನ್ನೆಲ್ಲಾ ಹುಡುಕಲು ಕೆಲವು ಆಳುಗಳನ್ನು ಕಳುಹಿಸಿದರು.

ರಾಮೇಗೌಡರು ಎಲ್ಲರನ್ನೂ ನುಗ್ಗೇಹಳ್ಳಿಗೆ ಬರುವಂತೆ ಪ್ರಾರ್ಥಿಸಿದರು. ದಾರಿಯಲ್ಲಿ ಲಿಂಗನು ಹಠಾತ್ತಾಗಿ ಮರೆಯಾದ ವಿಚಾರವನ್ನೇ ಪ್ರಸ್ತಾಪಿಸಿ ವಿಸ್ಮಯಪಡುತ್ತಾ ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲರೂ ನುಗ್ಗೇಹಳ್ಳಿಗೆ ಸೇರಿದರು.

ಬೆಳಗಾಯಿತು. ಮಳೆ ಇನ್ನೂ ನಿಂತಿರಲಿಲ್ಲ. ರಾತ್ರಿಯ ಗಡಿಬಿಡಿಯಿಂದ ಬಳಲಿ ಬೆಂಡಾದ ಸುಬ್ಬಣ್ಣ ಗೌಡರು ಹಾಸಿಗೆಯ ಮೇಲೆ ಮಲಗಿಕೊಂಡು ರಾಮೇಗೌಡರು ಸಿದ್ದೇಗೌಡರೊಡನೆ ಹಿಂದಿನ ರಾತ್ರಿ ನಡೆದ ಸಂಗತಿಗಳನ್ನು ಕುರಿತು ಮಾತಾಡುತ್ತಿದ್ದರು. ಅವರಿಗೆ ಸ್ವಲ್ಪ ದೂರದಲ್ಲಿ ಅಳುತ್ತಿದ್ದ ನಾಗನನ್ನು ತಿಮ್ಮು ಸೀತೆ ಇಬ್ಬರೂ ಸಮಾಧಾನ ಪಡಿಸುತ್ತಿದ್ದರು.

ಸೀತೆ " ಅಳಬೇಡ, ನಾಗ; ಅಪ್ಪ ಬರ್ತಾನೆ" ಎಂದು ಅವನ ಕಣ್ಣೀರು ಒರಸಿದಳು. ನಾಗ ಬಿಕ್ಕಿ ಬಿಕ್ಕಿ ಅತ್ತ. ತಿಮ್ಮು "ಲಿಂಗ ಬರ್ತಾನೋ ನಾಗ; ಅಳೋದ್ಯಾಕೋ? ಸುಮ್ಮನಿರೊ" ಎಂದು ಸಂತೈಸುತ್ತಿದ್ದ. ಅಷ್ಟರಲ್ಲಿ ಹೊರಾಂಗಣದಲ್ಲಿ ಏನೋ ಗದ್ದಲವಾಗಿ "ಲಿಂಗ ಬಂದ! ಲಿಂಗ!" ಎಂಬ ಕೂಗು ಕೇಳಿಸಿತು. ಸುಬ್ಬಣ್ಣ ಗೌಡರು ಎದ್ದು ಹೊರಗೆ ಓಡಿದರು. ರಾಮೇಗೌಡರೇ ಮೊದಲಾದವರು ಅವರ ಹಿಂದೆಯೇ ನುಗ್ಗಿದರು. ತಿಮ್ಮು ಸೀತೆ ಇಬ್ಬರೂ ನಾಗನನ್ನು ಎಳೆದುಕೊಂಡು ಅಲ್ಲಿಗೆ ಓಡಿದರು. ವಾಸ್ತವವಾಗಿಯೂ ಲಿಂಗ ಬಂದಿದ್ದ! ನಾಗ "ಅಪ್ಪಾ"

ಎಂದು ಓಡಿ ಹೋಗಿ ಅವನನ್ನು ತಬ್ಬಿಕೊಂಡ. ಲಿಂಗನ ಬಟ್ಟೆಬರಿಯೆಲ್ಲಾ ಒದ್ದೆಯಾಗಿ ಮೈಯೆಲ್ಲಾ ಕೆಸರಾಗಿತ್ತು. ಬಹಳ ಬಳಲಿ ಕಂಗೆಟ್ಟು ನಡುಗುತ್ತಿದ್ದ ಅವನನ್ನು ಒಳಗೆ ಕರೆದುಕೊಂಡು ಹೋಗಿ, ಬೇರೆ ಬಟ್ಟೆ ಉಡಿಸಿ, ಕಾಫಿ ತಿಂಡಿ ಕೊಟ್ಟು, ಬೆಚ್ಚಗೆ ಮಲಗಿಸಿದರು.

ಆ ಮೇಲೆ ಸುಬ್ಬಣ್ಣ ಗೌಡರು ಅವನ ಹಾಸಿಗೆ ಬಳಿ ಕುಳಿತು "ಲಿಂಗ, ಇದೇನು ಸಮಾಚಾರ?" ಎಂದರು.

ಲಿಂಗ ಕಿರುದನಿಯಿಂದ: ಹುಟ್ಟುಹಾಕುತ್ತಾ ಇದ್ದೆ. ಒಂದು ಸಲ ದೋಣಿ ಮೇಲೆ ಕೆಳಗಾಗಲಿಲ್ಲವೇ? ಆಗ ಮುಗ್ಗುರಿಸಿ ಹೊಳೆಗೆ ಬಿದ್ದೆ. ದೋಣಿ ಹಿಡಿಯುವಷ್ಟರಲ್ಲಿಯೇ ಮುಂದಕ್ಕೆ ಹೋಯಿತು. ನಾನು ಸ್ವಲ್ಪ ದೂರ ಈಜಿಕೊಂಡು ತೇಲಿಕೊಂಡು ಹೋದೆ. ಏನೋ ನನ್ನ ಅದೃಷ್ಟದಿಂದ ಕಾಲಿಗೆ ದಿಣ್ಣೆ ಸಿಕ್ಕಿತು. ನಿಂತೆ. ಸೊಂಟದ ವರೆಗೂ ನೀರಿತ್ತು. ಹಾಗೆ ನಿಂತಿದ್ದೆ. ಬೆಳಗಾದ ಮೇಲೆ ಹೊಳೆ ಇಳಿಯಿತು. ಏನೋ ನಿಮ್ಮನ್ನದ ಋಣ ಇನ್ನೂ ಇತ್ತು."

ಅದಕ್ಕೆ ಗೌಡರು, "ಅಲ್ಲೋ, ಹುಟ್ಟು ಹಾಕುತ್ತಿದ್ದವನು ಮುಗ್ಗುರಿಸಿ ಬಿದ್ದರೆ ಹುಟ್ಟು ದೋಣಿಗೆ ಬರುವುದು ಹೇಗೋ?"

"ಏನೋ ಅಯ್ಯಾ, ದೇವರಿಗೆ ಗೊತ್ತು!"

ಮಧ್ಯಾಹ್ನ ಊಟ ಆದ ಮೇಲೆ ತಿಮ್ಮು ಸೀತೆ ಇಬ್ಬರೂ ನಾನು ಮೊದಲು ಹೇಳಿದ್ದು, ತಾನು ಮೊದಲು ಹೇಳಿದ್ದು ಎಂದು ಚರ್ಚೆ ಮಾಡುತ್ತಿದ್ದರು. ನಾಗಮ್ಮ ಅಲ್ಲಿಗೆ ಬಂದು "ಏನ್ರೋ ಅದು" ಎಂದರು.

ತಿಮ್ಮು "ಮೊದಲು ನಾನು ಹೇಳಿದ್ದಮ್ಮ, ಲಿಂಗ ಬರ್ತಾನೆ ಅಂತಾ" ಎಂದನು.

ಸೀತೆ "ಇಲ್ಲಮ್ಮ! ತಿಮ್ಮಣ್ಣಯ್ಯ ಬರೀ ಸುಳ್ಳ! ನಾನೇ ಮೊದಲು ಹೇಳಿದ್ದು. ಬೇಕಾದರೆ ನಾಗನ್ನೇ ಕೇಳಮ್ಮ."

"ಯಾರಾದರೂ ಹೇಳಿದ್ದಾಗಲಿ! ಅಂತೂ ಲಿಂಗ ಬಂದನಲ್ಲ. ಅಷ್ಟೇ ಸಾಕು!" ಎಂದು ಹೇಳಿ ನಾಗಮ್ಮ ಒಳಗೆ ಹೋದರು.

# ೪.೪ (ಓದುಪತ್ಯ) ಉಷಾ ಮತ್ತು ರುದ್ರರ ಪ್ರೇಮ ಪ್ರಕರಣ

## ( ಸಂಕ್ರಾಂತಿ ನಾಟಕದ ಆಯ್ದ ಭಾಗ)

**– ಪಿ. ಲಂಕೇಶ್**

ಎರಡನೆಯ ದೃಶ್ಯ

[ನದಿಯ ದಂಡೆ–ಹಿಂದಿನ ದೃಶ್ಯದ ಗುಡಿಸಲು. ನೆರಕೆ ತೆಗೆದು ಒಂದೆರಡು ಮರ, ಗಿಡ ತೋರಿದರೆ ಸಾಕು. ಮೊದಲು ಮೂರು ಜನ ಹುಡುಗಿಯರು ಕೊಡಗಳೊಂದಿಗೆ ಪ್ರವೇಶಿಸುವರು. ಸುಸಂಸ್ಕೃತ ಬ್ರಾಹ್ಮಣರ ಉಡುಪು ಧರಿಸಿದ ಚಲುವೆಯರು. ಅವರು ಮಾತನಾಡುತ್ತ ಬರುತ್ತಿರುವಾಗ ಎದುರಿಂದ ಉಜ್ಜ ಪ್ರವೇಶಿಸುವುದನ್ನು ಅವರು ಗಮನಿಸುವುದಿಲ್ಲ. ನಕ್ಕು, ಅವರ ಗಮನ ಸೆಳೆಯದೆ, ರಂಗದ ಹಿಂಭಾಗದ ಮರದ ಪಕ್ಕದಲ್ಲಿ ಕೂತು ಕಾಣಿಸುವನು. ಹುಡುಗಿಯರು ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದರೂ ಹಿಂದೆ ಬರುತ್ತಿರುವ ಉಷಾಳನ್ನ ಚುಡಾಯಿಸುತ್ತಿದ್ದಾರೆ; ಹಿಂದೆ ತಿರುಗಿ ನೋಡುತ್ತ ನಗುತ್ತ ಮಾತಾಡುತ್ತಾರೆ]

ಉಮಾ : (ಹರಟೆಯಲ್ಲಿ ಈಕೆ) ಯಾಕೆ ರಮಾ ಹೀಗೆ ಆಮೆ ಹಾಗೆ ಬರ್ತಿದ್ದೀ ಬೇಗಬೇಗ ಬಾರೇ.

ರಮಾ : ಸುತ್ತ ನೋಡ್ತಾ ಬರ್ತಿದ್ದೀನಮ್ಮ.

ಸುಮಾ : ಯಾಕಮ್ಮ ಸುತ್ತ ನೋಡ್ತಿದ್ದೀ?

ರಮಾ : ಹದ್ದಿಗೆ ವಯಸ್ಸಾದ ಹಾಗೆ ಆಗಿದೆ– ಅಷ್ಟೂ ತಿಳಿಯಲ್ಲವೇನೇ ನಿನಗೆ? (ನಗುವರು)

ಉಮಾ: ಇವತ್ತು ಬರಲಿಕ್ಕಿಲ್ಲ ಕಣೇ, ಬೇಗ ಬೇಗ ಕಾಲು ಹಾಕೇ.

ರಮಾ: ಬರೋದು ಬಿಡೋದು ನನಗಲ್ಲವಾ ಗೊತ್ತಿರಬೇಕಾದ್ದು? ತೆಪ್ಪಗಿರು.

ಸುಮಾ: ಹಾಗಾದ್ರೆ ಬರ್ತಾನೆ, ಅಲ್ಲವಾ?

ರಮಾ: ಬರ್ತಾನೆ? ಯಾರೇ ಅವನು ?

ಸುಮಾ: ಮೀಸೆ ಬಿಟ್ಟುಕೊಂಡು ಗಿರಿಕಿ ಚಡುವು ಹಾಕ್ಕೊಂಡು—

ಉಮಾ: ಕಿವಿಯಲ್ಲಿ ಹತ್ತೊಂಟಿ ಇಟ್ಟುಕೊಂಡು—

ಸುಮಾ: ಕೈಯಲ್ಲಿ ಉಂಗುರ ಹಾಕ್ಕೊಂಡು—

(ನಗುವರು. ಅವರು ನಾಲ್ಕು ಹೆಜ್ಜೆ ಹೋದಾಗ ಹಿಂದೆ ನಿಧಾನಕ್ಕೆ ಉಷಾ ಪ್ರವೇಶ. ಅವರು ಆಕೆಯತ್ತ ನೋಡುತ್ತ ಅವಳಿಗೆ ಕೇಳಿಸುವಂತೆ ಮಾತಾಡುತ್ತಲೇ ಇರುವರು)

ಉಮಾ: ನನಗೇನೋ ಇದು ಸರಿಹೋಗಲ್ಲಮ್ಮ.

ರಮಾ: ಯಾಕಮ್ಮ ಸರಿಹೋಗಲ್ಲ? ನಾನು ಪಂಡಿತರ ಮಗಳಲ್ಲವ?

ಉಮಾ: ಅದಲ್ಲ, ಹಳ್ಳಿ ಮುಕ್ಕನಿಗಾಗಿ ನೀನು ಪರದಾಡೋದು.

ರಮಾ: ಕಗ್ಗಲ್ಲು, ಕಗ್ಗಲ್ಲು ಕಣೇ ಅವನು.

ಸುಮಾ: ಶ್ಶೀ ! ಗಂಜಳದ ವಾಸನೆ!

ಉಮಾ: ಯಾಕ್ಲಾ, ಬಾರ್ಲಾ, ಹೋಗ್ಲಾ—ಅನ್ನೋ ಭಾಷೆ.

ಸುಮಾ: ಗಬ್ಬು ಬೆವರ ವಾಸನೆ.

ಉಮಾ: ಕೆಸರಲ್ಲಿ ಮುಳುಗಿ ಗೊಜಮೊಟ್ಟೆ ಹಿಡೀತಾನೆ.

ಸುಮಾ: ಎಲೆಯಡಿಕೆ ಹಾಕ್ಕೊಂಡು ಪಿಚಕ್ಕಂತ ಉಗೀತಾನೆ.

ಉಷಾ: ಉಮಾ! ನನ್ನ ತಂಟೆಗೆ ಬರಬೇಡ!

[ನಿಂತು ಕೇಳುತ್ತಿದ್ದವಳು, ಎತ್ತರದ ಧ್ವನಿಯಲ್ಲಿ]

ಉಮಾ: (ಗೆಳತಿಯರಿಗೆ)

ತಂಟೆ ಪಂಟೆ,

ಕಾರೆ ಕಂಟೆ,

ಕೂತುಕೊಂಡು

ತಿಂದೂ ಉಂಡು

ರಮಾ: ಹ್ಯಾಗಿತ್ತವ್ವ?

ಸುಮಾ: ಹೇಳು ಹ್ಯಾಗಿತ್ತವ್ವ?

[ನಗುವರು]

ರಮಾ: ನಂಗ್ಯಾಕೋ ಕಾಲುನೋವು ಕಣೆ.

[ಎಂದು ನಟಿಸುತ್ತ ಕೂರುವಳು. ಉಷಾ ಮುನಿಸಿನಿಂದ ನಿಂತಿರುವಳು. ಮುಂದಿನ ಅವರ ಮಾತಿನ ಸಮಯದಲ್ಲಿ 'ರುದ್ರ' ಅನ್ನುವವರೆಗೆ ಅವಳ ಗಮನ ಬೇರೆ ಕಡೆಗೆ]

ಉಮಾ: ಹೌದೇನೆ? ಕೂತುಬಿಟ್ಟೆಯಾ? ಅಯ್ಯೋ ಪಾಪ. ನಾವೀಗ ಹೊರಟು ಹೋದ್ರೆ ಏನವ್ವ ನಿನ್ನ ಗತಿ?

ಸುಮಾ: ಹುಲಿ ಬರುತ್ತೆ ಕಣೇ ಹುಲಿ!

ರಮಾ: ಬಾಯಿಗೆ ಬಂದದ್ದು ಬೊಗಳಬ್ಯಾಡ, ಎಂಥ ಹುಲಿಯೆ?

ಉಷಾ: (ಮುನಿಸಿನಿಂದ) ನಿನ್ನ ತಲೇಲಿದೆ ಹುಲಿ!

ರಮಾ: (ಗಮನಿಸದೆ, ಸುಮಾಗೆ) ಅದರ ಹೆಸರೇನೇ?

ಸುಮಾ: ರುದ್ರ ಅಂತ, (ಉಮಾಗೆ) ಅಲ್ಲವೇನೆ?

[ನಗುವರು]

ಉಮಾ: ಅದರ ಹೆಸರು ರುದ್ರ ಅಂತ.

ಉಷಾ: (ಉಮಾ ಕಡೆಗೆ ಹೆಜ್ಜೆ ಹಾಕಿ) ತೆಪ್ಪಗೆ ಬಾಯಿ ಮುಚಿರ್ತೀಯ—

ಉಮಾ: (ದೂರ ಹೋಗುತ್ತ) ರುದ್ರ ಅಂತ... ಹುಲಿ ಇತ್ತಂತೆ. ತುಂಬಾ ತಮಾಷೆ ಹುಲಿ ಗೊತ್ತ? ಮೆಲ್ಲ ಮೆಲ್ಲಗೆ, ಕಳ್ಳನ ಹಾಗೆ ನಡೀತಿತ್ತಂತೆ. ಇದ್ದಕ್ಕಿದ್ದಂತೆ ಛಂಗನೆ ನೆಗೀತಿತ್ತಂತೆ. (ಉಷಾ ಹೆಜ್ಜೆ ಇಡುವಳು, ಉಮಾ ದೂರ ಸರಿಯುವಳು)

ಗುರ್ ಗುರ್ ಅಂತ ಸದ್ದು ಮಾಡ್ತಾ ಹೀ....ಗೆ ಬಂತಂತೆ (ರಮಾ ತೋರಿಸಿ ಸುಮಾಗೆ) ಈಕೇನ್ನ ನೋಡ್ತಾ ಹೀ...ಗೆ ನಾಲಗೇನ ತುಟಿಗೆ ಸವರಿ 'ಹ್ಯಾಂಗಿದ್ದೀಯ?' ಅಂತಂತೆ. ಅದಕ್ಕವಳು, 'ಹೀಗೇ ಇದ್ದೀನಿ ಹುಲಿರಾಯ. ಸಾಯ್ಲಿಲ್ಲ, ಬದುಕ್ಲಿಲ್ಲ' ಅಂತಾಳಂತೆ.

ಸುಮಾ: ಆಗ? ಆಮೇಲೆ? ಹುಲಿರಾಯ ಏನಂದ?

ಉಮಾ: ಯಾಕೇ ಹುಡುಗಿ ಹಿಂಗೆ ಬ್ಯಾಸರಾಪಡ್ತಿ--ಹೊಳೆ ಹಾರಲಾ ನಿಂಗಾಗಿ? ಬೆಟ್ಟ ದಾಟಲಾ ನಿಂಗಾಗಿ? ಶಿವನ ನೆತ್ತಿಯ ಚಂದ್ರ ಬೇಕಾ? ಲಕ್ಷ್ಮಿಯ ಕತ್ತಿನ ಮುತ್ತು ಬೇಕಾ?- ಅಂತಂತೆ.

ಉಷಾ: (ಕೋಪದಿಂದ ಹೆಜ್ಜೆ ಹಾಕಿ) ಉಮಾ! ಉಮಾ!

ರಮಾ: (ಎದ್ದು) ಯಾವಾಗ ಬಂದೆಯೆ?

ಉಷಾ: ನಿಮ್ಮ ಕತೆ ಕೇಳಿ ಕೇಳಿ ಹುಚ್ಚು ಹಿಡಿಯುತ್ತೆ—

[ರಮಾ, ಸುಮಾ,ಉಮಾ ದೂರಕ್ಕೆ ಹೋಗಿ ಉಷಾಳಿಗೇ ಹಾಡುವರು]

ಉಮಾ: ಹುಚ್ಚಲ್ಲವ್ವ, ನಮಗೆ ಹುಚ್ಚಲ್ಲವ್ವ,

ಸುಮಾ: ಮತಾಡೊ ಹುಲಿರಾಯ ಗೊತ್ತೇನವ್ವ,

ಉಮಾ: ನಿಮಗೆ-- ಹಾಡುವ ಹುಲಿರಾಯ ಗೊತ್ತೇನವ್ವ?

ರಮಾ: ಭರಣೀಯ ಮಳೆಯಲ್ಲಿ

ಧರಣೀಯ ಉಳುವಂಥ–––

ಸುಮಾ: ಮಾತಾಡೋ ಹುಲಿರಾಯ ಗೊತ್ತೇನವ್ವ,

ಉಮಾ: ನಿಮಗೆ–––ಹಾಡೂವ ಹುಲಿರಾಯ ಗೊತ್ತೇನವ್ವ?

ರಮಾ: ಹೊಲೆಬೆವರ ಘಮಘಮಾ

ತಮಟೆಯ ಢಮಢಮಾ

ಸುಮಾ: ಹಟ್ಟೀಯ ಹುಲಿರಾಯ

ಉಮಾ: ಮಟ್ಟೀಯ ಹುಲಿರಾಯ

ರಮಾ: ಮಾತಾಡೋ ಹುಲಿರಾಯ ಗೊತ್ತೇನವ್ವ

ಸುಮಾ,ಉಮಾ : ನಿಮಗೆ––– ಹಾಡೂವ ಹುಲಿರಾಯ ಗೊತ್ತೇನವ್ವ?

[ಈ ಹಾಡು ಕೇಳಿ ಸಿಟ್ಟನಿಂದ ಉಷಾ ಉಮಾ ಹತ್ತಿರ ಬಂದು]

ಉಷಾ: ಏನದು ನೀನು ಹೇಳ್ತಿರೋದು.

ಉಮಾ: (ಮುಂಚಿನಂತೆಯೇ) ಎಲ್ಲರಿಗೂ ಗೊತ್ತಿರೋದು.

ಉಷಾ: ನಿನ್ನ ಕಣ್ಣು ಕಿತ್ತುಬಿಡ್ತೇನೆ.

ಉಮಾ: ಕಣ್ಣು ಕಿತ್ತರೆ ಏನು ಬರುತ್ತೆ. ಬೇಕಾದರೆ ಸುಳ್ಳು ಹೇಳ್ತೇನೆ. ಹೇಳ್ಲಾ?

ಅವನ ಕಂಡ್ರೆ ಒಂಚೂರೂ ಇಷ್ಟ ಇಲ್ಲಮ್ಮ ಉಷಾಗೆ–––

ಉಷಾ: ನಾಚಿಕೆಗೆಟ್ಟು ಮಾತಾಡಬೇಡ.

ಉಮಾ: (ನಾಚಿಕೆ ಸಂಪೂರ್ಣ ಬಿಟ್ಟು) ಹ್ಯಾಗೆ ಕೋಪ ಬರುತ್ತೆ! ಈ ಒಳಗೊಂದು ಹೊರಗೊಂದು ಎಷ್ಟು ದಿನ ನಡಿದೀತು! ಕೊನೆಗೊಂದು ದಿನ ಎಲ್ಲದನ್ನೂ ಒಪ್ಪಿಕೊಂಡು ತೆಪ್ಪಗೆ ಬದುಕಬೇಕಾಗುತ್ತೆ. ನನಗೊತ್ತಿಲ್ಲವಾ–––

ಉಷಾ: ಏನೇ, ಏನೇ ನಿನಗ್ಗೊತ್ತಿರೋದು?

ರಮಾ: ಜಗಳ ಕಾಯಬೇಡ್ರೇ––––––

ಉಮಾ: (ಲೆಕ್ಕಿಸದೆ) ನಿನ್ನ ತಂದೆ ಬೇಡ, ನಿನ್ನ ತಾಯಿ ಬೇಡ! ಅಪ್ಪನ ಜುಟ್ಟು, ಅಮ್ಮನ ಮಡಿ ಕಂಡ್ರೆ ಫಕಫಕ ನಗೆ ಬರುತ್ತೆ ನಿಂಗೆ! ರುದ್ರ,ರುದ್ರ , ಹಗಲೂ ರಾತ್ರಿ ರುದ್ರ! ರುದ್ರ, ಕೊಟ್ಟಿಗೆ ಹ್ಯಾಗಿರುತ್ತೆ, ಹಬ್ಬ ಹ್ಯಾಗಿರುತ್ತೆ, ಹಸು ಹ್ಯಾಗಿರುತ್ತೆ, ಬೆವರು ಹ್ಯಾಗಿರುತ್ತೆ.—ಗಂಗಾಳ, ಗಂಜಳ, ಹುಲ್ಲು: ಮೂರ್ಹೊತ್ತೂ ಅದೇ–––

ಉಷಾ: (ಮತ್ತಷ್ಟು ಸಿಟ್ಟಿನಿಂದ) ದರಿದ್ರವೇ,

[ಎಂದು ಛಂಗನೆ ಹಾರಿ ಉಮಾ ಜಡೆ ಹಿಡಿದುಕೊಂಡು ಎಳೆದು ಎರಡು ಏಟು ಕೊಡುವಳು. ಹಿಂದುಗಡೆ ಉಜ್ಜ ಮುಂದೆ ಬರಲು ಯೋಚಿಸಿ ಹಿಂಜರಿಯುವನು. ಇನ್ನಿಬ್ಬರು ಹುಡುಗಿಯರು ಬಿಡಿಸಿಕೊಳ್ಳಲು ಹೋದರೂ ಬಿಡದೆ ಕಿತ್ತಾಡುತ್ತಿರುವರು. ಒಬ್ಬಳ ಕುಪ್ಪಸ ಹರಿದಿದೆ; ಇನ್ನೊಬ್ಬಳ ಸೆರಗು ನೆಲಕ್ಕೆ ಬಿದ್ದಿದೆ, ಅವರ ಸದ್ದು ಕೇಳಿ ಬಂದವನಂತೆ ರುದ್ರ ಬಂದು ನಿಂತು ನೋಡುತ್ತಿದ್ದಾನೆ.]

ರುದ್ರ: ಹಂಗಲ್ಲ, ಹಂಗಲ್ಲ, ಎಡಗೈ ಇತ್ಲಾ ಕಡೆ ಹಾಕು -----ಛೆ, ಹಂಗಲ್ಲ---

[ಉಷಾ ಹೊರತು ಮಿಕ್ಕವರು ಕೊಡ ಎತ್ತಿಕೊಂಡು ಓಡುವರು. ಉಷಾ ಮುನಿಸಿನಿಂದ ಸೀರೆ ಕೊಡವಿಕೊಂಡು]

ಉಷಾ: ನಿನ್ನನ್ನೇನು ಕರೆಸಲಿಲ್ಲ ಇಲ್ಲಿಗೆ.

ರುದ್ರ: ನೀನು ಕರೆದೆ ಅಂತ ನಾನು ಹೇಳ್ಳಿಲ್ಲ

ಅಲ್ಲಿ , ಅತ್ಲಾಕಡೆ ಹುಲ್ಲು ಹತ್ತೇತಿ—ಕೊಡವಲಾ?

ಉಷಾ: ಕೊಡವುತೀಯ ? ಹ್ಞೂ?

ರುದ್ರ: (ಕೈ ನೋಡಿಕೊಂಡು) ಕೈ ಚ್ಚೊಕ್ಕ ಇಲ್ಲ—

[ಅವನ ಹಿಂಜರಿಕೆಗೆ ಉಷಾ ಗಟ್ಟಿಯಾಗಿ ನಗುವಳು]

ರುದ್ರ: (ಅವಮಾನಿತನಾಗಿ) ಉಸಾ.......ನಾಳ್ಯಲ್ಲ  ನಾಳಿದ್ದು.... ಸಂಕ್ರಾಂತಿ......

ಉಷಾ: (ಇನ್ನೂ ನಕ್ಕು) ಏನದು ಉಸಾ......ಉಸ್ –ಉಸ್....ಉಸಾ...

ರುದ್ರ: (ಅವಮಾನದಿಂದಲೇ) ನಿನ್ನ ಹೆಸರು ---ಉಸಾ

ಉಷಾ: (ನಗೆ ತಡೆದುಕೊಂಡು) ನನ್ನ ತಂದೆ ಹೇಳ್ತಿದ್ದರು–ಶೂದ್ರ ಮುಂಡೇವಕ್ಕೆ ಮಾತು ಬರಲ್ಲ ಅಂತ

ರುದ್ರ: ಈಗ ಮಗಳೂ ಅದನ್ನೇ ಹೇಳ್ತಿದಿ

ಉಷಾ: ಅಪ್ಪ ಹೇಳಿದ್ದು ಸರಿ. ಆದರೆ ಮಾತು ಬೇಕೇಬೇಕು ಅಂತ ನನಗೆ ಅನ್ನಿಸೋಲ್ಲ, ಕೋಪ ಬೇಡ

ರುದ್ರ: ನಾಳಿದ್ದು ಸಂಕ್ರಾಂತಿ..  ದೊ...ಡ್ಡ ಹಬ್ಬ

ಉಷಾ: (ಅದನ್ನೆ ಹೇಳುತ್ತ ಅಣಕಿಸಿ) ನಾಳಿದ್ದು ಸಂಕ್ರಾಂತಿ, ದೊ....ಡ್ಡ ಹಬ್ಬ. ಅದಕ್ಕೆ ನಾನೇನು ಮಾಡಬೇಕು?

ರುದ್ರ: ಹಿಂಡ್ ಹಿಂಡು ಜನ ಸೇರ್ತಾರೆ. ನಮ್ಮೂರು ಕುರಿ ರೊಪ್ಪದಂಗಿರ್ತತಿ, ಜನ ಪರಮಾಣ ಮಾಡ್ತಾರೆ; ಕೆಟ್ಟ ಚಾಳೀನೆಲ್ಲ ಬಿಡ್ತಾರೆ; ಭಜನೆ ಮಾಡ್ತಾರೆ ಆಚೆ ನಾಳಿದ್ದಿನಿಂದ ಒಳ್ಳೇರಾಗ್ತಾರೆ! ಬಸವಣ್ಣ ಬರ್ತಾರೆ—
ಉಸಾ.....

ಉಷಾ: ನನ್ನ ಹೆಸರು ಉಷಾ.

[ಇಲ್ಲಿಂದ ಅವರು ದೈಹಿಕವಾಗಿ ಪ್ರೇಮಿಸುವ ತನಕ ಉಷಾ ರುದ್ರನನ್ನ ಅಣಕಿಸುವ ಮೂಲಕ, ಹೀಯಾಳಿಸುವ ಮೂಲಕ, ಅವನ ಕತೆಗಳಲ್ಲಿ ಕುತೂಹಲ ತೋರುವ ಮೂಲಕ ಅವಳಿಗೆ ಇಷ್ಟವಾದ ರುದ್ರನ ಮೂಲಭೂತ ಗುಣ ಹೊರಗೆಳೆಯಲು ಯತ್ನಿಸುತ್ತಾಳೇ. ಅವಳ ಸನಾತನ ಹಿನ್ನೆಲೆಯನ್ನು ಕೆಂಪು ಕಂಬಳಿಯಾಗಿ ಬಳಸುತ್ತಾಳೇ: ತನ್ನ ಪ್ರಯತ್ನದಲ್ಲಿ ಯಶಸ್ಸು ದೊರೆತಾಗ ಸಂತೋಷಿಸುತ್ತಾಳೆ, ಅದರೆ ಅದು ಕ್ಷಣಿಕವೆಂಬುದು ರುದ್ರ, ಬಸವಣ್ಣನವರ ಪ್ರಭಾವದಲ್ಲಿ ಬೆಳೆಯುವುದರಲ್ಲಿ ಗೊತ್ತಾಗುತ್ತದೆ]

ರುದ್ರ: (ಹೇಳಲು ಪ್ರಯತ್ನಿಸುತ್ತಾ) ಉಷಾ.......

ಉಷಾ: ಉ....ಷಾ,

ರುದ್ರ : ಉ...ಷಾ. ಈ ಹಿರ್ದಾತಾ?

[ನಗುವರು]

ಉಷಾ: ಹಿದ್? ಹಿರ್ದ್? ಹಿರ್ದಾತು!(ನಗುವಳು) ಹಂದಿ ಕೂಗಿದಂಗೆ ಕೂಗ್ತಿ—

ರುದ್ರ: ಕೂಗಿದಂಗಿಲ್ಲ –ವದರಿದಂಗೆ

[ನಗುವರು]

(ಗಂಭೀರವಾಗಿ) ನೀ ಬರಾಕೇಬೇಕು ಬಿಡು. ನಮ್ಮೂರ ಮಂದಿ ನೋಡಬೇಕು; ಕೊಳಕು ಮಂದೀನ, ಹುಳುಕು ಮಂದೀನ ನೋಡೇ ತೀರಬೇಕು.

ಉಷಾ: ಬಂದೇನಪ್ಪ ನಾ ಮಾಡೋದು? ಹುಲಿ ಇದಾವ ಅಲ್ಲಿ ?

ರುದ್ರ: ಹ್ಞೂ, ಮನಾಮನಿ! ಎಷ್ಟು ಬೇಕು ನಿಂಗೆ?

ಉಷಾ: ಒಂದೇ ಸಾಕು! ಕರಡಿ?

ರುದ್ರ: (ಅವಳ ಆಸಕ್ತಿಗೆ ಅನುಸಾರ) ಅದಾವೆ ಮರಾಯತಿ, ಅದಾವೆ. ಎಷ್ಟು ಕಲ್ದಿ ಬೇಕು ನಿಂಗೆ? ನಾಕ? ಹತ್ತ? ಸಾವರವ? ನೀನು ಕಲ್ದಿ ಹಿಡಕಂಡು ಆಡಿ ಆಡಿ ಸುಸ್ತಾಗಿ ಉಪ್ಪಿನಕಾಯಿ ಹಾಕೊಂಡು ತಿನ್ನಬೈದು. ಆನೆ ಅದಾವೆ:ಹಂದಿ, ಕಿರುಬ, ಸಾರಗ: ನಮ್ಮ ಹಿತ್ತಲದಾಗೇ ಕಚ್ ಬುಸ್ ಕಚ್ ಬುಸ್ ಅಂತ ಕಿತ್ತಾಡ್ತವೆ. ಗದ್ದೈತಿ, ಹೊಲೈತಿ, ಹೆಂಡೈತಿ, ಕೆರೆ ತುಂಬ ನೀರೈತಿ; ಮೊಸಳೆ, ಮೀನು ಅದರ ತುಂಬ ತುಂಬಿದಾವೆ – ಆತ? ಸಾಕಾದೀತ? (ಕುತೂಹಲ ಕೆರಳಿಸುತ್ತ) ಮತ್ತೊಂದು ಜಾನುವಾರೈತಿ ಉಸೀ, ಮೂರು ಹೊತ್ತು ಕಣ್ ಕೆಂಪಗೆ ಮಾಡ್ಕಂಡು ಹಾಡ್ತತಿ, ಗೊತ್ತ ? ಹಾಡ್ತತಿ. ಹಾಡಬ್ಯಾಡ ಅಂದ್ರೆ ಕುಣೀತೈತಿ, ಮಾರವ್ವನ ತಾವ ಹೋಗಿ ಅಡ್ಡ ಬಿದ್ದು ಪೂಜೆಮಾಡಿ ಹಾರಾಡ್ತತಿ. 'ಕುಣೀಬ್ಯಾಡ ಹಾಡಬ್ಯಾಡ' ಅಂದ್ರ ಮರ ಹತ್ತಿ ಕೂತು ಚಂದ್ರ ಚುಕ್ಕಿಪಕ್ಕಿ ಎಲ್ಲ ಲೆಕ್ಕ ಹಾಕ್ತತಿ---

ಉಷಾ: ಏನದು ? ಯಾವ ಪ್ರಾಣಿ?

ರುದ್ರ: ನನ್ನ ಕಂಡ್ರ ಭಾಳ ಆಸೆ ಅದಕ್ಕೆ , ಹೊಲೇರ ಹೊಟ್ಯಾಗೆ , ಎಂಥ ಹುಡುಗ ಹುಟ್ಟಿದಾನಲ್ಲ ಅಂತ ಎಗರಾಡ್ತತಿ . ಅದಕ್ಕೆ ನಾ ಕುಡದ್ರ ಚಂದ, ಕುಡೀದಿದ್ರ ಚಂದ, ನಿಂತ್ರ ಬಂದ, ಕೂತ್ರ ಚಂದ.

ಉಷಾ: (ಕುತೂಹಲ ತಡೆಯಲಾರದೆ) ಏನದು? ಯಾವದಪ್ಪ ಹೇಳು—

ರುದ್ರ: ನನ್ನ ಅಪ್ಪ ! ನನ್ನ ಹೆತ್ತ ಅಪ್ಪ!

[ನಗುವರು ಹಿಂದುಗಡೆ ಉಜ್ಜ ಸಿಟ್ಟಿನಿಂದ ಎಂಬಂತೆ ಕೈ ತೋರುತ್ತ ಬರುವನು: ಮನಸು ಬದಲಿಸಿ ಮರೆಯಾಗಿ ಹೋಗುವನು]

ಅದು ಹ್ಯಂಗೆ ಆಂವ ಮನಸ್ಯಾಗಿ ಹುಟ್ಟಿದನೋ ಅಂತ ..... ಬಸವಣ್ಣ ಬಂದ್ರು, "ಉಜ್ಜಪ್ಪ ಶರಣಾಗು" ಅಂದ್ರು. ಹಿಂದೆ ಮುಂದೆ ನೋಡದೆ ಆಗಿಬಿಟ್ಟನಲ್ಲ! ಇಬೂತಿ ಹಚ್ಚಿಕೊಂಡು ಓಡಾಡಿದ್ದೇನು, ರುದ್ರಾಕ್ಷಿ ಸರ ಅಂಗಿ ಮ್ಯಾಲೆ ಹಾಕ್ಕಂಡಿದೇನು, ಗಿಡದಾಗಿನ ಹೂನ್ನೆಲ್ಲ ತಂದು ಪೂಜೆ ಮಾಡಿದ್ವೇನು.

[ಅಷ್ಟರಲ್ಲಿ ಉಷಾ ಕಲ್ಲಿನ ಮೇಲೆ ಕೂತು ಗಲ್ಲಕ್ಕೆ ಕೈಯಿಟ್ಟು ಕೇಳುತ್ತಿರುವಳು. ಉಜ್ಜ ನೆಲದ ಮೇಲೆ ಕೂತಿದ್ದಾನೆ]

ಅಪ್ಪನ ಇಬೂತ್ಯಾಗೆ ಅವನು ಗೊತ್ತೇ ಸಕ್ತಿರಲಿಲ್ಲ! ಹ್ಯಂಗಪ ಇಂವ ಹಿಂಗಾದ ಅಂತ ಅವತ್ತೇ ಸಂಜೆ ನೋಡ್ತನಿ--ಮುಡಿಕೆ ಮನೆ ಪಾರೀ ತಾವ ಹಾಡ್ತಿದಾನೆ, ಕುಣೀತ ಕುಡೀತಿದಾನೆ! ಪಾರಿ ಹಿಡಕಂಡ್ ತಿರುಗಿಸ್ತಿದಾನೆ! ಆಕೆ ಕಬ್ಬಿನ ಗಾಣಕ್ಕೆ ಸಿಕ್ಕಂಗ ಬರ್ರ್ರೋ ಅಂತ ಚೀರ್ತಿದಾಳೆ!

ಉಷಾ: ಪಾರಿ ಯಾರು?

ರುದ್ರ: ಪಾತರಗಿತ್ತಿ ಹಡಾಣಿ ಪಾರಿ -- ನಿನಗ್ಗೊತಲ್ಲ, ಇದು—ಬಸವಣ್ಣ ಪಾರೀನ್ನೂ ಶರಣಿ ಮಾಡಿದ್ರು— ಅವಳಾದ್ದು ಶರಣಿ ಅಲ್ಲ, ಬೆರಣಿ! ಬಸವಣ್ಣ ಊರಾಚೆಗೆ ಕಾಲು ಹಾಕಿದ್ದೇ ತಡ ಕರಕೊಂಡು ಬಿಟ್ಟು ಅಪ್ಪನ್ನ! ಯಾಕವ್ವ ಪಾರಕ್ಕ ನನ್ನಪ್ಪನ್ನ ನೀನು ಹಿಂಗ್ಮಾಡ್ತಿ, ಅವನ ಹಾರ್ತಕ್ಕೆ ಅವನ್ನ ಬಿಡಬಾರದ---ಅಂದೆ. "ನಿನ್ನಪ್ಪನೇನು ಕಟ್ಟಿಗಂಡೀದೆನಲಾ! ಅವನೇ ಬಂದಾನೆ ತೀಟೆನಾಯಿ ಬಂದಂಗೆ" ಅಂದ್ಲು. ಅಂದು ಬಿಟ್ಟು ಹಾಡಾಕೆ ಹತ್ತಿದಳು....

ಉಷಾ: ಹಾಡಿದಳ?

ರುದ್ರ: ಹ್ಯಂಗೆ ಹಾಡಿದ್ಲು ಅಂತ! ಆಕಿ ಗುಡ್ಲಿನ ಸೂರು ಆಳೆತ್ತರಕ್ಕೆ ಹಾರಿ ದೊಬಕ್ ಅಂತ ಬಿತ್ತು! ಕಾಲು ಕಿತ್ತರು ನೋಡು ಜನ! (ನಗುವರು) ಅಂಥ ಪದ ಕೇಳ್ತಾ ಅಪ್ಪ ಹಾಯಾಗಿ ತಲೆಯಾಡಿಸ್ತಿದ್ದ!

ಉಷಾ: ನಿಮ್ಮಪ್ಪ ಆಗಬೇಕಾದ್ದು ಶರಣಲ್ಲ.

ರುದ್ರ: ಮತ್ತೇನು? ಅಪ್ಪನ ಮಾತಿರಲಿ ಅತ್ತ; ಬರ್ತೀಯಲ್ಲ? ನಮ್ಮೂರಿಗೆ ಖರೇವಂದ್ರು ಬರ್ತೀಯಲ್ಲ?

ಉಷಾ: 'ದಿಶಿ ಮಂದಾಯತೇ ತೇಜೋ ದಕ್ಷಿಣಸ್ಯಾಂ ರವೇರಪಿ'

[ಕಲಿಯುವ ಹುಡುಗನಂತೆ , ಅದರೂ ತನ್ನ ಆಶೆ ಬಿಟ್ಟುಕೊಡದೆ]

ರುದ್ರ: ಹಂಗಂದ್ರೇನು?

ಉಷಾ: ಅರ್ಥ ....ನಿನಗೆ ಅರ್ಥವಾಗೋಲ್ಲ.

ರುದ್ರ : ಯಾಕೆ ತಿಳಿಯಾಕಿಲ್ಲ ? ನೆಟ್ಟಗೆ ಹೇಳಿದ್ರೆ ಎಲ್ಲ ತಿಳೀತತಿ

ಉಷಾ: ನೆಟ್ಟಗೆ ....ಹೇಳೋಲ್ಲ, ಯಾಕೆಂದ್ರೆ ನಂಗೆ ನೆಟ್ಟಗೆ ಬರೋಲ್ಲ

ರುದ್ರ: ಸುಳ್ಳು, ನಿನಗ್ಗೊತ್ತು.

ಉಷಾ: (ಹಂಗಿಸುತ್ತ) ಬಸವಣ್ಣನವರನ್ನ ಕೇಳು , ಹೇಳ್ತಾರೆ.

'ದಿಶಿ ಮಂದಾಯತೇ ತೇಜೋ ದಕ್ಷಿಣಸ್ಯಾಂರವೇರಪಿ'

ರುದ್ರ: (ನೆನಪಿಡಲು ಪ್ರಯತ್ನಿಸುತ್ತ) ದಿಸಿ..... ಮಂದಯತ್ತೆ.....

ಉಷಾ: ಶೂದ್ರ ಮುಂಡೇವಕ್ಕೆ–––

ರುದ್ರ: (ಮುಂದುವರಿಸಿ)—ಮಾತು ಬರಾಕಿಲ್ಲ, ತಿಳಿವಳಿಕೆ ಬರಾಕಿಲ್ಲ, ನಾವು ಕತ್ತೆಗಳು. ಕಾಡುಪ್ರಾಣಿಗಳು, ಇವತ್ತಲ್ಲದಿದ್ದರೆ ನಾಳೆ—

ಉಷಾ: (ಮಂದಹಾಸ ಬೀರುತ್ತ) ಇವತ್ತಲ್ಲ ನಾಳೆ ನೀನೂ ಸಹ ನಾಮಕ್ಕೆ ಬದಲು ವಿಭೂತಿ ಹಾಕಿ ಮಂತ್ರ ಮಣಮಣ ಹಾಡ್ತಾ ಓಡಾಡ್ತಾ , ದೊಡ್ಡ ಪಂಡಿತರ ಹಾಗೆ ರೇಷ್ಮೆ ಪಂಚೆ ಹಾಕಿಕೊಂಡು ಆಸ್ಥಾನದಲ್ಲಿ ಕೂತು ಜ್ಞಾನದ ತೇಗು—

ರುದ್ರ: (ವ್ಯಂಗ್ಯ ತಿಳಿಯದೆ) ನಮಗೂ ಎಲ್ಲ ಗೊತ್ತಾಗುತ್ತೆ, ನಮ್ಮನ್ನ ಕಲಿತವರಿಂದ ದೂರ ಇಡಾಕಾಗಲ್ಲ; ನಾವು ಬಂದ್ರೆ ಗಾವುದ ದೂರ ಓಡೋ ನೀವೆಲ್ಲ ಕೊನೆಗೆ ತಿಳ್ಕೋಬೇಕಾಗುತ್ತೆ: ಇವರೂ ಮನುಸ್ಯರು ಅಂತ––––

ಉಷಾ: ನಾನು ಅದನ್ನೆ ಹೇಳ್ತಿದ್ದೆ, ಎಲ್ಲ ಗುಡಿ , ಮನೆ , ಮಠಗಳಲ್ಲಿ ಓಡಾಡ್ತಿ; ತಿಳೀದ ಜನಕ್ಕೆ ಬುದ್ದೀ ಹೇಳ್ತಾ ತೃಪ್ತಿ ಪಡ್ತಿ. ದೊರೆಗಳೆದುರು, ವಿದ್ವಾಂಸರೆದುರು ಕೂತು ಮುಗುಳ್ನಗ್ತಿ—ಈಗ ಬಸವಣ್ಣ ಮಾಡ್ತಿದಾರಲ್ಲ?

ರುದ್ರ: ನನ್ನ ಮಕಕ್ಕೆ ಬೇಕಾದ್ರೆ ಉಗಿ. ಬಸವಣ್ಣನ ತಂಟೆಗೆ ಬಂದ್ರೆ—

ಉಷಾ: (ನಗುತ್ತ್ರ) ಬಂದರೆ .......

ರುದ್ರ: ನಿನ್ನನ್ನ ಹೆಬ್ಬೆರಳಿನಿಂದ ನೆತ್ತಿತಂಕ ಸಿಗದು ತೋರಣ ಕಟ್ತೀನಿ––

ಉಷಾ: (ನಗುತ್ತಲೇ) ಕಟ್ಟಿ–––

ರುದ್ರ: ಕಟ್ಟಿ ಎಲ್ಲರಿಗೂ ತೋರಿಸ್ತೇನಿ–––

ಉಷಾ: ತೋರಿಸಿ––

ರುದ್ರ: (ಸ್ಫೋಟಿಸಿ ಅವಮಾನಿತನಾಗಿ) ನಿನಗೆ ಹ್ಯಂಗೆ ಗೊತ್ತಾಗಬೇಕು? ನಿನಗೆ ಹ್ಯಂಗಾದರೂ ಗೊತ್ತಾಗಬೇಕು? ಇವತ್ತು ಹೋದೀತು ಕತ್ತಲು, ನಾಳೆ ಬೆಳಕು ಹರದು ಎಲ್ಲ ಬೆಳ್ಳಂಬೆಳ್ಳಗಾಗಿ ಎಲ್ಲ ನೋಡೇವು ಅಂತ ಕಾಯ್ತಿದೀವಿ ; ನಾವೆದ್ದೆವೂ ಅಂದ್ರೆ ಕೆಳಗೆ ಹಾಕಿ ಅಮುಕ್ತೀರಿ ನೀವೆಲ್ಲ! ನಿಮ್ಮನ್ನೆಲ್ಲ ಗೊದ್ದ ಹೊಸಕಿದಂಗೆ ಹೊಸಕಿ ಹಾಕ್ತವೆ ನಾವು! ರಕ್ತ ಹೀರಿ---

ಉಷಾ: ರಕ್ತ ಹೀರಿ ! ರಕ್ತ ಹೀರೋ ಜನ ನೋಡಿದ್ದೇನೆ ನಾನೂ! ವಿಭೂತಿ ಕಾವಿ ಹಾಕ್ಕೊಂಡು ಅನ್ನಛತ್ರದ ಹತ್ರ ನಿಂತು ಬಸವಣ್ಣ ಅಂತ ಗೋಳಿಡೋ ಜನ ನೋಡಿದೇನೆ ನಾನು! ಸಂಸ್ಕೃತದ ಮಾತನ್ನೇ ಕನ್ನಡದಲ್ಲಿ ಹೇಳಿಕೊಂಡು ಕುಣಿದಾಡೋ ಜನ ನೋಡಿದ್ದೇನೆ ನಾನು !

ರುದ್ರ: ಇನ್ನಾ ಮಾತು ಬೆಳಸಿದ್ರೇ—

ಉಷಾ: (ಕ್ರಮೇಣ ರೇಗುತ್ತ) ಭಂಡಾರದ ಹಣ ತಗೊಂಡು ಸೋಮಾರಿ ಜಂಗಮ ಜನಕ್ಕೆ ರೊಟ್ಟಿ ಚೂರು ಹಾಕಿದ ಬಸವಣ್ಣ—

ರುದ್ರ: ಉಷಾ!

ಉಷಾ: ತಮ್ಮ ಬಾಲ ಹಿಡಿಯದಿದ್ದವರು ಭವಿಗಳು , ಮೂರ್ಖರು ಅಂತ—

ರುದ್ರ: (ಕೋಪ ಹೆಚ್ಚುತ್ತಿದೆ) ಬಾಯಿ ಮುಚ್ಚು , ಇಲ್ಲದಿದ್ರೆ—

ಉಷಾ: ಜನಕ್ಕೆ ಬೇಕಾದ್ದು ಅನ್ನ, ಬಸವಣ್ಣನವರ ಸಿಹಿಮಾತಲ್ಲ, ಸುಖ--ಬಸವಣ್ಣನವರ ಹೊಸ ಮಂತ್ರಗಳಲ್ಲ---

[ರುದ್ರ ಕೋಪದಿಂದ ಹುಲಿಯಂತೆ ಅವಳಕಡೆ ತೆವಳುತ್ತಿದ್ದಾನೆ. ಉಷಾಗೆ ಕೂಡ ಅವನ ಚಲನೆ ಭಯ ಹುಟ್ಟಿಸಿದೆ. ಅವನ ಕ್ರೌರ್ಯವನ್ನು ಹೊಡೆದೆಬ್ಬಿಸುವುದರಲ್ಲಿ ನಿಜವಾದ ರುದ್ರನನ್ನು ಹೊರ ತರುವುದರಲ್ಲಿ ಯಶಸ್ಸು ಗಳಿಸಿದ್ದಾಳೆ ; ಈ ಕ್ಷಣದಲ್ಲಿ ಆತ ಬಸವಣ್ಣನವರ ಸಿದ್ಧಾಂತದಿಂದ ದೂರ]

ಉಷಾ: (ತಾತ್ಸಾರದಿಂದ) ಯಾಕೆ ತೆವಳ್ತಿ?

[ಮೌನ]

ಏನು ಮಾಡ್ತಿ?

[ಮೌನ]

ನಿನ್ನಿಂದ ನನ್ನ ಮುಟ್ಟೋಕ್ಕಾಗಲ್ಲ.

[ಈಗ ತಮ್ಮಟೆಯ ಸದ್ದು ಆರಂಭವಾಗಿದೆ. ಕಾಡುಪ್ರಾಣಿಗಳ ಆರ್ಭಟದಂತೆ ಗದ್ದಲ. ರುದ್ರ ಬೆವತಿದ್ದಾನೆ ; ಉಷಾ ಕೊಂಚ ದೂರ ಸರಿಯುತ್ತಾಳೆ--ಬಂಡೆಯ ಮೇಲೆಯೇ]

ರುದ್ರ: (ಕ್ರೌರ್ಯದಿಂದ ) ಯಾಕೆ , ಯಾಕೆ?

ಉಷಾ: (ಗಂಭೀರವಾಗಿ, ಸ್ಪಷ್ಟವಾಗಿ, ಸವಾಲಾಗಿ) ನೀನು ಹೊಲೆಯ.

[ಮೌನ]

ನಾನು ಬ್ರಾಹ್ಮಣ ಸ್ತ್ರೀ.

ರುದ್ರ: (ಹಿಂಜರಿದವನು ಸಿಟ್ಟಿನಿಂದ) ಕೊಳಕುಮುಂಡೆ!

[ಎಂದು ಅವಳ ಅಡಿಯ ಬೆರಳು ಹಿಡಿದುಕೊಳ್ಳುವನು. ಉಷಾ ಎಳೆದುಕೊಂಡರೆ ಬಿಡುವುದಿಲ್ಲ]

ಉಷಾ: (ಖಡಾಖಂಡಿತ ಎಂಬಂತೆ) ಬಿಡು.

ರುದ್ರ: ದರಿದ್ರವೇ—

[ಎಂದು ಅವಳ ಕಾಲು ಹಿಡಿದು ಎಳೆಯುವವನು, ಈಗಾಗಲೇ ತಮ್ಮಟೆಯ ಸದ್ದು ಹೆಚ್ಚಾಗುತ್ತಿದೆ. ನೆಲಕ್ಕೆ ಬಿದ್ದ ಅವಳ ಕಾಲುಗಳನ್ನು ಅಪ್ಪಿದೊಡನೆ ಚೀರುವಳು. ತಮ್ಮಟೆಯ ಸದ್ದು ಹೆಚ್ಚಾದಂತೆ ಕೇವಲ ಏದುವ ಸದ್ದು-- ಪ್ರೇಕ್ಷಕರಿಗೆ ಕೇಳಿಸಬಹುದು. ಕೇಳಿಸದಿರಬಹುದು. ತಿಂದು ಹಾಕುವವನಂತೆ ಅವಳನ್ನು ಪೂರ್ತಿ ಬಳಸುವನು. ಕ್ರಮೇಣ ಕತ್ತಲು ಆವರಿಸುವುದರೊಂದಿಗೆ ತಮ್ಮಟೆಯ ಗಟ್ಟಿ ಸದ್ದು, ಕತ್ತಲು ಕಡಿಮೆಯಾಗುತ್ತದೆ. ಅದರೊಂದಿಗೆ ತಮ್ಮಟೆಯ ಸದ್ದೂ ಕರಗುತ್ತದೆ.]

[ಬೆಳಕಿನಲ್ಲಿ ಮೂರು ದಿಕ್ಕಿನಿಂದ ಸುಮಾ,ರಮಾ, ಉಮಾ ಪ್ರವೇಶ. ವಿಚಿತ್ರ ಅನುಭವಕ್ಕೆ ಸಿಕ್ಕಂತೆ ಮೂವರೂ ದಿಗ್ಭ್ರಾಂತರಾಗಿದ್ದಾರೆ, ರುದ್ರ, ಉಷಾ ಈಗ ರಂಗದ ಮೇಲಿಲ್ಲ, ಮೌನ. ಅವರು ಮಾತು ಆರಂಭಿಸುತ್ತಿದ್ದಂತೆ ಉಜ್ಜನ ಪ್ರವೇಶ--ಸರಿತೋರಿದರೆ ತೆಳು ತಮ್ಮಟೆಯ ಸದ್ದಿನೊಂದಿಗೆ]

ಉಮಾ: (ಕರೆಯುತ್ತ) ಉಷಾ! ಏ ಉಷಾ !

ರಮಾ: ಉಷಾ!

ಉಜ್ಜ: (ಪ್ರವೇಶಿಸಿ) ಅಲ್ಲ, ನಮ್ಮ ಹುಡುಗ ಎಲ್ಲೋದಾಂತ! ರುದ್ರೂ!

[ಆ ಮೂವರೂ ಮಾತಾಡುವುದಿಲ್ಲ ; ಉಷಾ, ರುದ್ರರಿಂದ ಉತ್ತರವಿಲ್ಲ]

ಬ್ಯಾಡ ಕಣೋ ಹೊನ್ನಾಳಿ ಅಗಸ ಕೆಟ್ಟೋಗ್ತಿ ಅಂದೆ. ನನ್ನ ಮತ್ಯಾಕೆ ಕೇಳ್ತಾನು ? ಅಂಥ ಚೆಲೊತ್ತಿನ ಜಾಜಿ ಹೂನಂಥ ಕೂಸು ತಡಕೊಂಡಾತ!

[ಹುಡುಗಿಯರನ್ನು ಕುರಿತು]

ಏನ್ರವ್ವ, ಏನು ಸಮಾಚಾರ? ನೀರು ತರ್ತ, ಅಡುಗೆ ಮಾಡ್ತ, ಜಗಳ ಕಾಯ್ತ ಹಿಂಗೇ ಇದ್ದು ಬಿಡ್ತೀರೋ, ಏನಾರ ಮದುವಿ ಗಿದುವಿ?

ಉಮಾ: ಮುದಿಯಾ, ನಿನ್ನ ದಾರಿ ನೀನು ನೋಡಿಕೋ---

ರಮಾ: ನಮ್ಮ ಮದುವೆ ತಂಟೆ ಯಾಕೆ ಇವನಿಗೆ?

ಸುಮಾ: (ಕರೆಯುತ್ತ) ಉಷಾ!

ಉಜ್ಜ: ಅದೇನವ್ವ ನಾನಂತಿರೋದು . ಅದೇನೋ ಅಂತಾರಲ್ಲ ಹೊಲೇರ ಕೈಗೆ ಮೈಕೊಡಬ್ಯಾಡ, ಬ್ರಾಂಬ್ರ ಕೈಗೆ ಮನಸ್ ಕೊಡಬ್ಯಾಡ ಅಂತ----

ಉಮಾ: ಲೇ ಹೊಲೆಯಾ, ನೀನು ನಿನ್ನ ದಾರಿ ಹಿಡಿದೆಯೋ ಸರಿ, ಇಲ್ಲದಿದ್ರೆ ಬಿಜ್ಜಳರಿಗೆ ಹೇಳಿ ಆ ರುದ್ರನ ಜೊತೀಗೆ ನಿನ್ನ ಚರ್ಮಾನೂ---

ಉಜ್ಜ: ಬಿಜ್ಜಳರು ಯಾವಾಗಿಂದ ಚರ್ಮ ಸುಲಿಯಾಕೆ ಹತ್ತಿದ್ದವ್ವ? ಅದು ನನ್ನ

ಕೆಲಸ! ಹೊಲೇರ ಕೆಲಸ ! ನನ್ನ ಮಗ ರುದ್ರ---

ರಮಾ/ಸುಮಾ: ಇವನ ಮಗಂತಲ್ಲೇ---

ಉಮಾ: ಬರ್ರೇ ಆ ಮುದಿಗೊಡ್ಡಿನ ಹತ್ರ ಏನು?

ಉಜ್ಜ: (ಅವರು ಹೋಗಲಿದ್ದಾಗ) ಆ, ಗೊಡ್ಡಾ ನಾನು ! ಮುದಿಯನಾ ನಾನು! ಏನ್ರವ್ವೋ ಒಂಚೂರು ನಿಲ್ರಿ.

[ನಿಂತಾಗ]

ನನ್ನ ಮಗ ಎಲ್ಲೋದ ಹೇಳ್ರಿ. ಯಾಕಪ್ಪ ಈ ಸಾವಾಸ ಅಂತ ನಾನು ಅತ್ತಲಾಗೆ ಹೋಗಿ ಅಡಿಕೆ ಕಡೀತ ನಿಂತಿದ್ದಂಗೆ ಕಾಣ್ತಿ. ಹೇಳ್ರವ್ವ , ಹುಡುಗಿ ಚೀರತಲ್ಲ ಅಂತ ಬಂದ್ರೆ (ನಗುತ್ತ) ಪತ್ತೇನೇ ಇಲ್ಲ. ದೊಡ್ಡಾಟದ ದೇವರಂಗೆ ಮಂಗಮಾಯ!

ಉಮಾ: ನಿನ್ನ ಹಾಳುಹರಟೆ ಬೇಕಿಲ್ಲ.

ರಮಾ: ಬರ್ರೇ—(ಹೋಗುವರು)

ಉಜ್ಜ: (ಅವರತ್ತ ನೋಡುತ್ತಾ) ಅಲ್ಲ, ಈ ಬ್ರಾಂಬ್ರ ಹೆಂಗಸರಿಗೆ ಏನು ಧಿಮಾಕು—ಗೊಡ್ಡು ನಾನು? ರುದ್ರನ ಹುಟ್ಟಿಸಿರೋನು ಗೊಡ್ಡ? ಕಿಸಕಿಸ ಮಾತಾಡಿಕೋತ ಹೋಗೇ ಬಿಡ್ತವೆ ಈ ಹಾಳು ಹೆಂಗಸ್ರು. ಬಿಜ್ಜಳರಾಜರ ಹತ್ರ ಏನು ಹೇಳ್ತವೋ!

ನೂರುತಲೆ ಮಾರವ್ವಂಗೆ ಕೊಟ್ಟೆ ಕೋಳಿ---

ನಾ ಕೊಟ್ಟೇ ಕೋಳಿ---

ಹೊಲೇರುಜ್ಜ ನಾನ್ಕಣವ್ವ ಹೇಳಿ ಕೇಳಿ,

ನಾ ಹೇಳಿ ಕೇಳಿ----

# ಬಿಸಿಎ ನಾಲ್ಕನೇ ಸೆಮಿಸ್ಟರ್ ಮಾದರಿ ಪ್ರಶ್ನೆಪತ್ರಿಕೆ

**ಸಮಯ: 2 ಗಂಟೆ 30 ನಿಮಿಷ** **ಅಂಕಗಳು : 60**

| ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ 2x5= 10

೧ ಪ್ರಪಂಚವೇ ಪುಟ್ಟ ಮನೆಯಂತಾಗಿದೆ ಎಂದು ಲೇಖಕರು ಹೇಳಲು ಕಾರಣವೇನು ?

೨ ಭಾಗವಂತಿಕೆ ಪದಗಳಲ್ಲಿ ರಾಮನ ವರ್ಣನೆ ಹೇಗೆ ಮೂಡಿಬಂದಿದೆ?

೩ ಭೂಮಂಡಲವನ್ನೆಲ್ಲ ಆವರಿಸಿರುವ ಸಮಸ್ಯೆಗಳು ಯಾವುವು?

೪ ಮಾವ ಕವಯಿತ್ರಿಯಲ್ಲಿ ಬೆರಗು ಮೂಡಿಸಿದ ಬಗೆಯನ್ನು ತಿಳಿಸಿ.

೫ ಪರ್ವತಿ ಯಾರು?

೬ ಕುಳ್ಳು ಎಂದರೇನು?

೭ ಸುಬ್ಬಣ್ಣಗೌಡರ ಬಗ್ಗೆ ಬರೆಯಿರಿ.

೮ ಒಲಿಂಪಿಕ್ಸ ನಲ್ಲಿ ಜಸ್ಸಿ ಓವೆನ್ಸ್ ಸಾಧನೆ ಏನು?

|| ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ 5X4=20

೧ ನಮ್ಮದು ಅಲೆಮಾರಿ ಸಂಸ್ಕೃತಿ ಎಂದು ಲೇಖಕರು ಹೇಳಲು ಕಾರಣವೇನು?

೨ ಒಲಿಂಪಿಕ್ಸ್ ರೋಮಾಂಚನವನ್ನು ಲೇಖಕರು ವರ್ಣಿಸಿರುವ ಬಗೆ ಹೇಗೆ?

೩ ಕಾಲಾಂತರದಲ್ಲಿ ಅಮ್ಮನ ಗುಡಿ ಬದಲಾದ ಬಗೆಯನ್ನು ವಿವರಿಸಿ

೪ ಮಳೆಯ ಅನಿಶ್ಚಿತತೆಯ ಬಗ್ಗೆ ಜನಪದರ ಅಭಿಪ್ರಾಯವೇನು?

೫ ರಾಜೇಂದ್ರ ಚೆನ್ನಿ ಹೇಳಿರುವ ಧಾರವಾಡದ ಪಡ್ಡೆ ದಿನಗಳು ಹೇಗಿದ್ದವು?

೬ ಒಲುಮೆಹೊನಲಿಗಿರುವ ತಡೆಗಳಾವುವು? ವಿವರಿಸಿ.

|||ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ 10X2=20

೧ ಒಲಿಂಪಿಕ್ಸ್ ರೋಮಾಂಚನ ನಿರಂತರವಾಗಿ ಮುಂದುವರಿದಿರುವ ಬಗೆಯನ್ನು ವಿವರಿಸಿ.

೨ ಏಕತಾನದ ಬೆಳವಣಿಗೆ ಹಾಗೂ ಜೈವಿಕ ಬೆಳವಣಿಗೆಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

೩ ಮನುವಿನ ರಾಣಿ ಯಾರು? ಅವಳ ಬದುಕಿನ ದುರಂತವನ್ನು ಕುರಿತು ಬರೆಯಿರಿ.

೪ ಸುಬ್ಬಣ್ಣಗೌಡರ ಕುಟುಂಬ ಪ್ರವಾಹದ ಸುಳಿಯಿಂದ ಪಾರಾದ ಬಗೆ ಹೇಗೆ?

|V ಕೆಳಗಿನ ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:– 5X2=10

೧ ರೆಡ್ ಇಂಡಿಯನ್ನರಿಗೆ ಗಾಳಿ ಪೂಜ್ಯವಾದದ್ದು ಹೇಗೆ? ವಿವರಿಸಿ.

೨ ಬೆಂಗಳೂರು ನಗರ ಬೆಳೆದ ವೇಗವನ್ನು ಲೇಖಕರು ವಿವರಿಸಿರುವ ಬಗೆ ಹೇಗೆ?

೩ ಬದುಕಿನೊಂದಿಗೆ ಬೆಸೆದಿರುವ ಹೆಣ್ಣಿನ ಭಾವನೆಗಳು ಮಾರಾಟದ ಸರಕುಗಳಲ್ಲ ಎಂಬುದು 'ಹಾಗಾದರೆ ಮಾರಿಬಿಡಿ' ಪದ್ಯದಲ್ಲಿ ಹೇಗೆ ನಿರೂಪಿತವಾಗಿದೆ?

೪ ಉಷಾ ರುದ್ರರ ಪ್ರೇಮ ಪ್ರಕರಣವನ್ನು ಕುರಿತು ಬರೆಯಿರಿ.